ನಮ್ಮ ಸಾಂಸ್ಕೃತಿಕ ಚಿಂತಕರು

ಹುಟ್ಟು ಹೋರಾಟಗಾರ

ವಿ.ಎನ್.ಪಾಟೀಲ





ಲೇಖಕರು :

ಪಂಚಾಕ್ಷರಿ ಪುಣ್ಯಶೆಟ್ಟಿ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ.

Email : kasapabidar@gmail.com - www.kasapabidar.in





ಪಂಚಾಕ್ಷರಿ ಪುಣ್ಯಶೆಟ್ಟಿ

ಸರಳ, ಸೌಜನ್ಯದ ಸಾಕಾರ ಮೂರ್ತಿಗಳು, ಕಾಯಕನಿಷ್ಠೆ ದಾಸೋಹ ಭಾವ, ಜೀವ ಕಾರುಣ್ಯದ ಅಂತಃಕರಣ ಹೊಂದಿರುವ **ಪಂಚಾಕ್ಷರಿ ಪುಣ್ಯಶೆಟ್ಟಿ**ಯವರು, ಕನ್ನಡತ್ವ ಹಾಗೂ ಬಸವ ತತ್ವದ ವಿಷಯ ಬಂದಾಗ ಅಷ್ಟೇ ನಿಷ್ಠುರವಾದಿಗಳು ಹೌದು. ಮಕ್ಕಳ ಮುಗ್ಧತೆ, ಯುವಕರ ಉತ್ಸಾಹ, ಮಾಗಿದ ಜೀವನಾನುಭ ಅಬಾಲ ವೃದ್ದರವರೆಗೆ ಇಷ್ಟವಾಗುವ ಗುಣಗಳ ಹೊಂದಿದ ಇವರು ಕಲಬುರ್ಗಿ ಜಿಲ್ಲೆಯ ಐನೂಲಿ ಗ್ರಾಮದ ಪ್ರತಿಷ್ಠಿತ 'ಪುಣ್ಯಶೆಟ್ಟಿ ಕುಟುಂಬದಲ್ಲಿ ಶ್ರೀಮತಿ ನೀಲಮ್ಮ ಶ್ರೀ ಶಿವರುದ್ರಪ್ಪರವರ ಮಗನಾಗಿ ೦೩-೦೨-೧೯೩ ರಲ್ಲಿ ಜನಿಸಿದರೂ ಜೀವಮಾನದ ಎಲ್ಲಾ ಅವಧಿ ಕಳೆಯುತ್ತಿರುವುದು ಮಾತ್ರ ಬೀದರನಲ್ಲಿ ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಕುವೆಂಪು ಕನ್ನಡ ಸಂಘದ ಅಧ್ಯಕ್ಷರಾಗಿ ಕನ್ನಡ ನಾಡು-ನುಡಿಗೆ ಸಲ್ಲಿಸಿದ ಸೇವೆ ಅಪೂರ್ವ. ವೃತ್ತಿಯಿಂದ ಶಿಕ್ಷಕರಾಗಿದ್ದರು. ಪ್ರವೃತ್ತಿಯಿಂದ ಸಾಹಿತಿಗಳು. ಇವರ ಸಾಧನೆಗೆ ಸದಾ ಬೆನ್ನೆಲುಬಾಗಿ ನಿಂತವರು ಇವರ ಧರ್ಮಪತ್ನಿ ಶ್ರೀಮತಿ ಸಂಗಮ್ಮ ಪುಣ್ಯಶೆಟ್ಟಿ ಹಾಗೂ ಕುಟುಂಬದವರು.

ಜೀವನಚರಿತ್ರೆಗಳನ್ನು ಬರೆಯುವುದರಲ್ಲಿ ಪುಣ್ಯಶೆಟ್ಟಿಯವರು ಸಿದ್ಧಹಸ್ತರು. ಸಮಾಜಕ್ಕಾಗಿಯೇ ಬದುಕು ಮೀಸಲಿಟ್ಟು ಸಮಾಜದಿಂದ ಬಹುತೇಕ ನಿರ್ಲಕ್ಷ್ಯಕ್ಕೆ ಒಳಗಾದವರು ಇವರ ಕೃತಿಯಲ್ಲಿ ಅಜರಾಮರರಾಗಿದ್ದಾರೆ. 'ಭಾಲ್ಕಿಯ ಪಟ್ಟದ್ದೇವರು', 'ಬಸವರಾಜ ಹುಡಗಿ', 'ಬಸವಲಿಂಗಪ್ಪ ಕೊಂಡಾ', 'ವೈಜಿನಾಥ ಪಾಟೀಲ', 'ಚಕ್ರಕೋಟಿ ಬಾಯವ್ವ', 'ಮಹಾದೇವಪ್ಪಾ ಮೀಸೆ', 'ಸಜ್ಜನರ ಸಂಗದಲ್ಲಿ', 'ಅಪ್ರತಿಮ ದೇಶಭಕ್ತ ಗಂಡುಗಲಿ ಬ್ರಿಜ್‌ಪಾಲಸಿಂಗ್', 'ಬಿ.ಟಿ.ಸಾಸನೂರ', ಐನೂಲಿ ವಿರೂಪಾಕ್ಷಯ್ಯನವರು 'ಸಂಗಮ್ಮ ಲೊಂಡೆ', ಇವರ ಪ್ರಮುಖ ಜೀವನ ಚರಿತ್ರೆಗಳು. 'ಚಂದ್ರಶೇಖರ ಆಜಾದ' ನಾಟಕವಾದರೆ 'ಕಲ್ಯಾಣದಿಂದ ಕಾಶ್ಮೀರಕ್ಕೆ', 'ಬೀದರಿನಿಂದ ಸಿಂಗಾಪುರಕ್ಕೆ' ಪ್ರವಾಸ ಕಥನಗಳಾಗಿವೆ. ಸಾಹಿತ್ಯ ಲೋಕಕ್ಕೆ ಅಪರೂಪದ ಕೃತಿಗಳನ್ನು ನೀಡುವ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

ಇವರ ಸಾಹಿತ್ಯ ಸೇವೆ, ಸಾಧನೆಗಾಗಿ ಬೀದರ ಜಿಲ್ಲಾ ಒಂಬತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನ ಹಾಗೂ ಚಿಂಚೋಳಿ ತಾಲ್ಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ. ಅಖಿಲ ಭಾರತ ೭೫ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸನ್ಮಾನ, ಬಸವ ಧರ್ಮ ಟ್ರಸ್ಟ್ ಅನುಭವ ಮಂಟಪ ಬಸವಕಲ್ಯಾಣದ 'ಜಯದೇವಿ ತಾಯಿ ಲಿಗಾಡೆ ರಾಷ್ಟ್ರೀಯ ಪುರಸ್ಕಾರ' ಮೊದಲಾದ ಗೌರವಗಳು ಸಂದಿವೆ. ಇದೀಗ **'ಹುಟ್ಟು ಹೋರಾಟಗಾರ ವಿ.ಎನ್.ಪಾಟೀಲ'** ಕೃತಿ ಸಹೃದಯರ ಕೈ ಸೇರಲಿದ್ದು ಇವರಿಂದ ಇನ್ನಷ್ಟು ಕೃತಿಗಳು ಹೊರಬರಲೆಂದು ಶುಭ ಹಾರೈಸುವೆ.

*** ವಿದ್ಯಾವತಿ ಬಲ್ಲೂರ, ಬೀದರ**

ಬೀದರ ಜಿಲ್ಲಾ ೧೭ನೇ ಕನ್ನಡ ಸಾಹಿತ್ಯ ಸಮ್ಮೇಳನ ನಿಮಿತ್ತ
ಸಾಂಸ್ಕೃತಿಕ ಚಿಂತಕರು ಮಾಲಿಕೆ

ಹುಟ್ಟು ಹೋರಾಟಗಾರ
ವಿ.ಎನ್. ಪಾಟೀಲ

ಲೇಖಕರು

ಪಂಚಾಕ್ಷರಿ ಪುಣ್ಯಶೆಟ್ಟಿ

ಬೀದರ

ಪ್ರಕಾಶಕರು

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ


೨೦೨೦

ಹುಟ್ಟು ಹೋರಾಟಗಾರ ವಿ.ಎನ್. ಪಾಟೀಲ
ಲೇ: ಪಂಚಾಕ್ಷರಿ ಪುಣ್ಯಶೆಟ್ಟಿ, ಕುಂಬಾರವಾಡ, ಬೀದರ. -೫೮೫೪೦೩.
ಪ್ರಕಾಶಕರು : **ಸುರೇಶ ಚನಶೆಟ್ಟಿ,**
ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ. ಮೊ: ೯೯೮೬೭೯೨೩೨೩
E-mail:kasapabidar@gmail.com, web: www.kasapabidar.in
ಪ್ರಥಮ ಮುದ್ರಣ : ೨೦೨೦
ಹಕ್ಕುಗಳು : ಲೇಖಕರದ್ದು
ಪುಟಗಳು : ೨೦+೧೧೬=೧೩೬
ಬೆಲೆ : ೧೦೦/-
ಅಕ್ಷರ ಜೋಡಣೆ : ಪಾಟೀಲ ಕಂಪ್ಯೂಟರ್ಸ್, ಬೀದರ.
ಪುಸ್ತಕ ವಿನ್ಯಾಸ : ಆರ್.ವ್ಹಿ. ಕುಂಬಾರ, ಬೀದರ.
ಮುಖಪುಟ ವಿನ್ಯಾಸ : ಅಕ್ಷಯ ಗ್ರಾಫಿಕ್ಸ್, ಬೀದರ
ಮುದ್ರಕರು: ವಿಶ್ವಾಸ ಪ್ರೆಸ್ ಬೆಂಗಳೂರು

ವಿ.ಸೂ. : ಈ ಕೃತಿಯಲ್ಲಿ ಬರುವ ಅಭಿಪ್ರಾಯಗಳು ಹಾಗೂ ವಿವರಗಳು ಲೇಖಕರಿಗೆ ಸಂಬಂಧಿಸಿದವುಗಳಾಗಿರುತ್ತವೆ. -ಪ್ರಕಾಶಕರು

ಪುಸ್ತಕ ಪ್ರಕಟಣೆ ಸಲಹಾ ಸಮಿತಿ

ಶ್ರೀ ಸುರೇಶ ಚನಶೆಟ್ಟಿ, ಅಧ್ಯಕ್ಷರು, ಜಿಲ್ಲಾ ಕಸಾಪ, ಬೀದರ
ಪೂಜ್ಯಶ್ರೀ ಅಕ್ಕ ಅನ್ನಪೂರ್ಣ, ಬೀದರ ಜಿಲ್ಲಾ ೧೭ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು
ಶ್ರೀ ಪಂಚಾಕ್ಷರಿ ಪುಣ್ಯಶೆಟ್ಟಿ, ಗೌರವಾಧ್ಯಕ್ಷರು, ಜಿಲ್ಲಾ ಕಸಾಪ, ಬೀದರ
ಶ್ರೀ ಎಂ.ಜಿ. ದೇಶಪಾಂಡೆ, ಹಿರಿಯ ಸಾಹಿತಿಗಳು, ಬೀದರ
ಶ್ರೀ ಎಸ್.ಎಂ. ಜನವಾಡಕರ್, ಹಿರಿಯ ಸಾಹಿತಿಗಳು, ಬೀದರ
ಶ್ರೀಮತಿ ಶಶಿಕಲಾ ವಸ್ತ್ರದ, ಹಿರಿಯ ಸಾಹಿತಿಗಳು, ಬೀದರ
ಡಾ. ಶಿವಗಂಗಾ ರುಮ್ಮಾ, ಮಹಿಳಾ ಸಾಹಿತಿಗಳು, ಬೀದರ
ಡಾ. ಬಸವರಾಜ ಬಲ್ಲೂರ, ಗೌ. ಕಾರ್ಯದರ್ಶಿ, ಜಿಲ್ಲಾ ಕಸಾಪ, ಬೀದರ
ಶ್ರೀ ಶಿವಕುಮಾರ ಕಟ್ಟೆ, ಸಾಹಿತಿಗಳು ಹಾಗೂ ಗಡಿ ಪ್ರತಿನಿಧಿ, ಜಿಲ್ಲಾ ಕಸಾಪ, ಬೀದರ
ಶ್ರೀ ಎಂ.ಎಸ್. ಮನೋಹರ, ಸಾಹಿತಿಗಳು ಹಾಗೂ ಅಧ್ಯಕ್ಷರು ತಾಲ್ಲೂಕು ಕಸಾಪ, ಬೀದರ
ಶ್ರೀ ಶಿವಶಂಕರ ಟೋಕರೆ, ಸಂಚಾಲಕರು ಜಿಲ್ಲಾ ಕಸಾಪ, ಬೀದರ.
ಪ್ರೊ. ಜಗನ್ನಾಥ ಕಮಲಾಪುರೆ, ಗೌರವ ಸಲಹೆಗಾರು, ಜಿಲ್ಲಾ ಕಸಾಪ, ಬೀದರ.



ವಿ.ಎನ್. ಪಾಟೀಲ ದಂಪತಿಗಳು

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬೀದರ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಸುರೇಶ ಚನಶೆಟ್ಟಿ

ಗೌರವಾಧ್ಯಕ್ಷರು
ಪಂಚಾಕ್ಷರಿ ಪುಣ್ಯಶೆಟ್ಟಿ

ಗೌರವ ಕಾರ್ಯದರ್ಶಿ
ಡಾ.ಬಸವರಾಜ ಬಲ್ಲೂರ
ಡಾ. ರಾಜಕುಮಾರ ಹೆಬ್ಬಾಳೆ

ಗೌರವ ಕೋಶಾಧ್ಯಕ್ಷರು
ಟಿ.ಎಂ.ಮಚ್ಚೆ

ಉಪಾಧ್ಯಕ್ಷರು
ಜಯದೇವಿ ಯದಲಾಪೂರೆ
ವಿಜಯಕುಮಾರ ಗೌರೆ,
ವಿರುಪಾಕ್ಷ ಗಾದಗಿ

ಮಹಿಳಾ ಪ್ರತಿನಿಧಿ
ಕಸ್ತೂರಿ ಪಟಪಳ್ಳಿ

ಮಹಿಳಾ ಸಾಹಿತಿ
ಮೇನಕಾ ಪಾಟೀಲ

ಮಹಿಳಾ ಘಟಕ ಅಧ್ಯಕ್ಷರು
ಜಯಶ್ರೀ ಸುಕಾಲೆ

ಮಕ್ಕಳ ಘಟಕ ಅಧ್ಯಕ್ಷರು
ರಜಿಯಾ ಬಳಬಟ್ಟಿ

ಪರಿಶಿಷ್ಟ ಜಾತಿ ಪ್ರತಿನಿಧಿ
ಡಾ.ಮಲ್ಲಿಕಾರ್ಜುನ ನಿಂಗದಳ್ಳಿ

ಪರಿಶಿಷ್ಟ ಪಂಗಡ ಪ್ರತಿನಿಧಿ
ಡಾ. ರಾಜಕುಮಾರ ಅಲ್ಲೂರೆ

ಸಂಘ ಸಂಸ್ಥೆ ಪ್ರತಿನಿಧಿ
ಸುಬ್ರಮ್ಹಣ್ಯ ಪ್ರಭು

ಜಿಲ್ಲಾ ವಾರ್ತಾಧಿಕಾರಿ
ಗವಿಸಿದ್ದಪ್ಪ ಹೊಸಮನಿ

ಕನ್ನಡ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೆಶಕರು
ಸಿದ್ರಾಮ ಸಿಂಧೆ

ನಿಕಟಪೂರ್ವ ಅಧ್ಯಕ್ಷರು
ಪ್ರೊ. ಸಿದ್ರಾಮಪ್ಪ ಮಾಸಿಮಾಡೆ

ಜಿಲ್ಲಾ ಶಿಕ್ಷಣಾಧಿಕಾರಿ
ಶಿವಕುಮಾರ ಸ್ವಾಮಿ

ಗಡಿ ಪ್ರತಿನಿಧಿ
ಪ್ರೊ. ಶಿವಕುಮಾರ ಕಟ್ಟೆ
ವಸಂತ ಹುನಸನಾಳೆ,

ಅಧ್ಯಕ್ಷರು

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು

ಎಂ. ಎಸ್. ಮನೋಹರ, ಬೀದರ

ಜಗನ್ನಾಥ ಮೂಲಗೆ, ಔರಾದ

ಸಚ್ಚಿದಾನಂದ ಮಠಪತಿ, ಹುಮನಾಬಾದ

ಡಾ. ರುದ್ರಮಣಿ ಮಠಪತಿ, ಬಸವಕಲ್ಯಾಣ

ಶಶಿಧರ ಕೊಸಂಬೆ ಭಾಲ್ಕಿ

ಪ್ರಶಾಂತ ಮಠಪತಿ ಕಮಾಲನಗರ

ಡಾ. ಶಿವಲೀಲಾ ಮಠಪತಿ, ಹುಲಸೂರ

ಅನಿಲಕುಮಾರ ಸಿಂಧೆ, ಚಿಟಗುಪ್ಪ

ಸಂಘಟನಾ ಕಾರ್ಯದರ್ಶಿ

ಉಮಾಕಾಂತ ವಾರದ,

ಶಾಂತಲಿಂಗ ಮಠಪತಿ

ವೀರಶೆಟ್ಟಿ ಪಟ್ನೆ

ಸಂಚಾಲಕರು

ಶಿವಶಂಕರ ಟೋಕರೆ

ಗೌರವ ಸಲಹೆಗಾರರು

ಕಾಶೆಪ್ಪಾ ಬಾಲಕಿಲೆ

ಶರಣಪ್ಪಾ ಮಿಠಾರೆ

ವೈಜಿನಾಥ ಕಮಠಾಣೆ

ಬಸವರಾಜ ಧನ್ನೂರ

ಪ್ರೊ. ಎಸ್. ವಿ. ಕಲ್ಮಠ

ಝಾಕೀರ ಹುಸೇನ್

ಡಾ.ಜಗನ್ನಾಥ ಹೆಬ್ಬಾಳೆ

ಪ್ರೊ. ಶಂಭುಲಿಂಗ ಕಾಮಣ್ಣಾ

ಎಸ.ಎಮ್.ಜನವಾಡಕರ್

ಡಾ.ಮನ್ಮಥ ಡೋಳೆ

ಶಿವಯ್ಯಾ ಸ್ವಾಮಿ

ವಿಶೇಷ ಆಹ್ವಾನಿತರು

ರಾಜೆಂದ್ರಕುಮಾರ ಗಂದಗೆ

ಡಾ.ಸಿ ಆನಂದರಾವ

ಬಾಲಾಜಿ ಬಿರಾದಾರ

ಪಾಂಡುರಂಗ ಬೆಲ್ದಾರ್

ರವೀಂದ್ರ ರೆಡ್ಡಿ

ಸಿದ್ಧಾರೂಢ ಭಾಲ್ಕೆ

ಡಾ. ಬಂಡಯ್ಯಾ ಸ್ವಾಮಿ

ಕಾರ್ಯಕಾರಿ ಸದಸ್ಯರು

ಜಗನ್ನಾಥಕಮಲಾಪೂರೆ

ಯೋಗೇಶ ಮಠ

ಸಚೀನ ವಿಶ್ವಕರ್ಮ

ದೇವೆಂದ್ರ ಕರಂಜೆ

ಅನೀಲಕುಮಾರ ದೇಶಮುಖ

ಸಿದ್ದಾರೂಢ ಕಂದಗೂಳ

ಶಿವಾನಂದ ಪಾಟೀಲ

ಗಿರಿರಾಜ ವಾಲೆ

ಆನಂದ ಪಾಟೀಲ

ಮುನ್ನುಡಿ

ಸಾಹಿತ್ಯವು ಯಾವಾಗಲೂ ಒಂದು ವಿಶಿಷ್ಟ ಅನುಭವ ಪರಂಪರೆಯನ್ನು ನಮ್ಮ ಮುಂದೆ ತಂದು ನಿಲ್ಲಿಸುತ್ತದೆ. ಒಂದು ಕೃತಿಯನ್ನು ಓದುತ್ತಿದ್ದಂತೆ ಅದರ ಅನುಭವಗಳು ನಮ್ಮೊಳಗೆ ಸೇರಿಕೊಳ್ಳುತ್ತ, ಅಲ್ಲಿನ ಅನುಭವ ಸಾರ್ವತ್ರಿಕರಣಗೊಳ್ಳುತ್ತ ಹೋಗುತ್ತದೆ. ಸಾಹಿತ್ಯಕೃತಿ ನಮ್ಮನ್ನು ತಟ್ಟಬೇಕು ಎಂದರೆ ಅಲ್ಲಿನ ಅನುಭವಗಳು ಗಾಢವಾಗಿರಬೇಕು, ಅಲ್ಲಿನ ಸೃಜನಶೀಲತೆಯ ಸೆಲೆಗಳು ನಮ್ಮನ್ನು ಸೆಳೆಯುವಂತೆ ಇರಬೇಕು. ಆ ಕೃತಿ ತನ್ನ ಸುತ್ತಲಿನ ಜೀವನವನ್ನು, ಪರಿಕರಗಳನ್ನು ಒಳಗೊಂಡಿದ್ದಾಗ ಇದು ಸಾಧ್ಯವಾಗುತ್ತದೆ.

ತಲೆ ತಲಾಂತರಗಳಿಂದ ಕೆಲವರು ನಾಡು, ನುಡಿ, ಕಲೆ, ಸಾಹಿತ್ಯ, ಸಂಸ್ಕೃತಿ, ಜಲ, ಜನ ಸಮುದಾಯವನ್ನು ತಮ್ಮದೇ ರೀತಿಯಲ್ಲಿ ಶ್ರೀಮಂತಗೊಳಿಸಲು ಶ್ರಮಿಸಿರುತ್ತಾರೆ. ಅವರ ಶ್ರಮ ಮುಂದಿನ ತಲೆಮಾರಿಗೆ ತಿಳಿಯದೇ ಹೋಗಬಾರದು. ಜನ ಸಮುದಾಯದ ಶ್ರೇಯಸ್ಸಿಗೆ ಅವರುಕೊಟ್ಟ ಕೊಡುಗೆಯನ್ನು ಜನ ನೆನಪಿಸಿಕೊಳ್ಳುವಂತೆ ಆಗಬೇಕು, ಹಾಗೆ ನೆನಪಿಸಿಕೊಂಡರೆ ಅದು ಒಂದು ಸಮುದಾಯದಲ್ಲಿ ಇರುವ, ಇರಬೇಕಾದ ಕೃತಜ್ಞತೆಯ ಕುರುಹು.

ಬೀದರ್ ಜಿಲ್ಲೆಯಲ್ಲಿ ಅಂಥ ಹಿರಿಯರ ಕೊಡುಗೆಯನ್ನು ದಾಖಲು ಮಾಡುವ ಕಾರ್ಯ ನಡೆದು ಅದು ಇದೀಗ ಕಾರ್ಯರೂಪಕ್ಕೆ ಬಂದಿರುವುದು ಶ್ಲಾಘನೀಯ ಕೆಲಸ. ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಘಟಕದ ಅಧ್ಯಕ್ಷರಾದ ಶ್ರೀ ಸುರೇಶ ಚನಶೆಟ್ಟಿಯವರಿಗೆ ಇಂಥ ವಿಚಾರವೊಂದು ಹೊಳೆದು ಅದನ್ನು ಅವರು ಸ್ವಯಂಸ್ಫೂರ್ತಿಯಿಂದ ಕೈಗೆತ್ತಿಕೊಂಡಿದ್ದಾರೆ.

ಜಿಲ್ಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ ಮಹನೀಯರನ್ನು ಗುರುತಿಸಿ ಅವರ ಜೀವಿತಾವಧಿಯಲ್ಲಿಯೇ ಅವರು ಪ್ರತಿಪಾದಿಸಿದ ಜೀವನಮೌಲ್ಯಗಳನ್ನು ಅಕ್ಷರರೂಪಕ್ಕೆ ಇಳಿಸಬೇಕು ಎಂದು ಅವರು ಒಂದು ಯೋಜನೆಯನ್ನೂ ರೂಪಿಸಿದರು.

ಅದಕ್ಕೆ ಪೂರಕವಾಗಿ 'ಸಾಂಸ್ಕೃತಿಕ ಚಿಂತಕರು' ಎಂಬ ಸರಣಿಯಲ್ಲಿ ೧೭ ಜನ ಸಾಧಕರನ್ನು ಕುರಿತು ಅಷ್ಟೇ ಸಂಖ್ಯೆಯ ಲೇಖಕಿಯರು ಕೃತಿ ರಚಿಸಿದ್ದಾರೆ. ಅದರ ಜೊತೆಗೆ ಜಿಲ್ಲೆಯಲ್ಲಿ 'ಕನ್ನಡ ಕಟ್ಟಿದವರು' ಕುರಿತ ಸರಣಿಯಲ್ಲಿ ೧೭ ಜನ ಸಾಧಕರ ಬಗೆಗೆ ಅಷ್ಟೇ ಸಂಖ್ಯೆಯ ಬರಹಗಾರರು ಕೃತಿಗಳನ್ನು ರಚಿಸಿದ್ದಾರೆ. ಇದೆಲ್ಲ ಆಗಿರುವುದು ಜಿಲ್ಲೆಯ ೧೭ನೇ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಂಗವಾಗಿ ಎಂಬುದು ಇಲ್ಲಿ ಉಲ್ಲೇಖನಾರ್ಹ.

ಇದು ಒಂದು ಅಪರೂಪದ ದಾಖಲೆಯ ಕಾರ್ಯ; ನಮ್ಮ ಸಮಾಜದ ಏಳಿಗೆಗೆ ದುಡಿದ ಮಹನೀಯರನ್ನು, ಮಹಿಳೆಯರನ್ನು ನೆನಪಿಸಿಕೊಳ್ಳುವ ಕಾರ್ಯ. ಆದರೆ, ಇದು ಕೇವಲ ಒಂದು ದಾಖಲೀಕರಣದ ಕೆಲಸ ಮಾತ್ರ ಅನಿಸದೇ ಆಸಕ್ತರು ಈ ಕೃತಿಗಳನ್ನು ಓದಿದರೆ ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಹಾಗೂ ಪದಾಧಿಕಾರಿಗಳ ಕಾರ್ಯ ಸಾರ್ಥಕ ಎನಿಸುತ್ತದೆ. ಇದಕ್ಕಾಗಿ ದುಡಿದ ಎಲ್ಲರಿಗೂ ನನ್ನ ಅಭಿನಂದನೆಗಳು.

ನಾಡೋಜ ಡಾ. ಮನು ಬಳಿಗಾರ್

ಅಧ್ಯಕ್ಷರು

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಸದಾಶಯ ನುಡಿ

ಒಬ್ಬ ನಿಜಶರಣ ಹೇಗಿರಬೇಕು? ಶರಣನ ಲಕ್ಷಣಗಳೇನು? ಎಂದು ಯಾರಾದರೂ ಕೇಳಿದರೆ ಮೀನಕೇರಾದ ಲಿಂಗೈಕ್ಯ ವಿ.ಎನ್.ಪಾಟೀಲರ ಹೆಸರು ಹೇಳಿದರೆ ಸಾಕು. ಶರಣ ಜೀವನ ಅರ್ಥವಾಗುತ್ತದೆ. ಬದುಕಿದ ರೀತಿ ಓದಿದರೆ ರೋಮಾಂಚನವಾಗುತ್ತದೆ. ಹೃದಯ ತುಂಬಿ ಬರುತ್ತದೆ. ಕಣ್ಣು ತುಂಬಿಕೊಂಡು ನಮಗೆ ಅರಿವಿಲ್ಲದಂತೆ ಹನಿಗಳು ಉದುರುತ್ತವೆ. "ಲಕ್ಷಕೊಬ್ಬ ಭಕ್ತ ಕೋಟಿಗೊಬ್ಬ ಶರಣ' ಎಂಬ ಚೆನ್ನಬಸವಣ್ಣನವರ ವಾಣಿಯಂತೆ ನಿಜಕ್ಕೂ ರಾಜಕೀಯ ಇತಿಹಾಸದಲ್ಲಿ ಇಂದು ಕೋಟಿಗೊಬ್ಬರೂ ವಿ.ಎನ್.ಪಾಟೀಲರಂತೆ ದೀಪಹಚ್ಚಿ ಹುಡುಕಿದರೂ ಸಿಗುವುದಿಲ್ಲ.

ಅವರು ದೇವರನ್ನು ಗುಡಿ-ಗುಂಡಾರಗಳಲ್ಲಿ ಕಾಣಲಿಲ್ಲ. ಯಜ್ಞ-ಯಾಗದಲ್ಲಿ ಕಾಣಲಿಲ್ಲ. ಆ ಅಭಿಷೇಕ, ಈ ಅಭಿಷೇಕ ಮಾಡಿ ದೇವರನ್ನು ಕಾಣಲಿಲ್ಲ. ಕಡುಬಡವರ ಬಡಕಾರ್ಮಿಕನ ಹೃದಯದಲ್ಲಿ ನಿಜವಾದ ದೇವರ ದರ್ಶನ ಪಡೆದ ಧೀಮಂತರು ವಿ.ಎನ್.ಪಾಟೀಲರು. ಸದಾಕಾಲ ಬಡವರ ಬಗ್ಗೆ ಚಿಂತಿಸುತ್ತಿದ್ದರು, ಶಿಕ್ಷಣದ ಬಗ್ಗೆ ಚಿಂತಿಸುತ್ತಿದ್ದರು. ಅನೇಕರಿಗೆ ಒಳ್ಳೆಯ ಶಿಕ್ಷಣ ಕೊಡಿಸಿ ಅವರ ಹೃದಯದಲ್ಲಿ ಬೆಳಕು ಮೂಡಿಸಿದ್ದಾರೆ. ಹೃದಯದ ತುಂಬಾ ದೇಶಭಕ್ತಿ ತುಂಬಿಕೊಂಡಿದ್ದರು. 'ಲಿಂಗದ ಮುಖವೇ ಜಂಗಮ' ಜಂಗಮ (ಸಮಾಜ) ಸೇವೆ ಮಾಡಿದರೆ ಲಿಂಗಯ್ಯ ಸಂತೃಪ್ತನಾಗುತ್ತಾನೆ ಎಂಬ ಬಸವಸಿದ್ಧಾಂತ ಅವರ ಬದುಕಿನುದ್ದಕ್ಕೂ ಕಾಣುತ್ತೇವೆ. ಶಾಸಕರಾಗಿ ಮನೆ ತುಂಬಿಕೊಂಡಿರುವವರು ಕೋಟಿ ಕೋಟಿ. ಶಾಸಕರಾಗಿ ಮನೆ ಖಾಲಿ ಮಾಡಿಕೊಂಡವವರು ಇವರೇ ಪ್ರಥಮರು. ಇವರೇ ಕೊನೆಯವರು. ಅವರ ಕೊನೆ ದಿನಗಳಲ್ಲಿ ಆಸ್ಪತ್ರೆ ಖರ್ಚಿಗೂ

ಹಣದ ವ್ಯವಸ್ಥೆ ಇರಲಾರದಕ್ಕೆ ಯಾರೋ ಒಬ್ಬ ಶಾಸಕರು ಆಸ್ಪತ್ರೆಗೆ ತೋರಿಸಿ ಮೂರು ಸಾವಿರ ರೂಪಾಯಿಗಳು ಕೊಟ್ಟಿದ್ದು ನೋಡಿದರೆ ನನ್ನ ಕರುಳು ಚುರ್ ಎಂದಿತ್ತು. ಹೃದಯ ಹಿಂಡಿದಂತಾಯಿತು. ಅಂತರಂಗದಲ್ಲಿ ತಳಮಳವಾಯಿತು. ಜೀವನದುದ್ದಕ್ಕೂ ಸಮಾಜ ಸಮಾಜ ಎಂದು ರಾತ್ರಿಯನ್ನೇ ಹಗಲು ಮಾಡಿ ದುಡಿದ ವ್ಯಕ್ತಿಗೆ ಈ ರೀತಿ ಬಹುಮಾನವೆ? ನನ್ನ ನಾನೆ ಚಿಂತನೆಗೆ ಒಳಗಾದೆ.

ವಿ.ಎನ್.ಪಾಟೀಲರು ಕಾವ್ರೆಡ್‌ವಿದ್ದರೂ ಗುರುಭಕ್ತಿ ತುಂಬಿಕೊಂಡವರು. ನಮ್ಮ ಗುರುಗಳಾದ ಡಾ.ಚನ್ನಬಸವ ಪಟ್ಟದ್ದೇವರ ಅವರ ಆತ್ಮೀಯ ಒಡನಾಟವಿತ್ತು. ಅವರ ಮನೆಯಲ್ಲಿ ಅನೇಕ ಸಲ ಲಿಂಗಪೂಜೆ ಪ್ರಸಾದಕ್ಕೆ ಆಮಂತ್ರಣ ನೀಡಿದ್ದರು. ಅಪ್ಪಗಳ ಕಾರ್ಯಕ್ಕೆ ಸದಾ ಬೆಂಬಲ ಕೊಡುತ್ತಿದ್ದರು. ಅಪ್ಪಗಳು ಆಗಾಗ್ಗೆ ವಿ.ಎನ್.ಪಾಟೀಲರ ಬಗ್ಗೆ ನೆನಪು ಮಾಡಿ ನನಗೆ ಹೇಳುತ್ತಿದ್ದರು. ಮೀನಕೇರಾ ಗ್ರಾಮಕ್ಕೆ ಹೋದಾಗ ಅವರ ಮನೆಗೆ ಭೇಟಿ ಕೊಟ್ಟು ಬಂದಿದ್ದರು. ಭಾಲ್ಕಿ ಮಠಕ್ಕೂ ವಿ.ಎನ್.ಪಾಟೀಲರಿಗೆ ಅವಿನಾಭಾವದ ಒಡನಾಟವಿದೆ ಎಂದು ಹೇಳಲು ಸಂತಸವಾಗುತ್ತದೆ.

ಇವರ ಬಗ್ಗೆ ಎಂದೋ ಗ್ರಂಥ ಬರಬೇಕಿತ್ತು. ಆದರೆ ಈವಾಗಲಾದರೂ ಬಸವರಾಜ ಬಲ್ಲೂರ ಪರಿಶ್ರಮದಿಂದ ಬಂತಲ್ಲ ಎಂಬ ಖುಷಿಯಾಗಿದೆ. ಅವರ ಜೀವನ ಕಾಲನಗರ್ಭದಲ್ಲಿ ಅಡಗಿ ಮಾಯವಾಗುತಿತ್ತು. ಅದನ್ನು ಪಂಚಾಕ್ಷರಿ ಪುಣ್ಯಶೆಟ್ಟಿ ಅವರು ಅತ್ಯಂತ ಸಮರ್ಥವಾಗಿ ಉಳಿಸಿದ್ದಾರೆಂದು ಸಂತಸ ತಂದಿದೆ. ಪಾಟೀಲರ ಜೀವನವೇ ಒಂದು ಸಂದೇಶವಾಗಿದೆ. ಪ್ರೇರಣಾಶಕ್ತಿಯಾಗಿದೆ. ಉತ್ಸಾಹದ ಬುಗ್ಗೆಯಾಗಿದೆ. ನಿಸ್ವಾರ್ಥತೆಯ ಖಣಿಯಾಗಿದೆ. ಅವರು ಮಾಡಿದ ಜಗದಗಲ ಸೇವೆಗೆ ಕಣದಷ್ಟು ಆದರೂ ಋಣ ತೀರಿಸಿದಂತಾಗಿದೆ ಎಂದು ಸಂತಸವಾಗಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹೃದಯಪೂರ್ವಕ ಹಾರೈಸುತ್ತೇವೆ.

ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು

ದಿ: ೦೯-೦೪-೨೦೧೯, ಹಿರೇಮಠ ಸಂಸ್ಥಾನ, ಭಾಲ್ಕಿ ಜಿ:ಬೀದರ

ಅಕ್ಷರ ಪ್ರೀತಿಯ ನುಡಿ
(ಪ್ರಕಾಶಕರ ಮಾತು)

ಕನ್ನಡ, ಕನ್ನಡಿಗ, ಕರ್ನಾಟಕದ ಸಮಗ್ರ ಏಳಿಗೆ ಹಾಗೂ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಕಟ್ಟುವ ಮಹದುದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿಕೊಂಡಿದೆ. ಅದರ ಆಶಯಕ್ಕೆ ತಕ್ಕಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕ್ರಿಯಾಶೀಲವಾಗಿದೆ. ಐತಿಹಾಸಿಕ, ಸಾಹಿತ್ಯಿಕ, ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿರುವ ಬೀದರ ಜಿಲ್ಲೆಯ ಪ್ರಬಲ ಇಚ್ಛಾಶಕ್ತಿ, ಇಚ್ಛಾಸಕ್ತಿಯ ಕೊರತೆಯಿಂದಾಗಿ ಈ ಭಾಗ ಹಿಂದುಳಿದ ಹಣೆಪಟ್ಟಿಹೊತ್ತಿರುವುದರಿಂದ ಕನ್ನಡ ಸಾಹಿತ್ಯ ಪರಿಷತ್ತು ಸ್ಥಳೀಯ ಕಲೆ, ಸಾಹಿತ್ಯ, ಸಂಸ್ಕೃತಿಯ ಸಂವರ್ಧನೆಗಾಗಿ ಅನೇಕ ಕಾರ್ಯಚಟುವಟಿಕೆಗಳನ್ನು ಆಯೋಜಿಸಿದೆ. ಜಾಗತೀಕರಣದ ಕರಿನೆರಳಿನಿಂದ ಸ್ಥಳೀಯ ಭಾಷೆ ಸಂಸ್ಕೃತಿ ನಲುಗುತ್ತಿರುವಾಗ ಅವನ್ನು ಉಳಿಸುವ ಹೋರಾಟದ ಹಲವು ದಾರಿಗಳು ಕಟ್ಟಿಕೊಳ್ಳಬೇಕಾಗಿದೆ. ಅದರಲ್ಲಿ ಗಡಿಭಾಗದಂಥ ಬೀದರ ನೆಲದಲ್ಲಿ ಇನ್ನೂ ಹೆಚ್ಚು ರಚನಾತ್ಮಕ ಕಾರ್ಯಗಳ ಮೂಲಕ ಪಾಶ್ಚಾತ್ಯ ಸಂಸ್ಕೃತಿ, ಪರಭಾಷೆಗಳಿಗೆ ಸವಾಲಾಗಿ ನಿಲ್ಲುವ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಪರಿಷತ್ತು ಕಾರ್ಯನಿರತವಾಗಿದೆ.

ಮಾಹಿತಿ ತಂತ್ರಜ್ಞಾನ ಬೆಳೆದಂತೆ ಆಧುನಿಕತೆ ಹೆಚ್ಚಾಗಿ ಜೀವನ ಪ್ರೀತಿ ಕಡಿಮೆಯಾಗುತ್ತಿದೆ. ವಿದ್ಯುನ್ಮಾನ (ಎಲೆಕ್ಟ್ರಾನಿಕ್) ಗ್ಯಾಜೆಟ್ ಲೋಕದಲ್ಲೇ ಮುಳುಗುತ್ತಿರುವ ನಮಗೆ ಅಕ್ಷರ ಲೋಕದ ಪುಸ್ತಕ ಸಂಸ್ಕೃತಿಯ ಉಳಿವು ಅಷ್ಟೇ ಮುಖ್ಯವಾಗಿದೆ. ಆದ್ದರಿಂದ ಸ್ಥಳೀಯ ಲೇಖಕರು, ಕಲಾವಿದರನ್ನು, ಪ್ರತಿಭೆಗಳನ್ನು ಪ್ರೋತ್ಸಾಹಿಸುವುದು, ಸ್ಥಳೀಯ ಕಲೆ, ಸಾಹಿತ್ಯವನ್ನು ಸಾಂಸ್ಕೃತಿಕವಾಗಿ ದಾಖಲಿಸುವುದು, ಕನ್ನಡಿಗರಲ್ಲಿ ಓದುವ ಅಭಿರುಚಿಯನ್ನು ಮೂಡಿಸುವುದು. ಒಟ್ಟಾರೆ ಕನ್ನಡ ನಾಡು, ನುಡಿ, ನೆಲ, ಜಲ, ಜನ ಭಾಷೆ, ಸಾಹಿತ್ಯ ಈ ಎಲ್ಲವುಗಳ ಹಿತಚಿಂತನೆಯೊಂದೆ ನಮ್ಮ ಮೊದಲ ಮತ್ತು ಕೊನೆಯ ಆಶಯವಾಗಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಕೆಲ ಕೃತಿಗಳನ್ನು ಪ್ರಕಟಿಸಲಾಗಿದೆ. ಬಹುಮುಖ್ಯವಾಗಿ ಸ್ಥಳೀಯ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ

ಸಂಗತಿಗಳನ್ನು ರಚನಾತ್ಮಕವಾಗಿ ಕಟ್ಟುವಲ್ಲಿ ಅನೇಕ ಮಹನೀಯರ ಪರಿಶ್ರಮವಿದೆ. ಸಮಾಜೋಸಾಂಸ್ಕೃತಿಕ ಏಳಿಗೆಗೆಗಾಗಿ ತಮ್ಮನ್ನು ಗಂಧದ ಕೊರಡಂತೆ ಸವೆಸಿಕೊಂಡಿದ್ದಾರೆ. ಅಂಥವರ ಜೀವನ ಸಾಧನೆ ಕಾಲದಲ್ಲಿ ಮರೆಯಾಗದೆ ಒಂದು ಸಾಂಸ್ಕೃತಿಕ ದಾಖಲೆಯಾಗಬೇಕೆಂಬ ಸದಾಶಯದಿಂದ ಸಾಂಸ್ಕೃತಿಕ ಚಿಂತಕರು ಮಾಲಿಕೆ ಆರಂಭಿಸಲಾಗಿದ್ದು ೧೭ನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಮೊದಲ ಹಂತದಲ್ಲಿ ೧೭ ಪುಸ್ತಕ ಹೊರತರುವ ಉದ್ದೇಶದಿಂದ ಈ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಸ್ಥಳೀಯ ಎಲ್ಲ ಸಾಂಸ್ಕೃತಿಕ ಚಿಂತಕರ ಜೀವನ ಸಾಧನೆ ಕುರಿತ ಪುಸ್ತಕಗಳನ್ನು ಹೊರತರಲಾಗುವುದು.

ನಮ್ಮ ಮಧ್ಯದ ಹಿರಿಯ ಸಾಹಿತಿಗಳಾದ **ಶ್ರೀ ಪಂಚಾಕ್ಷರಿ ಪುಣ್ಯಶೆಟ್ಟಿ** ಅವರು ಬರೆದ **ಹುಟ್ಟು ಹೋರಾಟಗಾರ – ವಿ.ಎನ್. ಪಾಟೀಲ** ಜೀವನ ಸಾಧನೆ ಎಂಬ ಪುಸ್ತಕ ಪ್ರಕಟಿಸಲು ಹೆಮ್ಮೆ, ಸಂತೋಷವೆನಿಸುತ್ತದೆ. ವಿ.ಎನ್. ಪಾಟೀಲ ಅವರು ಈ ಭಾಗದಲ್ಲಿ ರಾಜಕೀಯವಾಗಿ ಬಹುದೊಡ್ಡ ಕ್ರಾಂತಿ ಮಾಡಿರುವರು. ಮೂಲತಃ ಸಮಾಜವಾದಿಯಾಗಿದ್ದ ಅವರು ಬಸವ ತತ್ವದ ಸಮತಾವಾದವನ್ನು, ದಾಸೋಹ ತತ್ವವನ್ನು ನಿಜಾಚರಣೆಯಲ್ಲಿ ತಂದ ಶ್ರೀಯುತರ ಬದುಕು ಬರಹ ಕುರಿತ ಚಿಂತನೆ ಮಾಡುವುದು, ಅದನ್ನು ಪುಸ್ತಕ ರೂಪದಲ್ಲಿ ಹೊರತರುವುದು ನಾಗರಿಕ ಸಮಾಜದ ಆದ್ಯ ಕರ್ತವ್ಯವೆಂದು ಭಾವಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ ಕೈಂಕರ್ಯ ಪೂರೈಸುತ್ತಿದೆ. ಪ್ರಸ್ತುತ ಪುಸ್ತಕಕ್ಕೆ ಮೌಲಿಕ ಮುನ್ನುಡಿ ಬರೆದು ಕೃತಿಯ ಮೌಲ್ಯ ಹೆಚ್ಚಿಸಿದ ನಾಡೋಜ ಡಾ. ಮನು ಬಳಿಗಾರ ಅವರನ್ನು ತುಂಬು ಹೃದಯದಿಂದ ನೆನೆಯುತ್ತೇವೆ. ಈ ಕೃತಿಯನ್ನು ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಿಸಲು ಅನುಮತಿ ನೀಡಿರುವ ಲೇಖಕರಿಗೂ ವಿಶೇಷವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಪದಾಧಿಕಾರಿಗಳಿಗೂ ವಂದನೆಗಳು.

ಸುರೇಶ ಚನಶೆಟ್ಟಿ
ಅಧ್ಯಕ್ಷರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ

ನನ್ನ ನುಡಿ

ಭಕ್ತಿಯಿಲ್ಲದ ಬಡವ ನಾನಯ್ಯ
ಕಕ್ಕಯ್ಯನ ಮನೆಯಲು ಬೇಡಿದೆ
ಚನ್ನಯ್ಯನ ಮನೆಯಲೂ ಬೇಡಿದೆ
ದಾಸಯ್ಯನ ಮನೆಯಲೂ ಬೇಡಿದೆ
ಎಲ್ಲಾ ಪುರಾತರು ನೆರೆದು ಭಕ್ತಿ ಭಿಕ್ಷವನಿಕ್ಕಿದಡೆ
ಎನ್ನ ಪಾತ್ರೆ ತುಂಬಿತ್ತು, ಕೂಡಲಸಂಗಮದೇವಾ.

ಬಸವಣ್ಣನವರು ತಮ್ಮಲ್ಲಿ ಭಕ್ತಿ ಇಲ್ಲ. ಭಕ್ತರಾದಂತಹ ಕಕ್ಕಯ್ಯ, ಚನ್ನಯ್ಯ, ದಾಸಯ್ಯ ಅವರ ಮನೆಗೆ ಹೋಗಿ ಭಕ್ತಿ ಭಿಕ್ಷೆಯನ್ನು ಬೇಡಿದೆನು. ಆಗ ನನ್ನ ಜೋಳಿಗೆ ಭಕ್ತಿಯಿಂದ ತುಂಬಿತು ಎಂದು ಹೇಳಿದ್ದಾರೆ.

ನಾನೇನೂ ಸಾಹಿತಿ ಅಲ್ಲ. ಆದರೂ ಕೂಡ ನಮ್ಮ ಜಿಲ್ಲೆಯ ಹೋರಾಟಗಾರರ ಚರಿತ್ರೆಯನ್ನು ಬರೆದು ಇಂದಿನ ಯುವಕರಲ್ಲಿ ಆ ದೇಶ ಭಕ್ತರ ಹೋರಾಟದ ಕೆಚ್ಚು ಬರಲೆಂಬುವುದೇ ನನ್ನ ಉದ್ದೇಶವಾಗಿದೆ.

ನಾನು ವಿ.ಎನ್. ಪಾಟೀಲರನ್ನು ಸಂದರ್ಶಿಸಲು ಮೀನಕೇರಿಗೆ ಹೋಗಿದ್ದೆನು. ಅವರ ಸ್ಥಿತಿ ಆಗ ಗಂಭೀರವಾಗಿತ್ತು. ನನ್ನೊಡನೆ ಅವರು ಮಾತಾಡುತ್ತಾ, "ನಾನು ಗೈದ ಕಾರ್ಯಗಳ ಮಾಹಿತಿಯನ್ನು ಹಾಗೂ ಭಾವಚಿತ್ರಗಳನ್ನು ಸಂಗ್ರಹಿಸಿ ಇಟ್ಟಿದ್ದೆನು. ಬಹಳಷ್ಟು ಮಾಹಿತಿಗಳು, ಫೋಟೋಗಳು ಕಾಣೆಯಾಗಿವೆ. ಕೆಲವು ಮಾತ್ರ ಉಳಿದಿರಬಹುದು" ಎಂದು ತಮ್ಮ ಅಳಲನ್ನು ನನ್ನ ಮುಂದೆ ತೋಡಿಕೊಂಡರು. ಯಾರಾದರೂ ನನ್ನ ಬಗ್ಗೆ ಪುಸ್ತಕ ಬರೆಯುವವರಿದ್ದರೆ ಮಾಹಿತಿ ಕೊಡಬಹುದಾಗಿತ್ತು ಎಂದು ಹೇಳಿದರು.

ಅವರ ಹಿರಿಯ ಮಗ ವಿಜಯಕುಮಾರ ಪಾಟೀಲರನ್ನು ಭೇಟಿಯಾಗಿ ಅವರ ತಂದೆಯವರಿಗೆ ಸಂಬಂಧಪಟ್ಟ ಏನಾದರು ಕಾಗದ ಪತ್ರಗಳಿದ್ದರೆ ಕೊಟ್ಟು ಬಿಡಿರಿ ನಾನು ನಿಮ್ಮ ತಂದೆಯವರ ಬಗ್ಗೆ ಚಿಕ್ಕ ಪುಸ್ತಕ ಬರೆಯುತ್ತಿದ್ದೇನೆ ಎಂದು ಹೇಳಿದೆನು. ಆಗ ಅವರು ಬೀದರಿನ ಓರ್ವ ಕನ್ನಡ ಅಭಿಮಾನಿಗಳಿಗೆ ಕೊಟ್ಟಿದ್ದೆನು. ಅವರು ನಮ್ಮ ತಂದೆಯವರ ಬಗ್ಗೆ ಪುಸ್ತಕ ಬರೆಯುವವನಿದ್ದೇನೆ ಎಂದು ಹೇಳಿ ನನ್ನಲ್ಲಿ ಸಂಗ್ರಹಿಸಿ ಇಟ್ಟಿದ್ದ ಎಲ್ಲಾ ಕಾಗದ ಪತ್ರಗಳನ್ನು ಕೊಂಡೊಯ್ದರು ವರ್ಷವಾದರೂ ಆ ಪುಸ್ತಕ ಹೊರಬರಲಿಲ್ಲ. ಮೇಲಿಂದ ಮೇಲೆ ನಾನು ಆಗ್ರಹಪಡಿಸುತ್ತಾ ಹೋದೆನು. ಆದರೂ ಅವರು ಇಲ್ಲದೊಂದು ನೆಪ ಹೇಳಿ ತಿರುಗಿ ಕೊಡಲಿಲ್ಲ. ಅವರು ಕೊಟ್ಟಿದ್ದರೆ ನಿಮಗೆ ನಾನು ಮಾಹಿತಿಯನ್ನು ಒದಗಿಸುತ್ತಿದ್ದೆನು ಎಂದು ಹೇಳಿ ವಿಷಾದಪಟ್ಟರು.

ಇದರಿಂದ ನಾನು ಧೃತಿಗೆಡದೆ ಪುಸ್ತಕ ಬರೆಯಲು ನಿಶ್ಚಯಿಸಿದೆನು. ವಿ.ಎನ್. ಪಾಟೀಲರ ಸಮಕಾಲೀನರು, ಗೆಳೆಯರು ಮುಂತಾದವರನ್ನು ಭೇಟಿಯಾದೆನು. ಅವರು ನನಗೆ ಪಾಟೀಲರ ಬಗ್ಗೆ ತಿಳುವಳಿಕೆಯನ್ನು ಒದಗಿಸಿದರು. ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಈ ಪುಸ್ತಕದಲ್ಲಿ ವಿ.ಎನ್. ಪಾಟೀಲರು ಸಾಮಾಜಿಕ ನ್ಯಾಯಕ್ಕಾಗಿ ಶೋಷಣೆಯ ವಿರೋಧವಾಗಿ ಶ್ರಮಿಸಿದ್ದನ್ನು ಅಸ್ಪೃಶ್ಯತೆಯ ವಿರುದ್ಧ ಜಿಲ್ಲೆಯ ಮುಖಂಡರಲ್ಲಿಯೇ ಪ್ರಪ್ರಥಮ ಧ್ವನಿಯೆತ್ತಿದ್ದನ್ನೂ, ಜನೋಪಯೋಗಿ ಕಾರ್ಯಗಳನ್ನು, ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿದ್ದನ್ನೂ ಇವರ ಹೋರಾಟದ ಫಲವಾಗಿ ಅನೇಕ ಕನ್ನಡ ಮಾಧ್ಯಮ ಶಾಲೆಗಳು ಪ್ರಾರಂಭವಾದುದ್ದನ್ನೂ ಬರೆದಿದ್ದೇನೆ. ಇಷ್ಟು ಕಾರ್ಯ ಅವರು ಮಾಡಿದರೂ ಕೂಡ ಕರ್ನಾಟಕ ಏಕೀಕರಣ ಗ್ರಂಥದಲ್ಲಿ ಇವರ ಹೆಸರು ನಮೂದಿಸಿಲ್ಲ. "Whatever you do, dovote your heart and soul and mind to do it" ಎಂಬಂತೆ ಪಾಟೀಲರು ಜಿಲ್ಲೆಯ ಪುರೋಭಿವೃದ್ಧಿಗಾಗಿ ಅಹೋರಾತ್ರಿ ಶ್ರಮಿಸಿದ್ದಾರೆ. ಈ ಪುಸ್ತಕ

ಬರೆಯುವಲ್ಲಿ ನನಗೆ ಸಹಕರಿಸಿದವರೆಲ್ಲರನ್ನು ನೆನೆಯುವುದು ನನ್ನ ಆದ್ಯ ಕರ್ತವ್ಯವಾಗಿದೆ. ನಾನು ವಿ.ಎನ್. ಪಾಟೀಲರ ಪುಸ್ತಕ ಬರೆಯಲು ಕ್ಷೇತ್ರಕಾರ್ಯ ಕೈಗೊಂಡಾಗ ಅನೇಕ ಮಹಾನುಭಾವರು ವಿ.ಎನ್. ಪಾಟೀಲರ ಬಗ್ಗೆ ಮಾಹಿತಿಯನ್ನು ಒದಗಿಸಿ ಕೊಟ್ಟಿದ್ದಾರೆ. ಇವರೆಲ್ಲರ ಹೆಸರುಗಳು ಇಲ್ಲಿ ನಮೂದಿಸಿಲ್ಲ. ಕಾರಣವೆಂದರೆ ಪುಸ್ತಕ ಬರೆಯುವಾಗಲೇ ಎಲ್ಲರ ಹೆಸರನ್ನು ತೆಗೆದುಕೊಂಡಿದ್ದೇನೆ. ಈ ಮಹನೀಯರೆಲ್ಲರಿಗೂ ನನ್ನ ವಂದನೆಗಳು. ಬಸವರಾಜ ಬಲ್ಲೂರವರನ್ನು ಎಷ್ಟು ಸಲ ಕೃತಜ್ಞತೆಯನ್ನು ಅರ್ಪಿಸಿದರೂ ಕಡಿಮೆಯೇ ಎಂದು ಹೇಳಬೇಕು. ಇದಲ್ಲದೆ ಪುಸ್ತಕ ಪ್ರಕಟಗೊಳ್ಳುವ ಸಕಲ ಜವಾಬುದಾರಿ ಅವರೇ ವಹಿಸಿದರು.

ಈ ಕೆಳಗಿನ ಮಹನೀಯರೆಲ್ಲರಿಗೂ ನನ್ನ ಕೃತಜ್ಞತಾಪೂರ್ವಕ ವಂದನೆಗಳು. ಪುಸ್ತಕಕ್ಕೆ ಪ್ರಕಟಣೆಗೆ ದಾಸೋಹ ನೀಡಿದ ಕನ್ನಡ ಮಠವಾದ ಭಾಲ್ಕಿ ಹಿರೇಮಠ ಸಂಸ್ಥಾನದ ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದ್ದೇವರಿಗೆ, ಪೂಜ್ಯಶ್ರೀ ಗುರುಬಸವ ಪಟ್ಟದ್ದೇವರಿಗೆ ಸದಾ ಚಿರಋಣಿಯಾಗಿರುವೆ. ಈ ಕೃತಿಗೆ ಮೌಲಿಕ ಮುನ್ನುಡಿಯನ್ನು ಬರೆದು ಉಪಕರಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ ಅವರಿಗೆ ಪುಸ್ತಕದ ಪ್ರಕಾಶಕರಾದ ನನ್ನ ಯುವಕ ಮಿತ್ರ ಸುರೇಶ ಚನ್ನಶೆಟ್ಟಿಯವರು, ಚನ್ನಬಸವ ಹೇಡೆಯುವರಿಗೂ, ಜಗನ್ನಾಥ ಕಮಲಾಪುರೆ, ದೇವೇಂದ್ರ ಕರಂಜೆಯವರಿಗೂ, ಬೆನ್ನುಡಿಯನ್ನು ಬರೆದು ಪ್ರೋತ್ಸಾಹಿಸಿದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಗಾಂಧಿವಾದಿ ಗೊಂಡೇನ ಹಳ್ಳಿ ರುದ್ರಪ್ಪ ಚನ್ನಬಸಪ್ಪ (ಗೊ.ರು.ಚ.)ರವರಿಗೂ, ವಿ.ಎನ್. ಪಾಟೀಲರ ಬಗ್ಗೆ ತಮ್ಮ ಅನಿಸಿಕೆಗಳನ್ನು ಬರೆದು ಕಳಿಸಿದ 'ಬಸವ ರತ್ನ' ರಮಜಾನ ದರ್ಗಾ ಅವರಿಗೂ, ಆಗಾಗ ನನ್ನ ಸಾಹಿತ್ಯ ಕೃಷಿಗೆ ನೀರೆರೆಯುತ್ತಲಿರುವ ವೀರೇಂದ್ರ ಸಿಂಪಿಯವರಿಗೂ, ಉಪನ್ಯಾಸಕರಾದ ಕಲಬುರ್ಗಿಯ ವಿಜಯಕುಮಾರ ಪರೂತೆಯವರಿಗೂ, ಸನ್ಮಿತ್ರರಾದ ಡಾ. ಜಗನ್ನಾಥ ಹೆಬ್ಬಾಳೆ, ಹಣಮಂತಪ್ಪ ಪಾಟೀಲ, ವಿಜಯಕುಮಾರ ಪಾಟೀಲ ಐನೂಲಿ,

ಗುರುಸಿದ್ದಪ್ಪ ಸೋಮಶೆಟ್ಟಿ, ಮಾನಶೆಟ್ಟಿ ಬೆಳಕೇರಿಯವರಿಗೂ ಅನೇಕ ವಂದನೆಗಳು.

ಮೊಮ್ಮಕಳಾದ ಪುನೀತ, ಸುಮೀತ, ಶರಣಬಸಪ್ಪ, ಪೂಜಾ (ಲಡ್ಡು) (ಪೊನ್ನಿ) ಇವರಿಗೂ ಹಾಗೂ ನನ್ನ ಕೈ ಹಿಡಿದ ಸಂಗಮ್ಮ ಪುಣ್ಯಶೆಟ್ಟಿ ಇವಳಿಗೂ ನನ್ನ ಶುಭ ಹಾರೈಕೆಗಳು. ಸನ್ಮಿತ್ರರಾದ ಮಲ್ಲಿಕಾರ್ಜುನ ಮುಂಡಾಸೆ, ಜಗನ್ನಾಥ ಕಮಲಾಪುರೆ, ಅಮರ ಲೋಂಡೆಯವರೆಲ್ಲರಿಗೂ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ತಮ್ಮ ಅಭಿಪ್ರಾಯವನ್ನು ಬರೆದು ಕಳುಹಿಸಿದ ಪೂಜ್ಯರಾದ ಡಾ. ಬಸವಲಿಂಗ ಪಟ್ಟದ್ದೇವರು ಹಿರೇಮಠ ಭಾಲ್ಕಿ ಪೂಜ್ಯರಾದ ಜ್ಯೋತಿರ್ಮಯಾನಂದ ಸ್ವಾಮಿಗಳು, ರಾಮಕೃಷ್ಣ ಆಶ್ರಮ ಬೀದರ ಇವರಿಗೆ ನನ್ನ ಸಾಸ್ಟಾಂಗ ಪ್ರಣಾಮಗಳು.

ಇನ್ನು ಅನೇಕರು ಸಹಕರಿಸಿದ್ದಾರೆ. ಇವರೆಲ್ಲರಿಗೂ ಕೃತಜ್ಞತೆಯನ್ನು ಅರ್ಪಿಸದೆ ಇರಲಾರೆ.

– ಪಂಚಾಕ್ಷರಿ ಪುಣ್ಯಶೆಟ್ಟಿ
ಕುಂಬಾರಗೇರಿ, ಬೀದರ.

ಅರ್ಪಣೆ



ಮಲ್ಲಮ್ಮ ಪಾಟೀಲ

ನಿಮಿಷದ ನಿಮಿಷಂ ಭೋ, ಕ್ಷಣದಳೊಗರ್ಧಂ ಭೋ,
ಕಣ್ಣಮುಚ್ಚಿ ಬಿಚ್ಚುವಿನಿಸು ಬೇಗಂ ಭೋ,
ಸಂಸಾರದಾಗುಂ ಭೋ ಸಂಸಾರದ ಹೋಗುಂ ಭೋ,
ಸಂಸಾರದೊಪ್ಪಂ ಭೋ : ಕೂಡಲಸಂಗಮದೇವ ನೀ ಮಾಡಿದ
ಮಾಯಂ ಭೋ, ಅಭ್ರಚ್ಛಾಯಂ ಭೋ
– ಬಸವಣ್ಣನವರು

ಈ ಭೂಮಿಯ ಮೇಲೆ ಶಾಶ್ವತವಾಗಿ ಯಾರೂ ಇರಲು ಬಂದಿಲ್ಲ. ಯಾವ ಸಂದರ್ಭದಲ್ಲಿ ಸಾವು ಸಂಭವಿಸುವುದು ಎಂದು ಯಾರಿಗೂ ತಿಳಿದಿಲ್ಲ. ಕಣ್ಣಿನ ರೆಪ್ಪೆ ಬಡೆಯುವಷ್ಟರಲ್ಲಿ ಜೀವ ಹಾರಿ ಹೋಗುವುದು. ಮೋಡದ ನೆರಳಿನಂತೆ ಅಸ್ಥಿರವಾದುದು ನಮ್ಮ ಬದುಕು ಎಂದು ಬಸವಣ್ಣನವರು ಹೇಳಿದ್ದಾರೆ.

ನನ್ನ ತಂಗಿ ಮಲ್ಲಮ್ಮಳ ಸಾವು ಮೇಲಿನ ವಚನದಂತೆ ಜರುಗಿತು. ಅವಳ ಜೀವನವು ಮಹಾಪತಿವೃತೆ ಹೇಮರೆಡ್ಡಿ ಮಲ್ಲಮ್ಮಳ ತರಹ ಸ್ವಲ್ಪ

ಮಟ್ಟಿಗೆ ಹೋಲುತ್ತದೆ. ನನ್ನ ತಂದೆ-ತಾಯಿಗಳು ಅವಳಿಗೆ ಮಲ್ಲಮ್ಮಳೆಂದು ಇಟ್ಟ ಹೆಸರು ಸಾರ್ಥಕವಾಯಿತು.

ಅವಳು ಜನ್ಮವೆತ್ತಿದ್ದು ಚಿಂಚೋಳಿ ತಾಲೂಕಿನ ಐನೋಳ್ಳಿ ಗ್ರಾಮದಲ್ಲಿ (1941) ತಂದೆ ಶಿವರುದ್ರಪ್ಪ ತಾಯಿ ನೀಲಮ್ಮ. ನಾಲ್ಕನೆ ವರ್ಗದವರೆಗೆ ಮಾತ್ರ ಓದಿದ್ದು. ನಮ್ಮ ಅಕ್ಕ ಈಶ್ವರಮ್ಮಳು ಗಂಡು ಮಗುವಿಗೆ ಜನ್ಮಕೊಟ್ಟು ಶಿವನ ಪಾದ ಸೇರಿದಳು. ಆ ಮಗು ರಾಜಶೇಖರನ ಆರೈಕೆ ಮಲ್ಲಮ್ಮಳ ಪಾಲಿಗೆ ಬಂತು.

ಪಕ್ಕದ ಗ್ರಾಮವಾದ ನಾಗಾಯಿದಲಾಯಿಯ ಭೀಮಶೆಟ್ಟಿ ವೀರುಪಾಕ್ಷಮ್ಮ ಪಾಟೀಲರ ಮಗನಾಗ ಶಂಕ್ರೆಪ್ಪನವರೊಡನೆ ವಿವಾಹವು 1959ರಲ್ಲಿ ನೆರವೇರಿತು. ಶಿಕ್ಷಕರಾದ ಶಂಕ್ರೆಪ್ಪನವರು ಬೀದರ ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ಕೆಲಸ ಮಾಡಿದರು. ಅವರು 17 ವರ್ಷ ಸೇವೆ ಸಲ್ಲಿಸಿದ್ದು ಮುತ್ತಂಗಿ ಗ್ರಾಮದಲ್ಲಿ. ಇವರಿಗೆ ಐದು ಜನ ಮಕ್ಕಳು. ಭಾರತಿ, ಸುವರ್ಣಾ, ನಾಗಭೂಷಣ, ಪ್ರಭಾಕರ ಮತ್ತು ಅನುಸೂಯ.

ಗಾಣಗಾಪುರದ ದತ್ತಾತ್ರಿ ದೇವರ ದರ್ಶನಕ್ಕೆ ಅವರು ಹೋದಾಗ ಒಂದು ಘಟನೆ ಘಟಿಸಿತು. ದೇವಸ್ಥಾನದಲ್ಲಿ ಕುಳಿತ ಓರ್ವ ಸಾಧು ಇವರಿಬ್ಬರನ್ನು ಕರೆದು, ಮುಂದೆ ನಿಮಗೆ ಹೆಣ್ಣು ಮಗಳು ಜನಿಸುತ್ತಾಳೆ ಎಂದರಂತೆ. ಅದಕ್ಕೆ ಇವರು ನಾವು ಮಕ್ಕಳಾಗದಂತೆ ಔಷಧ ತೆಗೆದುಕೊಂಡಿದ್ದೇವೆ ಎಂದರಂತೆ. ಆಗ ಆ ಸಾಧು ನಿಮಗೆ ಹೆಣ್ಣು ಮಗು ಹುಟ್ಟುವುದು ಖಚಿತ ಎಂದು ಹೇಳಿದರು. ಮುಂದೆ ಸಾಧುವಿನ ಭವಿಷ್ಯ ನಿಜವಾಗಿ ಪರಿಣಮಿಸಿತು. ಹೆಣ್ಣುಮಗಳೇ ಹುಟ್ಟಿದಳು! ಆಕೆಗೆ ಅನುಸೂಯ ಎಂದು ನಾಮಕರಣ ಮಾಡಿದರು. (ದತ್ತಾತ್ರೇಯರ ತಾಯಿಯ ಹೆಸರು ಅನುಸೂಯ). ಈಗ ಅವಳು ಪತಿಯ ಜೊತೆ ಕಾಶ್ಮೀರದಲ್ಲಿದ್ದಾಳೆ. ಆಕೆಯ ಪತಿ ಶರಣಪ್ಪ ಯಾಲಾಲರು ರೈಲು ಸುರಂಗ ಮಾರ್ಗದ ಪ್ರೋಜೆಕ್ಟ್ ಮ್ಯಾನೇಜರ್ ಆಗಿ ಎಚ್.ಸಿ.ಸಿ. ಕಂಪನಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಮಲ್ಲಮ್ಮಳಿಗೆ ಪುರಾಣ ಪ್ರವಚನ ಕೇಳುವುದರಲ್ಲಿ ಆಸಕ್ತಿ ಇತ್ತು. ಲಿಂಗಪೂಜೆ ತಪ್ಪದೆ ಮಾಡುತ್ತಿದ್ದಳು. ಲಿಂಗಾರ್ಚನೆಯಾದ ನಂತರವೇ ಪ್ರಸಾದ ಸೇವಿಸುತ್ತಿದ್ದಳು. ಲಿಂಗದೇವರ ಹೊರತು ಬೇರೆ ದೇವರ ಕಡೆ ಆಕೆಗೆ ಭಕ್ತಿ ಇರಲಿಲ್ಲ. ಯಾರ ಮನಸ್ಸು ನೋಯಿಸದಂತೆ ಮಾತಾಡುತ್ತಿದ್ದಳು. ಯಾರಾದರೂ ಜಗಳವಾಡುತ್ತಿದ್ದರೆ. ಅಲ್ಲಿ ನಿಲ್ಲುತ್ತಿರಲಿಲ್ಲ. ದಾನ, ಧರ್ಮ ಮಾಡುವುದರಲ್ಲಿ ಎತ್ತಿದ ಕೈ. ಬಲಗೈ ಕೊಟ್ಟದ್ದು ಎಡಗೈಗೆ ಗೊತ್ತಾಗಬಾರದೆಂದು ಮಕ್ಕಳಿಗೆ ಹೇಳುತ್ತಿದ್ದಳಂತೆ. ಮನೆಯವರಿಗೆ ಪ್ರೀತಿಯ ಸೊಸೆಯಾಗಿದ್ದಳು. ಪತಿಗೆ ಎದುರು ಮಾತಾಡುತ್ತಿರಲಿಲ್ಲ. ಸೊಸೆಯರಿಗೆ ಊಟ ಮಾಡಿಸಿದ ನಂತರವೇ ಊಟ ಮಾಡುತ್ತಿದ್ದಳು. ಯಾರೊಡನೆಯೂ ಕೂಡ ಜಗಳವಾಡಿದ್ದು ನಾನು ನೋಡಿಲ್ಲವೆಂದು ಅವಳ ಹಿರಿಮಗಳು ಭಾರತಿ ಹೇಳುತ್ತಾಳೆ. ಬೇರೆಯವರಿಗೆ ತೃಪ್ತಿಪಡಿಸುವುದರಲ್ಲಿಯೇ ಅವಳಿಗೆ ಸಂತೋಷವಿತ್ತು.

1972ರ ಬರಗಾಲ :

1972ರಲ್ಲಿ ಬೀದರ ಜಿಲ್ಲಾದ್ಯಂತ ಮಳೆರಾಯನ ಕೃಪೆಯಾಗಲಿಲ್ಲ. ಆಗ ಭಯಂಕರ ಬರಗಾಲ! ಜನರು ಹಸಿವೆಯಿಂದ ಬಳಲುತ್ತಿದ್ದರು. ಅಂತಹ ದುರ್ಭರ ಪ್ರಸಂಗದಲ್ಲಿ ಮಲ್ಲಮ್ಮಳು ಮುತ್ತಂಗಿಯಲ್ಲಿ ಮೂರು ತಿಂಗಳು ಅಂಬಲಿಯ ದಾಸೋಹವಿಟ್ಟಳು. "ಅಳಿಲು ಭಕ್ತಿ ಮಳಲು ಸೇವೆ" ಎಂಬಂತೆ ಕೈಲಾದ ಮಟ್ಟಿಗೆ ಅಂಬಲಿ ಸೇವೆ ಮಾಡಿದಳು. ಲಮಾಣಿ ಮಕ್ಕಳು ಹಾಗೂ ಹಸಿದು ಬಂದವರು ಯಾರೇ ಇರಲಿ ಅವರ ಹಸಿವನ್ನು ತಣಿಸಿ ತೃಪ್ತಿಪಡುತ್ತಿದ್ದಳು.

ಇವರ ದಾಸೋಹ ಕಾರ್ಯದಲ್ಲಿ ಪತಿ ಶಂಕರೆಪ್ಪನವರು ಸಮ್ಮತಿ ಇತ್ತರು. ಇದಲಾಯಿಯಲ್ಲಿದ್ದಾಗ ನೆರೆಮನೆಯ ಅಜ್ಜಿಯೊಬ್ಬಳಿಗೆ ಅತ್ತೆಗೆ ಗೊತ್ತಿಲ್ಲದಂತೆ ಸೆರಗಿನಲ್ಲಿ ರೊಟ್ಟಿ ಮುಚ್ಚಿಟ್ಟುಕೊಂಡು ಕೊಟ್ಟು ಬರುತ್ತಿದ್ದಳೆಂದು. ಅವರ ಮಗಳು ಸುವರ್ಣಾ ಹೇಳುತ್ತಾಳೆ.

ಯಾರೊಡನೆಯು ಮಾತನಾಡಿದರು "ರಿ" ಹಚ್ಚಿ ಮಾತನಾಡುತ್ತಿದ್ದಳು ಎಂದು ಮಗಳು ಭಾರತಿ ತಾಯಿಯ ಗುಣಗಾನ ಮಾಡಿದಳು.

ಮೊಮ್ಮಕ್ಕಳ ಪಾಲನೆ :

ಹಿರಿಯ ಮಗಳಾದ ಭಾರತಿಯ ಪತಿ ಕರಕ್‌ಮುಕಳಿಯ ಬಸವರಾಜ ಪಾಟೀಲರು ಅಕಾಲಿಕ ನಿಧನರಾದರು. ಅವರ ಮಕ್ಕಳಾದ ಗಿರಿಜಾ, ಸೂರ್ಯಕಾಂತ ಮತ್ತು ಚಂದ್ರಕಾಂತ ಇವರನ್ನು ತಮ್ಮಲ್ಲಿಯೆ ಬೆಳೆಸಿ ಶಿಕ್ಷಣ ಕೊಡಿಸಿದಳು. ಅವಳ ಕಿರಿಯ ಮಗ ಚಂದ್ರಕಾಂತನು ಕಲಬುರ್ಗಿಯ ಎ.ಪಿ.ಎಂ.ಸಿ. (ಕೃಷಿ ಉತ್ಪನ್ನಗಳ ಮಾರಾಟ ಇಲಾಖೆ)ಯಲ್ಲಿ ಡೆಪ್ಯೂಟಿ ಜನರಲ್ ಮ್ಯಾನೇಜರ್‌ರಾಗಿ ಕಾರ್ಯನಿರ್ವಹಿಸುತ್ತಿದ್ದಾನೆ.

ಮತ್ತೊಂದು ಅವಳ ಮಹತ್ಕಾರ್ಯವೆಂದರೆ, ಪರಿತ್ಯಕ್ತೆಯಾದ ನಾದಿನಿ ಸೂಗಮ್ಮಳ ಮಗಳು ಶ್ರೀದೇವಿಗೆ ತಮ್ಮಲ್ಲಿ ಇಟ್ಟುಕೊಂಡು ಬೆಳೆಸಿ, ಶಿಕ್ಷಣ ಕೊಡಿಸಿದ ಪರಿಣಾಮದಿಂದ ಅವಳು ಈಗ ಬೀದರ ತಾಲೂಕಿನ ಬಂಬುಳಗಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿ ಜೀವನ ಸಾಗಿಸುತ್ತಿದ್ದಾಳೆ. ಮೈದುನರಾದ ವಿಶ್ವನಾಥನ ಮಗ ಈಶ್ವರಪ್ಪನನ್ನು ಮನೆಯಲ್ಲಿ ಬೆಳೆಸಿ, ಕಲಿಸಿ ದೊಡ್ಡವನನ್ನಾಗಿ ಮಾಡಿದಳು.

ಇಂತಹ ಸದ್ಗುಣಗಳು ಅವಳಲ್ಲಿ ಉದಯಿಸಿದ್ದು ಅವಳ ತಂದೆ ಶಿವರುದ್ರಪ್ಪ ಪುಣ್ಯಶೆಟ್ಟಿಯವರಿಂದ. ಅವಳ ತಂದೆಯವರು ಮನೆಗೆ ಶರಣರು ಅಥವಾ ಯಾರೇ ಆಗಲಿ ಬಂದರೆ ಇದ್ದುದ್ದರಲ್ಲಿ ಊಟ ಮಾಡಿಸಿ ತೃಪ್ತಿ ಪಡಿಸುತ್ತಿದ್ದರಂತೆ.

ಅಂತ್ಯಕಾಲ :

ಮಲ್ಲಮ್ಮಳು 2015ರ ಮೇ 15ರಂದು ತನ್ನ ಮಗಳಾದ ಭಾರತಿಯ ಮನೆಗೆ ಕಲಬುರ್ಗಿಗೆ ಹೋಗಿದ್ದಳು. ರಾತ್ರಿಯ ಸಮಯ 8 ಗಂಟೆಗೆ

ದಿನಕ್ಕಿಂತ ಹೆಚ್ಚು ಊಟ ಮಾಡಿದಳು. ಶೌಚಾಲಯಕ್ಕೆ ತಾನೊಬ್ಬಳೇ ಹೋದಳು. ತಿರುಗಿ ಬರುವಾಗ ಆಕಸ್ಮಿಕವಾಗಿ ಬೋರಲು ಬಿದ್ದಳು. ಬಿದ್ದಾಕೆ ಮತ್ತೇ ಏಳಲೇ ಇಲ್ಲ! ಹೃದಯಾಘಾತವಾಗಿ ಅವಳ ಪ್ರಾಣಪಕ್ಷಿ ಕಾಣದ ಲೋಕಕ್ಕೆ ಹಾರಿ ಹೋಯಿತು.

ಮಲ್ಲಮ್ಮಳ ಅಂತ್ಯಕ್ರಿಯೆ ನಾಗಇದಲಾಯಿಯಲ್ಲಿ ಜರುಗಿತು. ಗ್ರಾಮದ ಮಹಿಳೆಯರು ದುಃಖತಪ್ತರಾಗಿ ಮರುಗಿದರು. ಮುತ್ತಂಗಿಯ ಜನರಿಗೆ ಈ ಸಾವಿನ ಸುದ್ದಿ ತಿಳಿಯಿತು. ಬಹಳಷ್ಟು ಪರಿಚಿತರು ಸಹಾನುಭೂತಿ ತೋರಿಸಲು ಇದಲಾಯಿಗೆ ಬಂದು ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದರು. ಕರುಣಾಮಯಿಯಾದ ನಮ್ಮ ತಂಗಿಯು ಪತಿಯ ಮನೆಯಲ್ಲಿ ಎಲ್ಲರೊಡನೆ ಹೊಂದಿಕೊಂಡು ಬಾಳಿದಳು. ತವರು ಮನೆಗೆ ಹೆಸರು ತಂದಳು. ಇಷ್ಟೆಲ್ಲವನ್ನೂ ತೃಪ್ತಿಕರವಾಗಿ ಮಾಡಿದ ಮೇಲೆ ಪಂಚಭೂತಗಳಲ್ಲಿ ಲೀನವಾದಳು!

* * * * *

ಸಾಂಸ್ಕೃತಿಕ ಚಿಂತಕರು

ಹಿಂದಣ ಹೆಜ್ಜೆಯನರಿತಲ್ಲದೆನಿಂದ ಹೆಜ್ಜೆಯನರಿಯಬಾರದೆಂಬ ಅಲ್ಲಮ ಪ್ರಭುದೇವರ ಮಾತು ಇತಿಹಾಸದ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತದೆ. ಇತಿಹಾಸವೆಂದರೆ ಕೇವಲ ರಾಜ ಮಹಾರಾಜರ ವೈಭವದ ಬದುಕು, ಕೋಟೆ ಕೊತ್ತಲಗಳೇ ಅಲ್ಲ, ರಾಜ ಪರಿವಾರದ ಪರಿಸರ, ಅರಸರ ಸುತ್ತಲಿನ ಜನ ಸಾಮಾನ್ಯರ ಬದುಕಿನ ಏಳುಬೀಳುಗಳು, ಸಮಕಾಲೀನ, ಕಲೆ, ಸಾಹಿತ್ಯ, ಸಂಸ್ಕೃತಿ ಅವುಗಳ ಬೆಳವಣಿಗೆಗೆ ಪೂರಕವಾದ ಅಂಶಗಳೆಲ್ಲ ಸೇರಿ ಇತಿಹಾಸವಾಗುತ್ತದೆ. ಚಾರಿತ್ರಿಕವಾದ ಒಂದು ಕೋಟೆಗೆ ಎಷ್ಟು ಮಹತ್ವವೋ ಒಂದೂರಿನ ಹಳೆ ವಾಡೆ(ಘೂಡೆ)ಗಳಿಗೂ ಅಷ್ಟೇ ಮಹತ್ವವಿರುತ್ತವೆ. ಒಬ್ಬ ರಾಜ ರಾಣಿಗೆ ಇರುವಷ್ಟೆ ಮಹತ್ವ ಒಂದೂರಿನ ಜನಪರ ಕಾಳಜಿಯ ವ್ಯಕ್ತಿಗಳಿಗೂ ಇರುತ್ತದೆ. ಅಂಥ ಸಾಂಸ್ಕೃತಿಕ ವ್ಯಕ್ತಿಗಳ ಕಾರ್ಯ ಸಾಧನೆ ಕಾಲಗತಿಯಲ್ಲಿ ಮರೆಯಾಗಬಾರದೆಂಬ ಕಾರಣವಾಗಿ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿ ಸಮಾಜಕ್ಕೆ ಬೆಳಕಾದ ಸಾಧಕರ ಜೀವನ ಸಾಧನೆ ದಾಖಲಿಸಬೇಕಾಗಿರುವುದು ಪ್ರಜ್ಞಾವಂತ ಸಮಾಜದ ಹೊಣೆಗಾರಿಕೆ ಎಂದರಿತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ **ಸಾಂಸ್ಕೃತಿಕ ಚಿಂತಕರು ಮಾಲಿಕೆ** ಆರಂಭಿಸಿದೆ. ೧೭ನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಮೊದಲ ಹಂತದಲ್ಲಿ ೧೭ ಪುಸ್ತಕ ಹೊರತರುವ ಉದ್ದೇಶದಿಂದ ಈ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಸ್ಥಳೀಯ ಎಲ್ಲ ಸಾಂಸ್ಕೃತಿಕ ಚಿಂತಕರ ಜೀವನ ಸಾಧನೆ ಕುರಿತ ಪುಸ್ತಕಗಳನ್ನು ಹೊರತರಲಾಗುವುದು. ಹಿತ್ತಲೆ ಗಿಡ ಮದ್ದಲ್ಲ, ತಮ್ಮ ತಮ್ಮ ನೆಲದಲ್ಲಿ ಸಾಧಕರಿಗೆ ಮನ್ನಣೆ ದೊರೆಯಲಾರದು ಎಂಬ ತೆಲು ಗ್ರಹಿಕೆಯ ಮಾತಿವೆ. ಅದನ್ನು ಹುಸಿಗೊಳಿಸಲು ಸಾಧಕರ ಜೀವನ ಚರಿತ್ರೆ ಈ ಯೋಜನೆ ರೂಪಿಸಲಾಗಿದೆ. ಸಾಮಾನ್ಯವಾಗಿ ಜೀವನ ಚರಿತ್ರೆಗಳು ವಿವರಗಳ ಕಟ್ಟಾಗಿರುತ್ತವೆ. ಆದರೆ ಈ ಮಾಲಿಕೆಯ ಕೃತಿಗಳು ಹಾಗಲ್ಲ. ನಮ್ಮೆಲ್ಲರ ಅಂತಃಶಕ್ತಿ, ಪ್ರೇರಣೆಯಾಗಿದ್ದು, ಸತ್ಯ, ದಕ್ಷತೆ, ಪ್ರಾಮಾಣಿಕತೆ, ಕಾಯಕ ನಿಷ್ಠೆ, ದಾಸೋಹ ಜೀವನ, ಸಮಯ ಪ್ರಜ್ಞೆ ಇವುಗಳಿಗೆ ವ್ಯಾಖ್ಯಾನ ಬರೆದಂತೆ ಬದುಕಿದವರ ಚರಿತ್ರೆಗಳನ್ನು ಆಯ್ದುಕೊಳ್ಳಲಾಗಿದೆ ಇದೊಂದು ಅಪರೂಪದ ಮಾಲಿಕೆ. ಈ ಪುಸ್ತಕಗಳಲ್ಲಿ ಏಕಕಾಲಕ್ಕೆ ಹಲವು ವ್ಯಕ್ತಿಗಳ ಸಂಬಂಧಗಳನ್ನು ಜೋಡಿಸುವ, ಸಮಕಾಲೀನ ಸಾಂಸ್ಕೃತಿಕ ಚಿಂತನೆಗಳನ್ನು ಸಂಕ್ಷಿಪ್ತವಾಗಿ ದಾಖಲಿಸುವ ಮೂಲಕ ಪರಿಪೂರ್ಣ ರೂಪದ ಜೀವನ ಚರಿತ್ರೆ ಕಟ್ಟಿಕೊಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಈ ಸಾಧಕರ ಕುರಿತು ಅಧ್ಯಯನ ಮಾಡುವವರಿಗೆ ಈ ಕೃತಿ ಮೂಲ ಆಕರವಾಗುತ್ತದೆ ಎಂಬುದರಲ್ಲಿ ಅನುಮಾನವಿಲ್ಲ.

ಡಾ. ಬಸವರಾಜ ಬಲ್ಲೂರ

ಓಂ ಶ್ರೀ ಗುರುಬಸವಲಿಂಗಾಯ ನಮಃ

ಹುಟ್ಟು ಹೋರಾಟಗಾರ

ವಿ.ಎನ್. ಪಾಟೀಲ

ಅಡ್ಡ ದೊಡ್ಡ ನಾನಲ್ಲವಯ್ಯ
ದೊಡ್ಡ ಬಸುರು ಎನಗಿಲ್ಲವಯ್ಯ
ದೊಡ್ಡವರನಲ್ಲದೆ ನಮ್ಮ ಶರಣರು ಮನ್ನಿಸರಯ್ಯ
ಹಡೆದುಂಬ ಸೂಳೆಯಂತೆ ಧನವುಳ್ಳವರನರಸಿ ಅರಸಿ
ಬೋಧಿಸಲು ಪ್ರಾರ್ಥಿಸಲು ಮುನ್ನ
ನಾನರಿಯೆನಯ್ಯ ! ದೊಡ್ಡತನ ಎನಗಿಲ್ಲ
ಅಂಜುವೆ ಅಂಜುವೆ. ನಿಮ್ಮ ಪ್ರಮಥರಿಗೆ
ಅನಾಥ ನಾನಯ್ಯ ಕೂಡಲ ಸಂಗಮದೇವಾ.
– ಬಸವಣ್ಣನವರು.

ಇದು ಬಸವಣ್ಣನವರ ಮಹತ್ವದ ವಚನ. ಸಿರಿವಂತರು, ಬಡವರ ದೀನ–ದಲಿತರ ಬಗ್ಗೆ ಕನಿಕರ ಪಡದೆ ಉಪೇಕ್ಷಿಸುತ್ತಾರೆ. ಬಡವರ ಶೋಷಣೆ ಮಾಡುತ್ತಾರೆ. ಹೀಗೆ ತಮ್ಮ ಹೊಟ್ಟೆ ಬೆಳೆಸುತ್ತಲಿರುತ್ತಾರೆ ಎಂಬುದನ್ನು ಬಸವಣ್ಣನವರು ತಮ್ಮ ಅನೇಕ ವಚನಗಳಲ್ಲಿ ವ್ಯಕ್ತಪಡಿಸಿದ್ದಾರೆ. ಅವರು ಸಿರಿವಂತರ ಬಗೆಗೆ ಪ್ರತಿನಿಧಿಸುವವರಲ್ಲ ಎಂಬುದಕ್ಕೆ ಸಾಕ್ಷಿಯಾಗಿ ತಾವೂ ಕೂಡ ಅನಾಥರೆಂದು ಈ ವಚನದಲ್ಲಿ ವ್ಯಕ್ತಪಡಿಸಿದ್ದಾರೆ. ಇದಕ್ಕೆ ಪೂರಕವಾಗಿ ಖ್ಯಾತ ತತ್ತ್ವಜ್ಞಾನಿ ಚಿಂತಕ ರೂಸೊ ಅಭಿಪ್ರಾಯವೆಂದರೆ "ಅಧಿಕಾರ ಮನುಷ್ಯರನ್ನು ಭ್ರಷ್ಟರನ್ನಾಗಿಸುತ್ತದೆ" ಎಂಬ ಮಾತಿದೆ. ಆದರೆ ಈ ಎರಡೂ ಅಭಿಪ್ರಾಯಗಳು ಅಪವಾದವೆಂಬತೆ ಅಧಿಕಾರದಲ್ಲಿದ್ದು ಭ್ರಷ್ಟರಾಗದೆ, ಬಡವರ, ದೀನ ದಲಿತರ, ನಿರ್ಗತಿಕರ ಪರ ನಿಂತವರು, ಬಸವಣ್ಣನವರು

ಹುಟ್ಟು ಹೋರಾಟಗಾರರಾದ ವಿ.ಎನ್. ಪಾಟೀಲರು.

ಐನೂಲಿ ಎಂಬ ನಮ್ಮ ಪುಟ್ಟ ಗ್ರಾಮವು, ಸಾಂಸ್ಕೃತಿಕ ಹಿರಿಮೆಯ ಊರು ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಮುಲ್ಲಾಮಾರಿ ಉಪನದಿಯಾದ 'ಸರನಾಲಾ' ದಂಡೆಯ ಮೇಲೆ ಇದೆ. ನದಿಯ ದಡ ಬಹು ವಿಸ್ತಾರವಾಗಿದೆ. ಆಟಪಾಠಗಳಾಡಲು ವಿಸ್ತಾರವಾದ ಪರಿಸರ ಹಬ್ಬಿದೆ. ನಾನು ಸುಮಾರು ಹತ್ತು ವರ್ಷದವನಿರುವಾಗ ನದಿಯ ದಂಡೆಯು ಮೇಲೆ ಬಾಲಕರೊಂದಿಗೆ ಆಟವಾಡುತ್ತಿದ್ದೆನು. ಆ ಸಂದರ್ಭದಲ್ಲಿ ಕಾಠೆವಾಡದ ಕುದುರೆ ಮೇಲೆ ಒಬ್ಬ ಸವಾರ ಹೊರಟ್ಟಿದ್ದ! ಅವನ ಪಾದಗಳು 'ರಿಕಾಪಿ'ಯಲ್ಲಿ ಬಿಗಿದಿದ್ದವು. ಠೀವಿಯಿಂದ ಅವನು ಲಗಾಮು ಹಿಡಿದುಕೊಂಡು ಕುದುರೆಯನ್ನು ಓಡಿಸುತ್ತಿದ್ದ ಈ ದೃಶ್ಯವನ್ನು ಕಂಡಾಗ ಸವಾರನು ನನಗೆ ಚಾಲುಕ್ಯ ವಿಕ್ರಮನಂತೆ ಕಂಡನು. ನಾನು ಮೈಮರೆತು ಕುದುರೆಯ ಹಿಂಬಾಲಿಸಿ ಓಡತೊಡಗಿದೆ. ಆ ಕುದುರೆ ನಮ್ಮೂರಿನ ಪೋಲಿಸ ಪಾಟೀಲರಾದ ಬಂಡೆಪ್ಪಗೌಡರ ಮನೆಯ ಮುಂದೆ ಬಂದು ನಿಂತಿತು. ಅವರು ಯಾರೆಂಬುದು ಪರಿಚಯವಾಯಿತು. ಮೀನಕೇರಿಯ ವಿಶ್ವನಾಥ ಪಾಟೀಲರು ಮುಂದೆ ಅವರು ಶಾಸಕರಾಗಿ ಬೀದರ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ಬಡವರ ಹಿತಕ್ಕಾಗಿ ಶ್ರಮಿಸಿದ ನಾಯಕರಾದರು. ಅವರ ವ್ಯಕ್ತಿತ್ವ ನನ್ನ ಮೇಲೆ ಅಪಾರ ಪ್ರಭಾವ ಬೀರಿತು. ಒಬ್ಬ ಆದರ್ಶ ರಾಜಕಾರಣಿ ಹೇಗಿರಬೇಕೇಂಬುದಕ್ಕೆ ಅವರು ಮಾದರಿಯಾದರು.

ಭೌಗೋಳಿಕ ಪರಿಸರ :

ಯಾವುದೆ ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿಯ ಹಿಂದೆ ಅವನ ಸುತ್ತಲಿನ ಭೌಗೋಳಿಕ ಪರಿಸರವೇ ಮುಖ್ಯ ಕಾರಣವಾಗಿರುತ್ತದೆ. ಈ ಮಾತು ವಿ. ಎನ್. ಪಾಟೀಲರಿಗೂ ಅನ್ವಯಿಸುತ್ತದೆ.

ಮೀನಕೇರಿಯು ಬೀದರ ಜಿಲ್ಲೆಯ ಹುಮನಾಬಾದ ತಾಲೂಕಿನ ಒಂದು ಆದರ್ಶ ಗ್ರಾಮವಾಗಿದೆ. ಮೀನಕೇರಿ ಎಂಬ ಹೆಸರು ಬಂದುದು ಆ ಊರಿನ ದಕ್ಷಿಣಕ್ಕಿರುವ ಕೆರೆಯಿಂದ ಎಂದು ಹೇಳುತ್ತಾರೆ. ಈ ಕೆರೆಯು ಮೀನುಗಳಿಂದ ಶೋಭಿಸುತಿತ್ತು. ಈಗ ಆ ಕೆರೆಯು ಬತ್ತಿ ಹೋಗಿದೆ. ಕೆರೆಯ ಸ್ಥಾನದಲ್ಲಿ ಫಸಲು ಬೆಳೆಯುವ ಹೊಲಗಳಾಗಿವೆ.

ಈ ಊರಿನಲ್ಲಿ ಶಿಲಾಶಾಸನವಿತ್ತು. ಅದು ತಿಪ್ಪೆಯಲ್ಲಿ ಬಿದ್ದು ಜನರಿಂದ ಉಪೇಕ್ಷಿಸಲ್ಪಟ್ಟಿತ್ತು. ಈ ಸುದ್ದಿಯನ್ನು ಕೇಳಿ ಬೆಂಗಳೂರಿನ ಸುಪ್ರಸಿದ್ಧ ಇತಿಹಾಸಕಾರರು ಶಿಲಾಶಾಸನ ತಜ್ಞರುಗಳಾದ ತಿ.ತಾ. ಶರ್ಮಾರವರು ಬೀದರಿಗೆ ಬಂದಾಗ ಅವರನ್ನು ಮೀನಕೇರಿಗೆ ಕರೆದುಕೊಂಡು ಹೋದೆವು. ನಮ್ಮೊಂದಿಗೆ ವಸಂತಾಚಾರ್ಯ ಕುಷ್ಟಗಿಯವರು ಕೂಡ ಆಗಮಿಸಿದ್ದರು. ಇಲ್ಲಿಯವರೆಗೆ ಯಾರೂ ಆ ಶಿಲಾಶಾಸನವನ್ನು ಓದಿರಲಿಲ್ಲ! ಶರ್ಮಾರವರು ನಮಗೆ ಓದಿ ಹೇಳಿದಾಗ ಅಚ್ಚರಿ ಪಟ್ಟೆವು. ಈ ಶಾಸನದಲ್ಲಿ ಮೇಲೆ ಕತ್ತೆಯ ಚಿತ್ರವಿತ್ತು. ಅದರ ಕೆಳಗೆ ಹೀಗೆ ಬರೆದಿತ್ತು. "ಬಡವರಿಗೆ ದಾನ ಕೊಟ್ಟ ಈ ಭೂಮಿಯನ್ನು ಯಾರಾದರೂ ಮೋಸಗೊಳಿಸಿ ಕಬ್ಜೆ ಮಾಡಿಕೊಂಡರೆ ಮುಂದಿನ ಜನ್ಮದಲ್ಲಿ ಅವರು ಕತ್ತೆಯಾಗಿ ಜನಿಸಬೇಕಾಗುತ್ತದೆ" ಎಂದು ಎಚ್ಚರಿಕೆ ಕೊಟ್ಟಿತ್ತು. (ಪುರಾತತ್ವ ಇಲಾಖೆಯವರು ಈ ಶಾಸನವನ್ನು ತೆಗೆದುಕೊಂಡು ಹೋಗಿದ್ದಾರೆ.)

ಜಾಗೃತನೆಲ :

ಈ ಊರು ಈವತ್ತಿಗೂ ಜಾಗೃತನೆಲವಾಗಿದೆ. ಬಹುಮುಖ್ಯವಾಗಿ ಇಲ್ಲಿ ಅಧ್ಯಾತ್ಮವಾದಿಗಳು, ನಾಟಕಕಾರರು, ನಟರು, ಸಂಗೀತಗಾರರು ಹಾಗೂ ಸ್ವಾತಂತ್ರ್ಯ ಹೋರಾಟಗಾರರು ಹೀಗೆ ವೈವಿಧ್ಯಮಯವಾದ ಸಮಾಜಮುಖಿ ಜನ ಇಲ್ಲಿದ್ದಾರೆ.

ರೇಕುಳಗಿಯ ಶಂಭುಲಿಂಗೇಶ್ವರ ವೈರಾಗಿಗಳು ಮೊದಲು ಮೀನಕೇರಿಯ ಒಂದು ದಿಣ್ಣೆಯ ಮೇಲೆ ಆಶ್ರಮವಾಸಿಗಳಾಗಿದ್ದರಂತೆ. ಬಸಮ್ಮ ವಾಲಿಯವರು ಇಲ್ಲಿಯವರೆ. ಇನ್ನೂರು ವರ್ಷಗಳ ಕೆಳಗೆ ಬಸಮ್ಮ ವಾಲಿಯವರು ಸ್ತನ ಕ್ಯಾನ್ಸರ್ ರೋಗದಿಂದ ಬಳಲುತ್ತಿದ್ದರು. ಶಂಭುಲಿಂಗೇಶ್ವರ ಅವರು ಬಸಮ್ಮಳ ಕ್ಯಾನ್ಸರ್ ಗಡ್ಡೆಯನ್ನು ಬಾಯಿಯಿಂದ ಹೀರಿ ವಾಸಿ ಮಾಡಿದರು. ಅಂದಿನಿಂದ ಕುಟುಂಬಸ್ಥರಾದ ಬಸಮ್ಮನವರು ವೈರಾಗ್ಯವನ್ನು ತಾಳಿ ಅವರ ಸೇವೆಯಲ್ಲಿ ಅನುಗಾಲ ಕಾಲ ಕಳೆದರು. ಮೀನಕೇರಿಯಿಂದ ರೇಕುಳಗಿಗೆ ತಮ್ಮ ಆಶ್ರಮವನ್ನು ಶಂಭುಲಿಂಗೇಶ್ವರರು ಬದಲಾಯಿಸಿ ಸ್ಥಾಯಿಯಾಗಿ ಅಲ್ಲಿಯೆ ಉಳಿದು ಜನರಿಗೆ ಸನ್ಮಾರ್ಗವನ್ನು ತೋರಿಸಿದರು. ರೇಕುಳಗಿಯೂ ಬಸಮ್ಮ ತಾಯಿಯವರ ತವರೂರು. ಇವರಿಬ್ಬರ ನಿಧನ ಒಂದೇ ದಿನ, ಒಂದೇ ಸಮಯ ಘಟಿಸಿದ್ದು ಆಶ್ಚರ್ಯವಾಗಿದೆ!

ಪಂಚಯ್ಯಾ ಸ್ವಾಮಿಗಳು ಅಣ್ಣೆಪ್ಪ ರೊಡ್ಡ ಸಾಹಿತಿಗಳು, ಪ್ರವಚನಕಾರರು, ಮಲ್ಲಿಕಾರ್ಜುನ ಸ್ವಾಮಿ, ಪತ್ರಿಕೋದ್ಯಮಿಗಳು, ಸಂಜೀವಕುಮಾರ ಜುನ್ನಾ, ಚೆನ್ನಯ್ಯಾ ಹಿರೇಮಠ, ಮಲ್ಲಯ್ಯಾ ಸ್ವಾಮಿ ಮೊದಲಾದ ಪತ್ರಿಕೋದ್ಯಮಿಗಳೆಲ್ಲರು ಮೀನಕೇರಿಯವರಾಗಿದ್ದಾರೆ. ಈ ಗ್ರಾಮವು ಮಾದರಿ ಗ್ರಾಮವಾಗಿದೆ. ಧರ್ಮ ಸಹಿಷ್ಣುತೆ, ಸಾಮಾಜಿಕ ಸಮನ್ವಯತೆ ಈ ಊರಿನ ವಿಶೇಷತೆಗಳು. ಆದ್ದರಿಂದ ಅಕಸ್ಮಾತ ಇಲ್ಲಿ ಜಗಳ ತಂಟೆಗಳು ಆದರೆ ಅವುಗಳನ್ನು ಆದಷ್ಟು ಈ ಊರಿನಲ್ಲಿಯೇ ಪರಿಹರಿಸಿಕೊಳ್ಳುತ್ತಾರೆ.

ವಿಶ್ವನಾಥ ಪಾಟೀಲರು ಜನ್ಮವೆತ್ತಿ ಮೀನಕೇರಿ ಗ್ರಾಮವನ್ನು ಇಡೀ ರಾಜ್ಯದಲ್ಲಿಯೇ ಗುರುತಿಸುವಂತೆ ಮಾಡಿದ್ದಾರೆ.

ವಿಶ್ವನಾಥ ಪಾಟೀಲರವರ ವಂಶಾವಳಿ ಬಗ್ಗೆ ಪರಿಚಯ ಮಾಡಿಕೊಡಲು ಇಲ್ಲಿ ಪ್ರಯತ್ನಿಸಲಾಗಿದೆ.

ಕೂಡಿ ಬಾಳಿದರೆ ಸ್ವರ್ಗ ಸುಖ :

ಇಂದಿನ ಕಾಲದಲ್ಲಿ ಅವಿಭಕ್ತ ಕುಟುಂಬಗಳು ಕಂಡು ಬರುವುದು ಅಪರೂಪ. ಎಲ್ಲಾ ಕಡೆ ವಿಭಕ್ತ ಕುಟುಂಬಗಳೇ ಕಾಣುತ್ತವೆ. ಸ್ವಾರ್ಥ ತಲೆ ಎತ್ತಿದೆ. ಮದುವೆಯಾದ ಕೂಡಲೇ ವೃದ್ಧ ತಂದೆತಾಯಿಗಳನ್ನು ನಡು ನೀರಿನಲ್ಲಿ ಬಿಡುತ್ತಾರೆ. ಇದು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಬಂದಿದೆ. ಆದರೆ ಇದಕ್ಕೆ ಅಪವಾದವೆಂಬಂತೆ ಮೀನಕೇರಿ ಪೋಲಿಸಗೌಡರ ಮನೆತನ ಆದರ್ಶಪ್ರಾಯವಾಗಿತ್ತು. ಬಂಧು-ಬಾಂಧವರಲ್ಲಿ, ಅಣ್ಣ-ತಮ್ಮಂದಿರಲ್ಲಿ ಎಂತಹ ಆತ್ಮೀಯತೆ ಇತ್ತೆಂಬುದು ನನಗೆ ಸ್ವಲ್ಪ ಪರಿಚಯವಿತ್ತು. ವಿವರವಾಗಿ ತಿಳಿದುಕೊಳ್ಳಬೇಕೆಂಬ ಇಚ್ಛೆಯಿಂದ ಪಂಚಯ್ಯ ಸ್ವಾಮಿಗಳ ಬಳಿಗೆ ಹೋದೆನು. ಇವರು ಬೀದರಿನ ಕುಂಬಾರಗೇರಿಯ ಹನುಮಂತದೇವರ ಬಡಾವಣೆಯಲ್ಲಿ ವಾಸ ಮಾಡುತ್ತಾರೆ. ಇವರಿಗೆ ಜನ್ಮ ಕೊಟ್ಟ ಊರು ಮೀನಕೇರಿಯೇ ಆಗಿದೆ. ಇವರು ಪೋಲಿಸಗೌಡರ ಮನೆತನವನ್ನು ಸಮೀಪದಿಂದ ಬಲ್ಲವರಾಗಿದ್ದಾರೆ. ಅವರು ಹೇಳಿದ್ದು ಹೀಗೆ :

ಲಿಂಗಶೆಟ್ಟಿ ಪೋಲಿಸ ಪಾಟೀಲರಿಗೆ ಮೂರು ಜನ ಗಂಡು ಮಕ್ಕಳು. ಮೊದಲನೆ ಮಗ ನೀಲಪ್ಪಗೌಡ, ಎರಡನೆಯ ಮಗ ಗಿರಿಯಪ್ಪಗೌಡ ಹಾಗೂ ಮೂರನೆಯ ಮಗ ವೀರಶೆಟ್ಟಿಗೌಡ. ಇವರಿಗೆ 100 ಎಕರೆ ಸಾಗುವಳಿ ಭೂಮಿ ಇತ್ತು ಎಂದು ಆ ಕುಟುಂಬದ ಬಗ್ಗೆ ಪಂಚಯ್ಯನವರು ವಿವರವಾಗಿ ತಿಳಿಸಿದರು.

ಕೌಟುಂಬಿಕ ಪರಂಪರೆ :

ನೀಲಪ್ಪಗೌಡ :

ನೀಲಪ್ಪಗೌಡರು ಹಿರಿಯರಾದ ಕಾರಣ ಗ್ರಾಮದ ಪೋಲಿಸ ಪಾಟೀಲಕಿಯನ್ನು ನೋಡಿಕೊಳ್ಳುತ್ತಿದ್ದರು. ಒಕ್ಕಲುತನವೂ ಸಹ ಇವರ ಜವಾಬ್ದಾರಿಯಾಗಿತ್ತು. 'ಆಳಾಗಿ ದುಡಿ ಅರಸಾಗಿ ಉಣ್ಣು' ಎಂಬ ಗಾದೆ

ಇವರಿಗೆ ಅನ್ವಯಿಸುತ್ತದೆ. ಕಬ್ಬಿನ ಗಾಣ ನಡೆದಾಗ ಬೆಲ್ಲ ತೆಗೆಯುವ ಕೆಲಸವೂ ಇವರೇ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಅವರನ್ನು ಗೌಡರೆಂದು ಗುರುತಿಸುವುದು ಕಷ್ಟಕರವಾಗಿತ್ತು. ಗಾಣ ನಡೆದ ಕೊನೆಯ ದಿನದಂದು ತೆಗೆದ ಕಬ್ಬಿನ ರಸ, ಬಂಡಿಯ ಮೇಲೆ ಬ್ಯಾರಲ್‌ನಲ್ಲಿ ತುಂಬಿಕೊಂಡು ಊರವರಿಗೆಲ್ಲ ಹಂಚುತ್ತಿದ್ದರು. ಕಬ್ಬು ಮತ್ತು ಬೆಲ್ಲ ಮನೆಮನೆಗೆ ತಲುಪಿಸುತ್ತಿದ್ದರು. ಪರ ಊರಿನ ನೆಂಟರಿಷ್ಟರಿಗೂ ಕಳುಹಿಸುತ್ತಿದ್ದರು. ದಾಸೋಹಿಗಳಾದ ಇವರಿಗೆ ಊರಿನ ಜನರು ಬಹಳ ಗೌರವದಿಂದ ಕಾಣುತ್ತಿದ್ದರು. ಊರಿನ ಜಗಳ-ತಂಟೆಗಳು ಇವರಿಂದಲೇ ಬಗೆಹರಿಯುತ್ತಿದ್ದವು. ಅವರು ನಿರ್ಣಯಿಸಿದ ವ್ಯಾಜ್ಯಗಳನ್ನು ಯಾರೂ ಪ್ರಶ್ನಿಸುತ್ತಿರಲಿಲ್ಲ! ಅಣ್ಣತಮ್ಮಂದಿರು ಒಂದೇ ಪಂಕ್ತಿಯಲ್ಲಿ ಪ್ರತಿದಿನ ಊಟ ಮಾಡುವ ಪದ್ಧತಿಯನ್ನು ಇಟ್ಟುಕೊಂಡಿದ್ದರು. ಊಟದ ಸಮಯದಲ್ಲಿ ಯಾರಾದರೂ ತಪ್ಪಿಸಿಕೊಂಡರೆ ಅವರ ಬಗ್ಗೆ ವಿಚಾರಿಸುತ್ತಿದ್ದರು. ನೀಲಪ್ಪಗೌಡರ ಮಾತು ಅವರ ತಮ್ಮಂದಿರು ಮೀರುತ್ತಿರಲಿಲ್ಲ.

ಮೀನಕೇರಿಯ ಗಿರಿಯಪ್ಪ ಗೌಡರು :

ನಡೆ ಚೆನ್ನ ನುಡಿ ಚೆನ್ನ
ಎಲ್ಲಿ ನೀಡಿದೊಡೆ ಚೆನ್ನ
ಪ್ರಮಥರೊಳಗೆ ಚೆನ್ನ
ಪುರತನರೊಳಗೆ ಚೆನ್ನ, ಸವಿ ನೋಡ ಅಂಬಲ ರುಚಿಯಾಯಿತ್ತೆಂದು,
ಕೂಡಲ ಸಂಗಮದೇವಂಗೆ ಬೇಕೆಂದು ಕೈದೆಗೆದ ನಮ್ಮ ಚನ್ನ.

ಶ್ರೀ ಬಸವೇಶ್ವರರು ಮಾದಾರ ಚೆನ್ನಯ್ಯನವರ ಬಗೆಗೆ ಮೇಲೆ ಆಡಿದ ನುಡಿ ಮುತ್ತುಗಳು ಅವರ ಜೀವನದ ಬಗೆಗೆ ಬೆಳಕು ಚೆಲ್ಲುತ್ತವೆ. ಇದೇ 1901 ಇಸವಿ 12 ಆಗಷ್ಟಕ್ಕೆ ಬೀದರಿನ ಸರ್ಕಾರಿ ಆಸ್ಪತ್ರೆಯಲ್ಲಿ ನಿಧನರಾದ ಗಿರಿಯಪ್ಪ ಪಾಟೀಲರನ್ನು ಕುರಿತು ಬರೆಯಲು ಹೊರಟಾಗ

ಮೇಲಿನ ವಚನಗಳ ಸಾಲುಗಳು ಸ್ಮೃತಿ ಪಟಲದಲ್ಲಿ ಹಾದು ಹೋದವು. ತಾಯಿ ತಂದೆಗಳು ಇವರಿಗೆ ಗಿರಿಯಪ್ಪನೆಂಬ ಹೆಸರಿಟ್ಟರು. ಮೂರು ಜನ ಅಣ್ಣ ತಮ್ಮಂದಿರು. 1. ನೀಲಪ್ಪ ಗೌಡ (ಕಮ್ಯುನಿಷ್ಟ ಮುಖಂಡ ಮಾಜಿ ಶಾಸಕ ಶ್ರೀ ವಿ.ಎನ್. ಪಾಟೀಲರ ತಂದೆ) 2. ಗಿರಿಯಪ್ಪ ಗೌಡ 3. ವೀರಶೆಟ್ಟಿ ಗೌಡ "ಹುಟ್ಟುತ್ತಾ ಅಣ್ಣ ತಮ್ಮಂದಿರು ಬೆಳೆಯುತ್ತಾ ಭಾಗಾದಿಗಳು" ಎಂಬ ಗಾದೆಯ ಮಾತನ್ನು ಸುಳ್ಳು ಮಾಡಿ ತೋರಿಸಿದ ಮಹನೀಯರು ಇವರು.

ತಮ್ಮ ಜೀವಿತದ ಕೊನೆಗಾಲದವರೆಗೂ ಇವರು ಜಗಳವಾಡಿರಲಿಲ್ಲವೆಂದು ಗ್ರಾಮಸ್ಥರು ಹೇಳುತ್ತಾರೆ. ಮೂವರು ಅಣ್ಣ ತಮ್ಮಂದಿರು ಒಂದೇ ಪಂಕ್ತಿಯಲ್ಲಿ ಊಟ ಮಾಡಿದರೇನೆ ಅವರಿಗೆ ಸಮಾಧಾನ!

ನೀಲಪ್ಪ ಗೌಡರು ಗ್ರಾಮದಲ್ಲಿ ನ್ಯಾಯ ಬಗೆಹರಿಸುವವರು ಗಿರಿಯಪ್ಪ ಗೌಡರು ಊರಿನ ಸರ್ವತೋಮುಖ ಅಭಿವೃದ್ಧಿಗಾಗಿ ಗಂಧದಂತೆ ಶರೀರವನ್ನು ದಂಡಿಸಿದವರು ಕೊನೆಯವರು ವೀರಶೆಟ್ಟಿ ಗೌಡರು ಮನೆಯ ಒಕ್ಕಲುತನದ ಮೇಲ್ವಿಚಾರಣೆ ಮಾಡುವವರು. (ಈಗ ಮೂವರು ಉಳಿದಿಲ್ಲ) ಈ ರೀತಿ ಮುಪ್ಪುರಿಗೊಂಡ ಬಳ್ಳಿಯಂತೆ ಕೂಡಿಕೊಂಡು ಬಾಳಿದವರು.

ಗಿರಿಯಪ್ಪ ಗೌಡರು ಕಲಿತದ್ದು ಖಾನಗಿ ಶಾಲೆಯಲ್ಲಿ ಉರ್ದು, ಮರಾಠಿ ಆದರೆ ದೇಶ ಸ್ವಾತಂತ್ರ್ಯವಾದ ಬಳಿಕ ಮನೆಯಲ್ಲಿಯೇ ಓದಲು ಕನ್ನಡ ಪತ್ರವ್ಯವಹಾರ ಮಾಡಲು ಕಲಿತದ್ದಲ್ಲದೆ ತಪ್ಪದೆ ಸಂಯುಕ್ತ ಕರ್ನಾಟಕ ಪತ್ರಿಕೆ ಓದುವ ರೂಢಿಯನ್ನಿಟ್ಟುಕೊಂಡಿದ್ದರು.

ಇವರಿಗೆ ಮನೆಮಾರಿನ ಚಿಂತೆ ಎಳ್ಳಷ್ಟು ಇರಲಿಲ್ಲ ಸ್ವಾತಂತ್ರ್ಯ ಪಡೆದ ಬಳಿಕ ಮೀನಕೇರಿ ಗ್ರಾಮವನ್ನು ಜಿಲ್ಲೆಯಲ್ಲಿಯೇ ಮಾದರಿ ಗ್ರಾಮವನ್ನಾಗಿ ಮಾಡಲು ಪಣ ತೊಟ್ಟರು. ಇವರು ಗ್ರಾಮದ ಸರಪಂಚರಾಗಿ ಕಾಲು ಶತಮಾನಕ್ಕು ಮೀರಿ ಸೇವೆಗೈದಿದ್ದರು ಇವರ ಕಾಲಾವಧಿಯಲ್ಲಿ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡ, ಪಂಚಾಯತ ಕಾರ್ಯಾಲಯ

ಹಣಮಂತ ದೇವರ ಗುಡಿ, ಗ್ರಂಥಾಲಯ ಕಟ್ಟಡ, ಮೀನಕೇರಿಯಿಂದ ರಾಷ್ಟ್ರೀಯ ಹೆದ್ದಾರಿಯವರೆಗೆ ಮೂರು ಕಿಲೋಮೀಟರ್ ಉದ್ದದ ರಸ್ತೆ, ಊರಿನ ರಸ್ತೆಯ ಅಕ್ಕಪಕ್ಕದಲ್ಲಿ ನಾಲೆಗಳು, ಬೀದಿ ದೀಪಗಳು, ರಸ್ತೆಯ ಇಕ್ಕೆಲಗಳಲ್ಲೂ ಗಿಡಗಳು ಇವರ ಶ್ರಮದ ಫಲಗಳು.

ಸಹಕಾರಿ ಸಂಘದ ಅಧಕ್ಷರಾಗಿ ದೀರ್ಘಕಾಲ ಸೇವೆ ಸಲ್ಲಿಸಿ ರೈತರ ಹಿತ ಚಿಂತಕರೆಂಬ ಕೀರ್ತಿಗೆ ಪಾತ್ರರಾಗಿದ್ದರು. ಕೂಲಿಗಾರರಿಗೆ ಕೆಲಸ ಹಚ್ಚುವುದು ಪಡಿತರ ಧಾನ್ಯ ಬಡವರಲ್ಲಿ ನ್ಯಾಯೋಚಿತವಾಗಿ ವಿತರಿಸುವುದ ಗ್ರಾಮದ ಕೆಲಸಗಳಿಗಾಗಿ ಸ್ವತಃ ತಮ್ಮ ಜೇಬಿನಿಂದ ಹಣ ವೆಚ್ಚ ಮಾಡುವುದು ಇವರ ಜಾಯಮಾನವಾಗಿತ್ತು.

ಸ್ವಾತಂತ್ರ್ಯ ಹೋರಾಟದಲ್ಲಿಯೂ ಭಾಗವಹಿಸಿದವರು. ಸ್ವಾತಂತ್ರ್ಯ ಹೋರಾಟಗಾರರನ್ನು ಪತ್ತೆ ಹಚ್ಚಿ ಮಾಸಾಶನ ಕೊಡಲು ಬಂದಾಗ ಇವರು ಸ್ವೀಕರಿಸಲಿಲ್ಲವಂತೆ!

ಸದಾ ಬಿಳಿಯ ವಸ್ತ್ರದಲ್ಲಿ ಶೋಭಿಸುವ ಗಿರಿಯಪ್ಪಗೌಡರು ಪಂಚೆ ನೆಹರೂಶರ್ಟ ಹಾಗೂ ಗಾಂಧಿ ಟೋಪಿ ಮತ್ತು ಕನ್ನಡಕ ಧರಿಸುತ್ತಿದ್ದರು. ಅವರು ಮೃತಪಟ್ಟಾಗ 92 ವರ್ಷ ವಯಸ್ಸಾಗಿತ್ತು!

ಇವರು ಜನರಿಗೆ ತಂದೆಯ ಸ್ವರೂಪದಂತಿದ್ದರು. ಸುಮಾರು 15 ವರ್ಷಗಳ ಕಾಲ ತಮ್ಮ ಊರಿನ ಪಂಚಾಯತ ಅಧ್ಯಕ್ಷರಾಗಿದ್ದರು. ಹಾಗೂ ಗ್ರಾಮದ ಸೇವಾ ಸಹಕಾರಿ ಸಂಘದ ಅಧ್ಯಕ್ಷರಾಗಿ ಪ್ರಾಮಾಣಿಕತೆಯಿಂದ ಜನಸೇವೆ ಮಾಡಿದರು.

ಬೀದರ ಡಿಸಿಸಿ ಬ್ಯಾಂಕನಿಂದ ಹಣ ತರುವಾಗ ಒಂದಿಷ್ಟು ಚಿಲ್ಲರೆ ಹೆಚ್ಚು ಬಂದಿದ್ದನ್ನು ಮನೆಗೆ ಬಂದು ಎಣಿಸಿ ನೋಡಿದಾಗ ಕಂಡು ಬಂತು. ಆ ಚಿಲ್ಲರೆ ಹಣವನ್ನು ಹಿಂತಿರುಗಿಸಲು ಕೂಡಲೇ ಬಸ್ಸು ಹತ್ತಿ ಬೀದರಿನ ಡಿಸಿಸಿ ಬ್ಯಾಂಕ್‌ಗೆ ಬಂದು ಒಪ್ಪಿಸಿದರು. ಬಸವಣ್ಣನವರ ವಚನದಂತೆ ಪರಧನಕ್ಕೆ ಅಂಜುವವರಾಗಿದ್ದರು.

ಜನದನಿ ಸಂಪಾದಕರ ಅನುಭವ :

ಗಿರಿಯಪ್ಪ ಗೌಡರು ಆತ್ಮೀಯರು ಪ್ರಾಮಾಣಿಕರು ಎಂಬುದಕ್ಕೆ ಜನದನಿ ಸಂಪಾದಕ ಮಲ್ಲಿಕಾರ್ಜುನ ಸ್ವಾಮಿ ಅವರ ಮಾತಿನಲ್ಲಿ ಈ ರೀತಿ ಹೇಳುತ್ತಾರೆ.

ನಮ್ಮ ತಂದೆ ಚೆನ್ನವೀರಯ್ಯ ಸ್ವಾಮಿ 1970ರಲ್ಲಿ ಮೃತಪಟ್ಟಾಗ ನನಗೆ ಕೇವಲ 11 ವರ್ಷ ಎರಡು ವರ್ಷಗಳ ನಂತರ ಗಿರಿಯಪ್ಪಗೌಡರು ಒಂದು ದಿನ ನನ್ನನ್ನು ಕರೆದು "ಸ್ವಾಮಿ ನಿಮ್ಮ ತಂದೆಯವರು ಮೀನಕೇರಿ ಹಾಗೂ ವಿಠಲಪೂರ ಗ್ರಾಮದ ಮಧ್ಯದಲ್ಲಿ ಬರುವ ಮಲ್ಲಿಕಾರ್ಜುನ ದೇವರ ಗುಡಿ ಕಟ್ಟಿಸಿದಾಗ ಗುಡಿಗೆ ಕಳಸ ಏರಿಸಿದ ಕಾರ್ಯಕ್ರಮದಲ್ಲಿ ಊರಿನ ಜನರು ಅಯ್ಯಾರಿ ಮಾಡಿದ 27 ರೂಪಾಯಿಗಳು ನನ್ನಲ್ಲಿಯೇ ಇವೆ ಹಣ ವೃಥಾ ಹಾಳುಮಾಡುವುದು ಬೇಡ ನಿನಗೆ ಪುಸ್ತಕ ಹಾಗೂ ಫೀಸಿಗೆ ಬೇಕಾದಾಗ ಮಾತ್ರ ತೆಗೆದುಕೋ" ಎಂದರು.

ಫೀಸಿಗೆ, ಹಾಗೂ ಪುಸ್ತಕಕ್ಕೆ ಬೇಕಾದಾಗಲೆಲ್ಲಾ ಒಂದು ರೂಪಾಯಿ ಹಾಗೂ ಎರಡು ರೂಪಾಯಿ ತೆಗೆದುಕೊಳ್ಳುತ್ತಿದ್ದೆ ಈ ಲೆಕ್ಕ ಗೌಡರು ಸರಿಯಾಗಿ ಬರೆದಿಡುತ್ತಿದ್ದರು. ಆ 27 ರೂ. ಮೂರು ವರ್ಷಗಳವರೆಗ ಬೇಕಾದಾಗ ತೆಗೆದುಕೊಂಡೆನು. ಗಿರಿಯಪ್ಪ ಗೌಡರು ಎಂತಹ ಪ್ರಾಮಾಣಿಕರು ಎಂದು ಅವರ ಬಗ್ಗೆ ಗೌರವ ಭಾವನೆ ಮೂಡಿತು. ಗಿರಿಯಪ್ಪ ಗೌಡರು ಈಗ ಈ ಲೋಕದಿಂದ ಕಣ್ಮರೆಯಾಗಿದ್ದಾರೆ. ಆದರೆ ಅವರು 27ರೂ. ಪ್ರಾಮಾಣಿಕವಾಗಿ ಕೊಟ್ಟ ನೆನಪು ನನಗೆ ಹಸಿರಾಗಿ ಉಳಿದಿದೆ ಎಂದು ಮಲ್ಲಿಕಾರ್ಜುನ ಸ್ವಾಮಿ ಗೌಡರ ಪ್ರಾಮಾಣಿಕತೆಯ ಬಗ್ಗೆ ಹೇಳುತ್ತಾರೆ.

ಶರಣರಾದ ಪಂಚಯ್ಯ ಸ್ವಾಮಿಗಳು ಸಹಕಾರಿ ಸಂಘದ ಕಾರ್ಯದರ್ಶಿಗಳಾಗಿ ಗೌಡರ ಅಧೀನದಲ್ಲಿ ಕೆಲಸ ಮಾಡಿದವರು ತಾವು ಗಿರಿಯಪ್ಪ ಗೌಡರಿಂದ ಪ್ರಭಾವಿಕರಾದುದನ್ನು ಜ್ಞಾಪಿಸಿಕೊಳ್ಳುತ್ತಾರೆ. ಸಾರ್ವಜನಿಕ ಕಾರ್ಯಗಳಲ್ಲಿ ನಿಸ್ವಾರ್ಥ ಭಾವನೆಯಿಂದ ಕೆಲಸ ಮಾಡುವ

ಗಿರಿಯಪ್ಪ ಗೌಡರಂಥವರನ್ನು ಹಗಲು ಹೊತ್ತು ದೀಪ ಹಚ್ಚಿ ಹುಡುಕಿದರೂ ಸಿಗುವುದು ದುರ್ಲಭವೆಂದು ಅವರ ಅಭಿಮತವಾಗಿದೆ.

ಅವರನ್ನು ಕಂಡಾಗಲೆಲ್ಲಾ ಮಹಾತ್ಮಾ ಗಾಂಧಿಯವರ ಭಾವ ಚಿತ್ರದ ಕಣ್ಣಿಗೆ ಕಟ್ಟಿದಂತಾಗುತ್ತಿತ್ತು. ಆರು ಅಡಿಯಷ್ಟು ಎತ್ತರದ ತೆಳ್ಳಗಿನ ಬೆಳ್ಳಗಿನ ಶರೀರ ಕಣ್ಣಿಗೆ ಕನ್ನಡಕ ಮೈಯೆಲ್ಲಿ ಬಿಳಿಯ ನೆಹರು ಷರ್ಟ ಸದಾ ತಲೆಯ ಮೇಲೆ ಕಂಗೊಳಿಸುವ ಗಾಂಧಿ ಟೋಪಿ ಹೊರಗು ಬಿಳುಪು ಒಳಗು ಬಿಳುಪು ಗೌಡರ ವ್ಯಕ್ತಿತ್ವಕ್ಕೆ ಮಾರು ಹೋದವರೇ ಇಲ್ಲ

ಜೀವಿತ ಕೊನೆಗಾಲದಲ್ಲಿ ಅವರಿಗೆ ತೊಂಬತ್ತು ವರ್ಷಗಳಾಗಿದ್ದವು ಕಣ್ಣುಗಳು ಕಾಣಿಸುತ್ತಿರಲಿಲ್ಲ ಕಿವಿಗಳು ಕೇಳಿಸುತ್ತಿರಲಿಲ್ಲ ಆದರೇ ಕಾಲುಗಳು ಮಾತ್ರ ಒಂದೇ ಕಡೆ ಇರದೆ ಸದಾ ಚಲಿಸುತ್ತಲೇ ಇರುತ್ತಿದ್ದವು ಇಂಥ ದೈನ್ಯಾವಸ್ಥೆಯಲ್ಲಿಯು ಗೌಡರು ಇಷ್ಟ ಸಂಬಂಧಿಗಳ ಸುಖ ದುಃಖದಲ್ಲಿ ಭಾಗವಹಿಸಲು ಊರುರಿಗೆ ಹೋಗದೆ ಇರುತ್ತಿರಲಿಲ್ಲ ಸುಸಂಸ್ಕೃತರಾದ ಇವರು ಯಾರ ಮನಸ್ಸನ್ನು ನೋಯಿಸುವುದಾಗಲಿ ಅಥವಾ ಯಾರಿಂದ ಸೇವೆ ಮಾಡಿಸಿಕೊಳ್ಳುವುದಾಗಲಿ ಇಷ್ಟಪಡುತ್ತಿರಲಿಲ್ಲ. ಸ್ವಾವಲಂಬನೆ ಸೂತ್ರದ ಮೇಲೆ ಎಲ್ಲಿಲ್ಲದ ಆಸಕ್ತಿ.

ಅವರ ಹಿರಿಯ ಅಳಿಯಂದಿರು ನಾಗಶೆಟ್ಟಿ ಪುಣ್ಯಶೆಟ್ಟಿ ಐನೂಲಿ ಬೆಂಗಳೂರಿನಿಂದ ಅವರಿಗೆ ಕೈಗೋಲನ್ನು ತಂದು ಕೈಯ್ಯಾಸರೆಯಲ್ಲಿರಲಿ ಎಂದಾಗ ಅವರು ಕೊಲು ಹಿಡಿದು ತಿರುಗಾಡಲು ಇಷ್ಟಪಲಿಲ್ಲ! ತಿರುಗಿ ಅವರಿಗೆ ಕೊಟ್ಟರಂತೆ ಗಿರಿಯಪ್ಪ ಗೌಡರು ಹೆಸರಿಗೆ ತಕ್ಕಂತೆ ಗಿರಿಯ ಶಿಖರದಷ್ಟು ಎತ್ತರ ಜೀವನಾದರ್ಶವನ್ನಿಟ್ಟುಕೊಂಡಿದ್ದರು. ತಮ್ಮ ಮೊಮ್ಮಗನಿಗೆ ಎತ್ತಿಕೊಂಡು ಊರಿನಲ್ಲಿ ಅಡ್ಡಾಡುವಾಗ ಗೌಡರಿಗೆ ಎಮ್ಮೆಯೊಂದು ಢಿಕ್ಕಿ ಹೊಡೆಯಿತಂತೆ ಪರಿಣಾಮವಾಗಿ ಗೌಡರ ರೊಂಡಿ ಬಿಟ್ಟಿತ್ತು. ಕೂಡಲೇ ಅವರನ್ನು ಬೀದರಿನ ಸರ್ಕಾರಿ ಆಸ್ಪತ್ರೆಯಲ್ಲಿ ಸೇರಿಸಲಾಯಿತು. ಮಾತಾಡಲು ಬಂದವರ ಯೋಗಕ್ಷೇಮದ ಚಿಂತೆ

ಅವರಿಗೆ, ದೂರದಿಂದ ಏಕೆ ಬರಬೇಕಾಗಿತ್ತು ಎಂದು ಪ್ರಶ್ನಿಸುತ್ತಿದ್ದರಂತೆ ನನಗೆ ನೀವು ಬೇಗ ಸಾವು ಕೊಡಲೆಂದು ದೇವರಲ್ಲಿ ಪ್ರಾರ್ಥಿಸಿರಿ ಈ ಸ್ಥಿತಿಯಲ್ಲಿ ನಾನಿರುವುದು ಬೇಡ ಎಂದು ಹೇಳುತ್ತಿದ್ದರು.

ನೀನೊಲಿದರೆ ಕೊರಡು
ಕೊನರುವುದಯ್ಯಾ
ನೀನೊಲಿದರೆ ಬರಡು
ಹಯನಹುದಯ್ಯಾ
ನಿನೊಲಿದರೆ ಸಕಲ ಪಡಿ.
ಪದಾರ್ಥ ಇದಿರಲ್ಲಿಪ್ಪವು
ಕೂಡಲ ಸಂಗಮದೇವಾ

ಸಾಯುವ ಸಂದರ್ಭದಲ್ಲಿ ಅವರ ಬಾಯಿಯಿಂದ ಹೊರಟ ಅಣ್ಣನ ವಚನಾಮೃತವಿದು!

ಗಿರಿಯಪ್ಪ ಗೌಡರು ತಾವು ಬಯಸಿದಂತೆ ಯಾರಿಂದ ತೊಳೆಸಿಕೊಳ್ಳದೆ ಯಾರಿಗೂ ಭಾರವಾಗದೆ ಸಾವು ಅವರ ಪ್ರಾರ್ಥನೆಯಂತೆ ಬಂದೇ ಬಿಟ್ಟಿತ್ತು! (ಒಂದೆರಡು ದಿನ ಮಾತ್ರ ಹಾಸಿಗೆ ಹಿಡಿದದ್ದುಂಟು) ಇಂಥ ಭಾಗ್ಯ ಯಾರಿಗೆ ತಾನೆ ಸಿಗುತ್ತದೆ?

ವೀರಶೆಟ್ಟಿಗೌಡರು :

ಇವರು ಹೆಚ್ಚು ಕಲಿತವರಲ್ಲ. ತಮ್ಮ ಒಕ್ಕಲುತನ ಕೆಲಸದಲ್ಲಿ ಪೂರ್ಣಾವಧಿ ಸಮಯ ಕೊಡುತ್ತಿದ್ದರು. ನೀಲಪ್ಪಗೌಡರ ಅರ್ಧ ಕೆಲಸ ಇವರೇ ನೋಡಿಕೊಳ್ಳುತ್ತಿದ್ದರು. ಅಣ್ಣನವರಂತೆ ತಮ್ಮೂರಿನ ಸಣ್ಣಪುಟ್ಟ ತಂಟೆಗಳನ್ನು ಬಗೆಹರಿಸಿ ನ್ಯಾಯಾಲಯಕ್ಕೆ ಹೋಗಗೊಡುತ್ತಿರಲಿಲ್ಲ. ಇವರು ರಾಷ್ಟ್ರದ ಬಗ್ಗೆ ಅಪಾರವಾದ ನಿಷ್ಠೆವುಳ್ಳವರಾಗಿದ್ದರು. ಪತ್ರಿಕೆಗಳನ್ನು, ಕಾದಂಬರಿಗಳನನ್ನು ಓದಿಸಿ ಕೇಳುತ್ತಿದ್ದರು. ದುಃಖದ ಸನ್ನಿವೇಶ ಬಂದಾಗ ಅವರ ಕಣ್ಣುಗಳು ಒದ್ದೆಯಾಗುತ್ತಿದ್ದವು.

ಅದೇ ಊರಿನ ನಿವೃತ್ತ ಶಿಕ್ಷಕ ಶರಣಪ್ಪ ರೊಡ್ಡಾರವರು ವೀರಶೆಟ್ಟಿ ಗೌಡರ ಬಗ್ಗೆ ಹೇಳಿದ್ದು ಹೀಗೆ : ಸಂತ ವಿನೋಬಾ ಭಾವೆಯವರು ಆಂಧ್ರಪ್ರದೇಶದಲ್ಲಿ ಸುತ್ತಾಡಿ ಭೂದಾನದ ಚಳವಳಿ ಮುಗಿಸಿಕೊಂಡು ಜಹೀರಾಬಾದನಿಂದ ಹುಮನಾಬಾದದೆಡೆಗೆ ಪಾದಯಾತ್ರೆ ಮಾಡುತ್ತಿದ್ದ ಸಂದರ್ಭದಲ್ಲಿ ವೀರಶೆಟ್ಟಿಗೌಡರು ಕೂಡ ಭಾಗವಹಿಸಿದರು. ವಿನೋಬಾರವರ ಸಂಗಡ ಪಾದಯಾತ್ರೆ ಮಾಡುತ್ತ ಗುಜರಾತಿನ ಅಹಮದಾಬಾದಿನ ಸೇವಾಗ್ರಾಮಕ್ಕೆ ಹೋದರು. ಮನೆಯಲ್ಲಿ ಎಲ್ಲರೂ ಚಿಂತೆಗೀಡಾದರು. ಎಲ್ಲಾ ಕಡೆ ಹುಡುಕಿದರೂ ಪತ್ತೆಯಾಗಲಿಲ್ಲ. ಎರಡು ತಿಂಗಳಾದ ಬಳಿಕ ಗೌಡರು ಸೇವಾಗ್ರಾಮದಲ್ಲಿ ಇದ್ದಾರೆಂದು ತಿಳಿಯಿತು. ಅವರನ್ನು ಮನೆಗೆ ಕರೆ ತಂದರು.

ಕರುಣಾಳು :

ವೀರಶೆಟ್ಟಿ ಪಾಟೀಲರು ಸಂಕಟದಲ್ಲಿ ಸಿಲುಕಿದವರನ್ನು ಹೇಗೆ ಅನುಕಂಪ ತೋರಿಸುತ್ತಿದ್ದರು ಎಂಬುದಕ್ಕೆ ಅನೇಕ ನಿರ್ದಶನಗಳಿವೆ.
ನಾನು 1953ರಲ್ಲಿ ಹುಮನಾಬಾದ ತಾಲೂಕಿನ ಧುಮ್ಮನಸೂರಿನಲ್ಲಿ ಶಿಕ್ಷಕನಾಗಿದ್ದೆ. ರಜೆ ಪ್ರಾರಂಭವಾದ ಕಾರಣ ನಮ್ಮ ಸ್ವಗ್ರಾಮ ಐನೂಲಿಗೆ ಹೊರಟೆನು. ಹುಮನಾಬಾದಿನಿಂದ ಬಸ್ ಹತ್ತಿ ಮನ್ನಾಯಖೆಳ್ಳಿಯಲ್ಲಿ ಇಳಿದೆನು. ಅಲ್ಲಿಂದ ಕಾಲ್ನಡಿಗೆಯಿಂದ ಮೀನಕೇರಿ ತನಕ ಹೋಗುವಷ್ಟರಲ್ಲಿ ದೀಪ ಹಚ್ಚುವ ಹೊತ್ತಾಯಿತು. ಅಮಾಸಿಯ ಕತ್ತಲು ಎಲ್ಲೆಡೆಗೆ ಮುಸುಕಿತು. ಮೀನಕೇರಿ ದಾಟಿ ಹೊರ ಬಂದೆ ಹಳ್ಳದ ಉಸುಬಿನೊಳಗಿಂದ ತೇಕುತ್ತ ಹೊರಟ್ಟಿದ್ದೆನು. ನನ್ನೆದುರು ಕಾಳು ತುಂಬಿದ ಬಂಡಿಗಳು ಹೊರಟಿದ್ದವು. ಬಂಡಿಯ ಮೇಲೆ ದೃಢಕಾಯದ ವ್ಯಕ್ತಿಯೊಬ್ಬರು ಕುಳಿತಿದ್ದರು. "ಯಾರು ನೀವು ಹೋಗುವವರು?" ಎಂದು ನನ್ನನ್ನು ಕೇಳಿದರು. ನನ್ನ ಪರಿಚಯ ಅವರಿಗೆ ಮಾಡಿಕೊಟ್ಟೆನು. ಕೂಡಲೇ ಅವರು ಬಂಡಿಯಿಂದ ಕೆಳಗೆ ಜಿಗಿದರು. ಹುಸಿಕೋಪದಿಂದ ಇಂಥ ಕತ್ತಲೆಯಲ್ಲಿ ಹೋಗಲು ನಿನಗೆ

ಹುಚ್ಚು-ಗಿಚ್ಚು ಹಿಡಿದಿದೆಯೆ? ಎಂದರು. ಆಗ ನಾನು ಅವರಿಗೆ "ಚಾಂಗಲೇರಿಯ ದೇವಸ್ಥಾನದಲ್ಲಿ ತಂಗಿ ಮುಂಜಾನೆ ಎದ್ದು ಐನೂಲಿಗೆ ಹೋಗುವೆ" ಎಂದು ಉತ್ತರಿಸಿದೆನು. ಆಗ ಅವರು, ಇಲ್ಲಿಂದ ಎರಡು ಹರದಾರಿ (6 ಕಿ.ಮೀ.) ಚಾಂಗಲೇರಿ ದೂರವಿದೆ. ಇಂಥ ಕತ್ತಲೆಯಲ್ಲಿ ದಾರಿ ಕಾಣುವದೇ ದುಸ್ತರ ಹೇಗೆ ಮುಟ್ಟುವಿ (ಆಗ ಪಕ್ಕಾ ರಸ್ತೆಗಳೆ ಇರಲಿಲ್ಲ). ಎಂದು ಮರುಪ್ರಶ್ನಿಸಿದರು. ಆಗ ನಾನು ನಿರುತ್ತರನಾದೆ. ಕೈ ಹಿಡಿದು ಮನೆಗೆ ಕರೆದೊಯ್ದರು.

ಮನೆಯವರು ಪದ್ಧತಿಯಂತೆ ಕಾಲು ತೊಳೆದುಕೊಳ್ಳಲು ನೀರು ತಂದುಕೊಟ್ಟರು. ಆಗ ರಾತ್ರಿ 9 ಗಂಟೆಯಾಗಿತ್ತು. ಊಟಕ್ಕೆ ಎಲ್ಲರ ಸಂಗಡ ಪಂಕ್ತಿಯಲ್ಲಿ ಕುಳಿತೆನು. ನನ್ನ ಪಂಕ್ತಿಯಲ್ಲಿ ಕುಳಿತವರೆಂದರೆ ವೀರಶೆಟ್ಟಿ ಪಾಟೀಲ, ಗಿರಿಯಪ್ಪ ಪಾಟೀಲ, ವಿಶ್ವನಾಥ ಪಾಟೀಲ ಮತ್ತು ವೀರಭದ್ರಪ್ಪ ಪಾಟೀಲರು. ವಿ.ಎನ್. ಪಾಟೀಲರು ತಮ್ಮ ಹಿರಿಯರೊಡನೆ ಸಮಾಜವಾದಿ ಸಮಾಜ ಹಾಗೂ ಬಂಡವಾಳಶಾಹಿಗಳ ಬಗ್ಗೆ ಮಾತಾಡುತ್ತಿದ್ದರು. ಊಟದ ಪಂಕ್ತಿಯಲ್ಲಿಯೂ ಕೂಡ ಪಾಟೀಲರಿಗೆ ತಮ್ಮ ಪಕ್ಷದ ನಿಷ್ಠೆ ಎಷ್ಟಿತ್ತು ಎಂಬುದನ್ನು ನಾನು ಕಂಡು ಕೊಂಡೆನು. ರಾತ್ರಿ ಅಲ್ಲಿಯೇ ಕಳೆದೆನು. ಸೂರ್ಯ ಮೂಡುವ ಮೊದಲು ವೀರಶೆಟ್ಟಿ ಪಾಟೀಲರು ಒಬ್ಬ ಆಳನ್ನು ನೇಮಿಸಿ ನನ್ನನ್ನು ಕುದುರೆ ಮೇಲೆ ಹತ್ತಿಸಿ ಬೀಳ್ಕೊಟ್ಟರು. "ಇವರನ್ನು ಬಿಟ್ಟು ಬಾ" ಎಂದು ಆಳನ್ನು ಆಜ್ಞಾಪಿಸಿದರು. ನಾನು ಕುದುರೆ ಸವಾರಿ ಮಾಡುತ್ತಾ, ಚಾಂಗಲೇರಿಯ ಘಟ್ಟದ ಪ್ರಕೃತಿ ಸೊಬಗನ್ನು ಸವಿಯುತ್ತ ಧರಿ ಇಳಿದೆನು. ಅಲ್ಲಿಂದ ಆಳಿಗೆ ತಿರುಗಿ ಕಳುಹಿಸಿ ನಾನು ನಮ್ಮೂರಿಗೆ ತಲುಪಿದೆ.

ಗೌಡರು ದೇವರಂತೆ ಆ ಸಂದರ್ಭದಲ್ಲಿ ಪ್ರತ್ಯಕ್ಷರಾದರು. ಇಂದು ವೀರಶೆಟ್ಟಿ ಪಾಟೀಲರು ಭೌತಿಕವಾಗಿ ನಮ್ಮಿಂದ ಕಣ್ಮರೆಯಾಗಿದ್ದಾರೆ. ನನ್ನ ಮೇಲೆ ಅಂದು ಕರುಣೆ ತೋರಿದ ಪ್ರಸಂಗ ಇನ್ನೂ ಸ್ಮೃತಿಪಟಲದಲ್ಲಿ ಅಚ್ಚಳಿಯದೆ ಉಳಿದಿವೆ.

ಶ್ರಮ ಸಂಸ್ಕೃತಿಯ ನಾಯಕ :

ಮೀನಕೇರಿಯ ನಿವೃತ್ತ ಶಿಕ್ಷಕರಾದ ಅಣ್ಣೆಪ್ಪಾ ರೊಡ್ಡಾ ಅವರನ್ನು ಬಹಳ ದಿನಗಳಿಂದ ಹುಡುಕುತ್ತಿದ್ದೆನು. 'ಅರಸುವ ಬಳ್ಳಿ ಕಾಲಿಗೆ ತೊಡಕಿದಂತೆ' ಅವರು ನನಗೆ ಕರ್ನಾಟಕ ಸಾಹಿತ್ಯ ಸಂಘದಲ್ಲಿ ದೊರಕಿದರು. ಅವರು ಮೀನಕೇರಿ ಗ್ರಾಮದ ಸುಸಂಸ್ಕೃತ ವ್ಯಕ್ತಿಗಳು. ತಮ್ಮ ಗ್ರಾಮದ ಬಗ್ಗೆ ಸಂಪೂರ್ಣ ಮಾಹಿತಿ ಉಳ್ಳವರು. ಪಾಟೀಲರ ಮನೆತನದ ಬಗ್ಗೆ ಮಾಹಿತಿ ಮಾಡಿಕೊಡಲು ವಿನಂತಿಸಿದೆನು.

ನೀಲಪ್ಪ ಗೌಡರು ವಿ.ಎನ್. ಪಾಟೀಲರ ತಂದೆ. ಉದಾರಿಗಳು ಆಗಿದ್ದರು. ಹೊಲದಲ್ಲಿ ತಾವೇ ಸ್ವತಃ 'ಆಳಾಗಿ ದುಡಿದು ಅರಸಾಗಿ ಉಣ್ಣು' ಎಂಬಂತೆ ಸ್ವತಃ ದುಡಿಯುವ ಶ್ರಮ ಸಂಸ್ಕೃತಿಯ ನಾಯಕರಾಗಿದ್ದರು. ಅವರ ತೋಟದಲ್ಲಿ ಜಾಪಳ ಹಾಗೂ ಮೋಸಂಬಿ ಬನ ಬೆಳೆಸಿದರು. ಮನೆಯಿಂದ ತೋಟಕ್ಕೆ ಬುತ್ತಿ ತಂದವರಿಗೆ ಹಣ್ಣುಗಳನ್ನು ಕೊಟ್ಟು ಕಳುಹಿಸುತ್ತಿದ್ದರು.

ಮಹಾರಾಷ್ಟ್ರದ ಮಾಳೆಗಾಂವ ಕುದುರೆಗಳ ವ್ಯಾಪಾರಕ್ಕೆ ಪ್ರಸಿದ್ಧವಾಗಿದೆ. ಗೌಡರು ಕಾಠೇವಾಡದ ಕುದುರೆ ಕೊಂಡು ತರಲು ಹೋಗಿದ್ದರು. ಅವರಿಗೆ ಮಾವಿನ ಹಣ್ಣು ತಿನ್ನಬೇಕೆಂಬ ಆಸೆ ಆಗಿತ್ತಂತೆ. ಒಬ್ಬರೆ ಹೇಗೆ ತಿನ್ನಬೇಕೆಂದು ಅವರು ಬುಟ್ಟಿಗಟ್ಟಲೆ ಮಾವಿನ ಹಣ್ಣನ್ನು ಖರೀದಿಸಿ ತಮ್ಮ ಸುತ್ತಲಿನ ಜನರಿಗೆಲ್ಲ ಹಂಚಿ ತಾವು ತಿಂದರಂತೆ.

ನಾನು ಅಣ್ಣೆಪ್ಪನವರಿಗೆ ನೀಲಪ್ಪಗೌಡರ ತಮ್ಮ ಗಿರಿಯಪ್ಪಗೌಡರು ಹೇಗಿದ್ದರು ಎಂದು ಕೇಳಿದಾಗ ಆಗ ಅವರು, ಮನಬಿಚ್ಚಿ ಅವರ ಬಗ್ಗೆ ಹೇಳಿದರು. ಗಿರಿಯಪ್ಪಗೌಡರು ನಾವದಗಿ ರೇವಪಯ್ಯ ಸ್ವಾಮಿಗಳ ಭಕ್ತರಾಗಿದ್ದರು. ನಾವದಗಿ ಜಾತ್ರೆಗೆ ಪಾದಚಾರಿಯಾಗಿ ಹೋಗುತ್ತಿದ್ದರು. ಬಸವಣ್ಣನವರ ಬಗ್ಗೆ ಅಗಾಧವಾದ ಭಕ್ತಿಯಿತ್ತು. ಅವರು ಪ್ರಾಣ ಬಿಡುವಾಗ ಬಸವಣ್ಣನವರ ವಚನ ಹೇಳುತ್ತಲೆ ಪ್ರಾಣಬಿಟ್ಟರು.

ಗಿರಿಯಪ್ಪಗೌಡರ ಬಗ್ಗೆ ಅಣ್ಣೆಪ್ಪ ರೊಡ್ಡಾ ತಾವು ಗಿರಿಯಪ್ಪ ಗೌಡರ ಬಗ್ಗೆ ರಚಿಸಿದ ಕವಿತೆ ತೋರಿಸಿದರು.

ಸೌಮ್ಯ ಸ್ವಭಾವದ ಸಾತ್ವಿಕ
ದೀನ-ದಲಿತರ ಹಿತ ಚಿಂತಕ
ಕಟ್ಟುನಿಟ್ಟಿನ ಕಾನೂನು ಪಾಲಕ
ಸಾಕ್ಷರ ಗ್ರಾಮದ ಪ್ರೇರಕ
ಕನ್ನಡ ನುಡಿಯ ನೇತಾರ
ಪರಿಸರ ಪ್ರೇಮದ ಪ್ರವೀರ
ಗ್ರಾಮಾಭಿವೃದ್ಧಿಯ ಹರಿಕಾರ
ನಿರ್ಮಲ ಗ್ರಾಮದ ಗುರಿಕಾರ
ಸರ್ವ ಸಮತೆಯ ಬಂಧು
ಸಭ್ಯ, ಶಾಂತ, ಸುಜ್ಞಾನ ಸಿಂಧು
ಗ್ರಾಮದ ಹಿತಕ್ಕಾಗಿ ದುಡಿದಿರಿ ಅಂದು
ಎಲ್ಲರೂ ನೆನೆಯುತಲಿಹರು ಇಂದು.

ಒಲಿದುದು ಓಸರಿಸದು :

ಇದೊಂದು ಸಣ್ಣ ಘಟನೆ ಇರಬಹುದು. ಇದರ ಹಿಂದೆ ಒಂದು ತತ್ವವಿದೆ. ತನ್ನ ಬೆನ್ನಿಗೆ ಬಿದ್ದವರನ್ನು ಹೇಗೆ ನೋಡಿಕೊಳ್ಳಬೇಕು ಎಂದು ಶಿಬಿ ಚಕ್ರವರ್ತಿಯ ಪುರಾಣದ ಕಥೆ ತಿಳಿಸುತ್ತದೆ.

ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಿದ್ದೆನು. ನನ್ನ ಪ್ರತಿಸ್ಪರ್ಧಿಯಾಗಿ ಡಾ. ಜಿ.ಬಿ. ವಿಸಾಜಿ ಮತ್ತು ಪ್ರಾಧ್ಯಾಪಕ ಬಸವರಾಜ ಅಂಬಲಗಿಯವರು ಸ್ಪರ್ಧಿಸಿದ್ದರು. ಚುನಾವಣೆಯು ಬಹಳ ತುರುಸಿನದಾಗಿತ್ತು. ಕೇವಲ 13 ಮತದಾರರಿದ್ದರು. ಪೋಸ್ಟ್‌ಕಾರ್ಡಿನ ಮೂಲಕವೇ ಬರೆದು ನನ್ನನ್ನು ಆಯ್ಕೆ ಮಾಡಲು ಮತದಾರರಿಗೆ ಕೋರಿದೆನು. ಒಂದೊಂದು ಮತ ಬಹಳ

ಮೌಲ್ಯಯುತವಾಗಿದ್ದವು. ಮನ್ನಾಎಖೇಳ್ಳಿಯ ಮುಖ್ಯೋಪಾಧ್ಯಯರಾಗಿದ್ದ ಬಸವರಾಜ ಸೈನೀರ್ ಅವರ ಮತ ಪಡೆಯಲು ಕಷ್ಟಕರವೆನಿಸಿತು. ಏಕೆಂದರೆ ಅವರು ಜಿ.ಬಿ. ವಿಸಾಜಿಯವರ ಸಹಪಾಠಿಗಳಾಗಿದ್ದರು. ನಮ್ಮ ಅಣ್ಣನವರಾದ ಬಸವರಾಜನ ಮಗ ಪ್ರೊ. ರವೀಂದ್ರನಾಥನು ಅವರಿಂದ ಮತ ಪಡೆಯುವ ಉಪಾಯವನ್ನು ಸೂಚಿಸಿದನು. "ಬಸವರಾಜ ಸೈನೀರ್ ಮತ್ತು ಮೀನಕೇರಿಯ ಗಿರಿಯಪ್ಪಗೌಡರು ಬೀಗರಾಗಿದ್ದಾರೆ. ಗಿರಿಯಪ್ಪಗೌಡರನ್ನು ಸಂಪರ್ಕಿಸಿದರೆ ಅವರ ಮತ ನಿಮಗೆ ಸುಲಭವಾಗಿ ದೊರೆಯುತ್ತದೆ" ಎಂದು ಹೇಳಿದನು. ನಾನು ಬೀದರನಿಂದ ಬಗದಲ್‌ಗೆ ಬಸ್ಸಿನಿಂದಿಳಿದು ಅಲ್ಲಿಂದ ಒಂದು ಟ್ಯಾಕ್ಸಿ ಸೈಕಲ್ ಮಾಡಿಕೊಂಡು ಮಧ್ಯಾಹ್ನದ ಕೆಂಡ ಕಾರುವ ಬಿಸಿಲಿನಲ್ಲಿ ಮೀನಕೇರಿಗೆ ಪ್ರಯಾಣ ಬೆಳೆಸಿದೆನು. ನನ್ನ ಸುದೈವಕ್ಕೆ ಗಿರಿಯಪ್ಪಗೌಡರು ದೊರಕಿದರು. ಅವರ ಕೈಯಲ್ಲಿ ರೊಟ್ಟಿಗಂಟಿತ್ತು. ಆಳುಮಗನ ನ್ಯಾಯಾರಿಗಾಗಿ (ಅಲ್ಪ ಆಹಾರ) ತೋಟಕ್ಕೆ ಹೋಗುವ ತರಾತುರಿಯಲ್ಲಿದ್ದರು. "ಏನು ಪಂಚಪ್ಪ ಯಾವ ಕಡೆ ಬಂದಿ" ಎಂದು ಕೇಳಿದರು. ನಾನು "ಕ.ಸಾ.ಪ. ಚುನಾವಣೆಗೆ ನಿಂತಿದ್ದೇನೆ. ಬಸವರಾಜ ಸೈನೀರರು ಮತದಾರರಿದ್ದಾರೆ. ತಾವು ಅವರಿಗೆ ನನಗೆ ಮತ ಕೊಡುವಂತೆ ತಿಳಿಸಬೇಕು" ಎಂದು ಕೇಳಿದೆನು. (ಗಿರಿಯಪ್ಪಗೌಡರು ನನ್ನ ಸೋದರ ಸಂಬಂಧಿಗಳಾದ ಅಣ್ಣ ನಾಗಶೆಟ್ಟಿ ಪುಣ್ಯಶೆಟ್ಟಿಯವರ ಮಾವಂದಿರಾಗಬೇಕು.) ಕೂಡಲೇ ಅವರು ಹೊಲಕ್ಕೆ ಹೋಗುವದನ್ನು ತಡೆದು ತಮ್ಮ ಮಗ ಮಲ್ಲಿಕಾರ್ಜುನನನ್ನು ಕರೆದು "ಪಂಚಪ್ಪ ನಮ್ಮ ನೆಂಟರಿದ್ದಾರೆ. ನಿಮ್ಮ ಮಾವ ಬಸವರಾಜ ಸೈನೀರರಿಂದ ಅವರಿಗೆ ಮತ ಕೊಡಿಸಬೇಕಾಗಿದೆ. ನಾನು ಮನ್ನಾಯಖ್ಖೇಳ್ಳಿಗೆ ಹೋಗುತ್ತೇನೆ. ನೀನು ಆಳು ಮಗನಿಗೆ ರೊಟ್ಟಿ ಕೊಡಲು ಹೊಲಕ್ಕೆ ಹೋಗು" ಎಂದು ಹೇಳಿದರು. ಆಗ ನಾನು ಗೌಡರಿಗೆ ಇಷ್ಟು ಅವಸರವೇಕೆ? ಇನ್ನು 15 ದಿವಸ ಚುನಾವಣೆ ಇದೆ, ಮತ್ತೆ ಹೇಳುವಿರಂತೆ ಎಂದು ಹೇಳಿದೆನು. ಅದಕ್ಕೆ ಅವರು ಕೊಟ್ಟ ಉತ್ತರ ಮಾರ್ಮಿಕವಾಗಿದೆ.

“ನಮಗಿಂತಲೂ ಮೊದಲು ಬೇರೆ ಸ್ಪರ್ಧಿಗಳು ಬಂದು ಸೈನೀರರಿಂದ ಆಶ್ವಾಸನೆ ತೆಗೆದುಕೊಂಡು ಹೋದರೆ ನಮಗೆ ಒತ್ತಾಯಿಸಲು ಬರುವದಿಲ್ಲ. ಕಾರಣ ನೀನು ಸೈಕಲ್ ಹತ್ತಿ ಮನ್ನಾಏಖೇಳ್ಳಿಗೆ ಹೊರಡು ನಿನ್ನ ಹಿಂದಿನಿಂದಲೇ ಬಸ್ಸು ಹತ್ತಿ ಬರುತ್ತೇನೆ” ಎಂದು ನುಡಿದರು. ಕೂಡಲೇ ನಾನು 4 ಕಿ.ಮೀ. ದೂರವಿರುವ ಮನ್ನಾಏಖೇಳ್ಳಿಗೆ ಸೈಕಲ್ ಹತ್ತಿ ಹೊರಟೆನು. ಮನ್ನಾಯಖ್ಖೇಳ್ಳಿಯ ಅಂಚೆ ಕಚೇರಿ ಹತ್ತಿರವಿರುವ ಸೈನೀರ್ ಮನೆಗೆ ನಾನು ಬರುವಷ್ಟರಲ್ಲಿಯೇ ಗಿರಿಯಪ್ಪಗೌಡರು ನನಗೆ ಪ್ರತ್ಯಕ್ಷರಾದರು! ಸೈನೀರರು ಕೂಡ ಬೇರೆ ಕಡೆಗೆ ಹೋಗುವವರಿದ್ದರು. ಆಶ್ಚರ್ಯವೆಂದರೆ ಅವರು ಕೂಡ ಬೇಗನೆ ದೊರಕಿದರು. ಗಿರಿಯಪ್ಪಗೌಡರು ಸೈನೀರರಿಗೆ “ಪಂಚಪ್ಪನವರು ನಮ್ಮ ನೆಂಟರಿದ್ದಾರೆ ಹಾಗೂ ಇವರು ಒಳ್ಳೆಯ ಕೆಲಸಗಾರರು ಮತ್ತು ಕನ್ನಡ ಅಭಿಮಾನಿಗಳು ಕೂಡ. ಇವರಿಗೆ ನೀವು ಓಟು ಹಾಕಲೇಬೇಕೆಂದು ಒತ್ತಾಯಿಸಿದರು. ವಿಸಾಜಿಯವರು ಸೈನೀರರ ಸ್ನೇಹಿತರಾದ ಕಾರಣ ಸ್ವಲ್ಪ ಹಿಂದೆ-ಮುಂದೆ ನೋಡತೊಡಗಿದರು. ಕೊನೆಗೆ ಒಪ್ಪಿದರು. ಅಷ್ಟಕ್ಕೆ ಗಿರಿಯಪ್ಪಗೌಡರು ತೃಪ್ತಿ ಪಡದೆ “ಕೈ ಮೇಲೆ ಕೈ ಹಾಕಿರಿ ಆಗ ನನಗೆ ವಿಶ್ವಾಸ ಹುಟ್ಟುವದು” ಎಂದರು. ಕೂಡಲೆ ಸೈನೀರರು ಕೈ ಮೇಲೆ ಕೈ ಹಾಕಿದರು. ಆಗ ನನಗೆ ಎಲ್ಲಿಲ್ಲದ ಸಂತೋಷವಾಯಿತು. ಚುನಾವಣೆ 2 ದಿವಸವಿದ್ದಾಗ ಪುನಃ ನಾನು ಸೈನೀರರ ಹತ್ತಿರ ನೆನಪು ಮಾಡಿ ಕೊಡಲು ಹೋದೆನು. ಆಗ ಅವರು “ನೀವು ನನಗೆ ಭೇಟಿಯಾಗಬೇಡಿರಿ. ನಮ್ಮ ಬೀಗರು ನಾಲ್ಕಾರು ಸಲ ಭೇಟಿಯಾಗಿ ನೆನಪು ಕೊಡುತ್ತಲಿದ್ದಾರೆ” ಎಂದು ಹೇಳಿದರು. ಚುನಾವಣೆ ಮುಗಿಯಿತು. ನನಗೆ 6 ಮತಗಳು, ವಿಸಾಜಿಗೆ 4 ಮತಗಳು ಹಾಗೂ ಅಂಬಲಗಿಗೆ 3 ಮತಗಳು ಬಂದವು. ಗೆಲುವು ನನ್ನದಾಯಿತು. ಇದಕ್ಕೆ ಗೌಡರೇ ಕಾರಣರೆಂದು ಹೇಳಬಹುದು.

‘ಸಮಯ ಬಡಾ ಬಲವಾನ’ ಎನ್ನುತ್ತಾರೆ. ಪುರುಷ ಪ್ರಯತ್ನ ಮತ್ತು ದೈವೇಚ್ಛೆ ಇದ್ದರೆ ಮಾತ್ರ ಜಯ ಹೊಂದಬಹುದು ಎಂದು ಈ ಪ್ರಸಂಗದಿಂದ ತಿಳಿದು ಬರುತ್ತದೆ.

ವೀರಶೆಟ್ಟಿ ಪಾಟೀಲರು :

ವಿ.ಎನ್. ಪಾಟೀಲರ ಚಿಕ್ಕಪ್ಪಂದಿರಾದ ವೀರಶೆಟ್ಟಿ ಪಾಟೀಲರ ಬಗ್ಗೆ ಶರಣಪ್ಪನವರು ವರ್ಣಿಸಿದ್ದು ಹೀಗೆ "ವೀರಶೆಟ್ಟಿ ಪಾಟೀಲರು ಕಟ್ಟು ಮಸ್ತಿನ ದೇಹದಾರ್ಢ್ಯವುಳ್ಳವರಾಗಿದ್ದರು. ಭೀಮಕಾಯ ಅವರದು. ಆದರೆ ಅಂತಃಕರಣಿಗಳಾಗಿದ್ದರು. ಊರಿನಲ್ಲಿ ಒಳ್ಳೆದು ಕೆಟ್ಟದು ಏನೇ ನಡೆಯಲಿ ಅವರ ಸುಪರ್ದಿಯಲ್ಲಿಯೇ ನಡೆಯುತ್ತಿತ್ತು. ಬಡವರು ಶ್ರೀಮಂತರೆಂಬ ತಾರತಮ್ಯ ಅವರಲ್ಲಿ ಇರಲಿಲ್ಲ. ಬಡವರ ಮನೆಗೆ ಊಟಕ್ಕೆ ತಪ್ಪದೆ ಹೋಗುತ್ತಿದ್ದರು. ಸೂಕ್ತ ನ್ಯಾಯ ನಿರ್ಣಯ ಮಾಡುತ್ತಿದ್ದರು. ಭಾಗಾದಿಗಳ ಆಸ್ತಿಯ ಬಗ್ಗೆ ಇದ್ದ ಜಗಳಗಳನ್ನು ಕೋರ್ಟು ಕಚೇರಿಗೆ ಹೋಗದೆ ತಾವೇ ಊರಿನಲ್ಲಿಯೇ ಬಗೆಹರಿಸುತ್ತಿದ್ದರು. ಅವರ ಬಾಹುಬಲ ಹೇಗಿತ್ತೆಂಬುದನ್ನು ಒಂದು ನಡೆದ ಘಟನೆಯನ್ನು ರೊಡ್ಡಾ ಅವರು ಹೇಳಿದರು.

ಎತ್ತಿನ ಬಂಡಿ ಕೆಸರಲ್ಲಿ ಹೂತು ಹೋಗಿತ್ತು. ಎತ್ತುಗಳು ಎಷ್ಟೇ ಎಳಿದಾಡಿದರೂ ಬಂಡಿಯು ಮುಂದೆ ಹೋಗಲಿಲ್ಲ. ಎತ್ತಿನ ಕಷ್ಟವನ್ನು ನೋಡದೆ ಗೌಡರು "ದಯವಿರಬೇಕು ಸಕಲ ಪ್ರಾಣಿಗಳಲ್ಲಿ" ಎಂಬ ಬಸವಣ್ಣನವರ ವಚನದಂತೆ ಒಂದು ಹಂಚಿಕೆ ಹೂಡಿದರು. ಬಂಡಿಯ ಕೆಳಗೆ ಕಂಬಳಿ ಹಾಸಿದರು. ಅದರ ಮೇಲೆ ಮಲಗಿದರು. ಬಂಡಿಯ ಧುರಿಗೆ ಎರಡು ಕಾಲುಗಳು ಹಚ್ಚಿ ಬಂಡಿಯನ್ನೇ ಮೇಲಕ್ಕೆ ಎಬ್ಬಿಸಿದರು. ಆಗ ಎತ್ತುಗಳು ನಿರಾಯಾಸವಾಗಿ ಬಂಡಿಯನ್ನು ಎಳೆದುಕೊಂಡು ಹೋದವು !

ಮೂರನೆ ಒಂದು ಮಹತ್ವದ ಮಾತು ಶರಣಪ್ಪನವರು ಹೇಳಿದರು. ವೀರಶೆಟ್ಟಿ ಪಾಟೀಲರು ಮೊದಲು ಆರ್ಯ ಸಮಾಜದ ಪ್ರಭಾವಕ್ಕೆ ಒಳಗಾಗಿದ್ದರು. ಬಂಥನಾಳ ಸ್ವಾಮಿಗಳು ಮೀನಕೇರಿಗೆ ಬಂದಾಗ ಅವರ ವಿದ್ವತ್ತಿಗೆ ಪ್ರಭಾವಿತರಾದರು. ಲಿಂಗವಂತ ಧರ್ಮದ ಮಹತ್ವವನ್ನು ಅವರಿಂದ ಅರಿತರು. ಅವರಿಗೆ ಸ್ವಧರ್ಮದಲ್ಲಿ ಆಸಕ್ತಿ ಹುಟ್ಟಿತು. ಅವರಿಂದ ಲಿಂಗದೀಕ್ಷೆ

ಪಡೆದರು. ಲಿಂಗಾರ್ಚನೆ ಮಾಡದೆ ಬಾಯಿಯಲ್ಲಿ ನೀರು ಕೂಡ ಹಾಕುತ್ತಿರಲಿಲ್ಲ! ಆಯುಷ್ಯದ ಕೊನೆಯವರೆಗೆ ತಮ್ಮ ವ್ರತವನ್ನು ಹೀಗೆಯೇ ಪಾಲಿಸಿಕೊಂಡು ಬಂದರು". ಈ ಮೂವರು ಸಹೋದರರ ಸಾರ್ಥಕ ಜೀವನ ಓದುಗರ ಮೇಲೆ ಗಾಢವಾದ ಪರಿಣಾಮ ಬೀರುವುದರಲ್ಲಿ ಯಾವ ಸಂದೇಹವಿಲ್ಲವೆಂದು ಆಗ ನನಗನಿಸಿತು.

ಸಾಂಸ್ಕೃತಿಕ ನಾಯಕರು :

ಮೀನಕೇರಿ ಒಳಗೊಂಡಂತೆ ಸುತ್ತಲಿನ ಗ್ರಾಮಗಳ ಪರಿಸರ ಸಾಂಸ್ಕೃತಿಕ ನಾಯಕರಿಂದ ತುಂಬಿತ್ತು.

ವೀರುಪಾಕ್ಷಪ್ಪ ಪಾಟೀಲ :

ಮೀನಕೇರಿ ಸುತ್ತ ಮನ್ನಾಎಖೇಳ್ಳಿ, ಮುತ್ತಂಗಿ, ನಿರ್ಣಾ, ಬೇಮಳಖೇಡಾ, ಚಾಂಗಲೇರಾ, ಕರಕನಳ್ಳಿ, ಬಗದಲ್ ಮುಂತಾದ ಹಳ್ಳಿಗಳು ಇವೆ. ಹೈದರಾಬಾದ ರಾಜ್ಯವು ಇನ್ನೂ ಅಸ್ತಿತ್ವದಲ್ಲಿತ್ತು. ಈ ಭಾಗವು ವಿಶಾಲ ಮೈಸೂರು ರಾಜ್ಯದಲ್ಲಿ ಸೇರಿರಲಿಲ್ಲ. ಅತ್ಯಂತ ಹಿಂದುಳಿದ ಈ ಗ್ರಾಮಗಳನ್ನು ಅಲ್ಲಿಯ ನಾಯಕರು ಗ್ರಾಮಾಭಿವೃದ್ಧಿ ಕೆಲಸದಲ್ಲಿ ತೊಡಗಿದರು. ಅವರ ಪ್ರಯತ್ನದ ಫಲವಾಗಿ ಜಾಗೃತ ಹಳ್ಳಿಗಳಾದವು. ಬೇಮಳಖೇಡ ಬಹಳ ಮುಂದೆ ಬರಬೇಕಾದರೆ ವೀರುಪಾಕ್ಷಪ್ಪಗೌಡರೇ ಕಾರಣರೆಂದು ಹೇಳುತ್ತಾರೆ. ಸುತ್ತಲಿನ ಹಳ್ಳಿಗಳಲ್ಲೆಲ್ಲಾ ಪ್ರಸಿದ್ಧಿ ಪಡೆದಿದ್ದರು. ಪ್ರಗತಿಪರ ವಿಚಾರದ ಈ ಗೌಡರು ಗ್ರಾಮಾಭಿವೃದ್ಧಿಗಾಗಿ ಮಾಡಿದ ಕಾರ್ಯಗಳು ತಿಳಿದುಕೊಳ್ಳಬೇಕೆಂದು ನನ್ನ ಮನಸ್ಸಾಯಿತು. ಈ ವಿಷಯವನ್ನು ತಿಳಿದುಕೊಳ್ಳಲು ಆಕಸ್ಮಾತ್ ಆಗಿ ಅವರ ಹಿರಿಯ ಸುಪುತ್ರ ವಿಶ್ವನಾಥ ಪಾಟೀಲರು ರಂಗ ಮಂದಿರದಲ್ಲಿ ಭೇಟಿಯಾದರು. ಅವರು ಹೀಗೆ ಹೇಳಿದರು. "ಬೇಮಳಖೇಡದಲ್ಲಿ ಶಾಲಾ ಕಟ್ಟಡಗಳು ಅವರಿಂದಲೇ ನಿರ್ಮಾಣಗೊಂಡವು. ಪ್ರಾಥಮಿಕ ಶಾಲೆಯ ಕಟ್ಟಡಕ್ಕಾಗಿ ನಮ್ಮ ತಂದೆಯವರು 3 ಎಕರೆ ಭೂಮಿ ದಾನ ಮಾಡಿದರು. ವಿದ್ಯುಚ್ಛಕ್ತಿ,

ಪಂಚಾಯತ ಕಟ್ಟಡ, ಪಶು ಚಿಕಿತ್ಸಾಲಯ, ಧಾನ್ಯದ ಉಗ್ರಾಣ ಮುಂತಾದ ಕಟ್ಟಡಗಳು ಅವರ ಪ್ರಯತ್ನದಿಂದಲೇ ನಿಂತಿವೆ.

ಬೇಮಳಖೇಡದಿಂದ ಭಂಗೂರಗೆ ರಾಷ್ಟ್ರೀಯ ಹೆದ್ದಾರಿ 9ಕ್ಕೆ ಸಂಪರ್ಕಿಸುವ ರಸ್ತೆಯೇ ಇರಲಿಲ್ಲ. ರೋಗಿಗಳಿಗೆ, ವಿಶೇಷವಾಗಿ ಬಾಣಂತಿಯರಿಗೆ, ಹೆಣ್ಣು ಮಕ್ಕಳಿಗೆ ತುರ್ತಾಗಿ ತಲುಪಿಸಲು ಸಮಯಬೇಕಾಗುತ್ತಿತ್ತು. ಗೌಡರು ಗ್ರಾಮಸ್ಥರ ಸಹಾಯ ಮತ್ತು ಶ್ರಮದಾನದಿಂದ ಕೆಲವೇ ದಿವಸಗಳಲ್ಲಿ ರಸ್ತೆ ನಿರ್ಮಾಣಕ್ಕೆ ಕಾರಣರಾದರು. ಜನರಿಗೆ ಅನುಕೂಲವಾಯಿತು. ಸ್ವತಃ ನಮ್ಮ ತಂದೆಯವರು ತಾಯಿ ನಾಗಮ್ಮನವರು ಜನರೊಂದಿಗೆ ಸೇರಿಕೊಂಡು ಶ್ರಮದಾನ ಮಾಡಿದರು". ಗೌಡರು 1950ರಿಂದ 1960ರವರೆಗೆ ಹತ್ತು ವರ್ಷ ಸರಪಂಚರಾಗಿದ್ದರು. ಚಪರಾಸಿ ಚಂದ್ರಪ್ಪ ತುಪಾಕಿ, ವೀರಪಾಕ್ಷಪ್ಪನವರ ಪ್ರತಿಯೊಂದು ಗ್ರಾಮಾಭಿವೃದ್ಧಿ ಕೆಲಸಗಳಲ್ಲಿ ಅವರ ನೆರಳಾಗಿ ದುಡಿದನು.

ಸಾಮರಸ್ಯದ ಹರಿಕಾರ ವೀರುಪಾಕ್ಷಪ್ಪ ಗೌಡರು :

ಅವರು ಮಾಡಿದ ಹರಿಜನೋದ್ಧಾರ ಕಾರ್ಯಗಳ ಬಗ್ಗೆ ನಿವೃತ್ತ ಪ್ರಾಧ್ಯಾಪಕರಾದ ಸಂಗಯ್ಯ ಮಠಿ ಅವರೊಂದಿಗೆ ಚರ್ಚಿಸಿದೆನು. ಇಡೀ ಜಿಲ್ಲೆಯಲ್ಲಿಯೇ ಪ್ರಪ್ರಥಮ ಅಸ್ಪೃಶ್ಯೋದ್ಧಾರಕ್ಕಾಗಿ ದುಡಿದ ಸರಪಂಚ ಮಹನೀಯರು ಎಂದರೆ ಗೌಡರು! ಅಸ್ಪೃಶ್ಯತೆಯ ಕಳಂಕವನ್ನು ನಮ್ಮೂರಿನಿಂದ ಸಂಪೂರ್ಣ ನಿವಾರಿಸಿದ್ದಾರೆ. ಹನುಮಂತ ದೇವಸ್ಥಾನದಲ್ಲಿ ಎಲ್ಲರು ದೇವರ ದರ್ಶನಕ್ಕಾಗಿ ಬರುತ್ತಾರೆ. ದೇವರ ಖಾಂಡ ಮಾಡಿದ ಸಂದರ್ಭದಲ್ಲಿ ಸಹಭೋಜನ ನಡೆಯುತ್ತದೆ. ಹರಿಜನರು, ಲಿಂಗವಂತರಂತೆ ಅನೇಕರು ಲಿಂಗಧಾರಿಗಳಾಗಿದ್ದಾರೆ. ಉರಿಲಿಂಗಪೆದ್ದಿ ಮಠದ ಸಿ.ಜಿ. ಸ್ವಾಮಿಗಳು ಮತ್ತು ವೀರುಪಾಕ್ಷಪ್ಪ ಗೌಡರು ದೇಹ ಎರಡಾದರೂ ಮನಸ್ಸು ಮಾತ್ರ ಒಂದೇ ಆಗಿತ್ತು. ಗೌಡರ ಊಟೋಪಚಾರ ಆಗಾಗ ಮಠದಲ್ಲಿಯೇ ನಡೆಯುತ್ತಿತ್ತು ಎಂದು ಸಂಗಯ್ಯಾ ಮಠಿ ಹೇಳಿದರು.

ದಯವೇ ಧರ್ಮದ ಮೂಲ :

ವೀರಪಾಕ್ಷಪ್ಪ ಗೌಡರು ದಯಾಮಯಿಗಳಾಗಿದ್ದರು. ಅಹಿಂಸೆ ಅವರ ಜೀವನ ಸಿದ್ಧಾಂತವಾಗಿತ್ತು. ದಯವೇ ಧರ್ಮದ ಮೂಲವೆಂಬ ಬಸವಣ್ಣನವರ ತತ್ವದಲ್ಲಿ ನಂಬಿಕೆ ಉಳ್ಳವರಾಗಿದ್ದರು. ಆದರೆ ಹಿಂಸೆಯಿಂದ ಕೊನೆಯುಸಿರು ಬಿಡಬೇಕಾಯಿತು.

ನಿರ್ಣಾದ ವಕೀಲರಾದ ಸಿದ್ರಾಮಪ್ಪ ಬುಳ್ಳಾ ಎಂಬುವವರಿಗೆ ನಾನು ದೂರವಾಣಿ ಮುಖಾಂತರ ಮಾತಾಡಿದೆನು. ಗೌಡರು ಕೊಲೆಗೀಡಾದರು. ಇದಕ್ಕೆ ಮುಖ್ಯ ಕಾರಣವೇನೆಂದು ಕೇಳಿದೆನು. ಅವರು ಕೊಟ್ಟ ಉತ್ತರ ಹೀಗಿದೆ "ಗೌಡರು ಮೂಢನಂಬಿಕೆಯ ಕಡು ವಿರೋಧಿಗಳಾಗಿದ್ದರು. ಪ್ರಗತಿಪರ ವಿಚಾರದವರಾದ ಇವರನ್ನು ಪ್ರತಿಗಾಮಿಗಳು ಸೇರುತ್ತಿರಲಿಲ್ಲ. ಗ್ರಾಮ ದೇವತೆಯ ಜಾತ್ರೆಯಲ್ಲಿ ಪ್ರಾಣಿವಧೆ ಮಾಡುತ್ತಿರುವುದು ಅವರಿಗೆ ಸರಿ ಬರುತ್ತಿರಲಿಲ್ಲ. ಗ್ರಾಮ ದೇವತೆಯ ಜಾತ್ರೆಯಾಗುವ ಸಂದರ್ಭದಲ್ಲಿ ಗೌಡರು ಜಿಲ್ಲಾ ಪೋಲಿಸ್ ಅಧಿಕಾರಿಗಳಿಗೆ ದೂರು ಕೊಟ್ಟರು. ಸಶಸ್ತ್ರ ಪೋಲಿಸ್ ವ್ಯಾನ್‌ಗಳು ಜಾತ್ರೆಯಾಗುವ ತನಕ ಊರಿನಲ್ಲಿ ಠಿಕಾಣಿ ಹೂಡಿದವು. ಪ್ರಾಣಿವಧೆ ತಪ್ಪಿತು. ಆದರೆ ಗೌಡರ ವಧೆ ತಪ್ಪಲಿಲ್ಲ!

ಪ್ರಾಣಿಬಲಿಯನ್ನು ತಪ್ಪಿಸಿದ ಗೌಡರ ಬಗ್ಗೆ ಸೇಡು ತೀರಿಸಿಕೊಳ್ಳಬೇಕೆಂದು ಹೊಂಚು ಹಾಕಿದರು. ಇದಾದ ಕೆಲವೇ ದಿವಸಗಳಲ್ಲಿ ಗೌಡರು ಹುತಾತ್ಮರಾದರು! ಗೌಡರನ್ನು ಕೊಲೆ ಮಾಡಿ ಅವರ ಶವವನ್ನು ಸುಟ್ಟು ಹಸಿಬಿಸಿಯಾದ ಹೆಣಕ್ಕೆ ಕಲ್ಲುಕಟ್ಟಿ ತೋಟದ ಬಾವಿಯಲ್ಲಿ ಎಸೆದರು. 7–8 ದಿವಸಗಳಾದರೂ ಗೌಡರ ಪತ್ತೆ ಹತ್ತಲಿಲ್ಲ. ಬಹುಶಃ ಯಾವುದೋ ಊರಿಗೆ ಹೋಗಿರಬೇಕೆಂದು ಭಾವಿಸಿದರು. 7–8 ದಿವಸಗಳಾದ ಬಳಿಕ ಹೆಣ ಊದಿಕೊಂಡು ಕಟ್ಟಿದ ಕಲ್ಲಿನ ಸಹಿತ ನೀರಿನ ಮೇಲೆ ತೇಲ ತೊಡಗಿತು. ಪೋಲಿಸ್ ಪಂಚನಾಮೆಯಾಯಿತು. ಗೌಡರ ಹಿರಿಯ ಮಗ ತಂದೆಯ ಮೂಲವ್ಯಾಧಿ ಶಸ್ತ್ರ ಚಿಕಿತ್ಸೆಯಾದ

ಗುರುತಿನಿಂದ ನನ್ನ ತಂದೆಯವರದೇ ದೇಹ ಎಂದು ಪೋಲಿಸರಿಗೆ ತಿಳಿಸಿದರು. ಪೋಸ್ಟ್ ಮಾರ್ಟಮ್ ಆದ ನಂತರ ಮಧ್ಯ ರಾತ್ರಿಯಲ್ಲಿಯೇ ಅಂತಿಮ ಸಂಸ್ಕಾರವಾಯಿತು. ಸಾಕ್ಷಿಗಳು ದೊರೆಯದ ಕಾರಣ ನ್ಯಾಯಾಲಯವು ಯಾರನ್ನು ಶಿಕ್ಷಿಸಲಿಲ್ಲ!

ದೇವರ ಹೆಸರಿನಲ್ಲಿ ಪ್ರಾಣಿವಧೆ ಮಾಡಕೂಡದೆಂದು ಎಲ್ಲ ಜೀವಿಗಳಿಗೆ ಸೃಷ್ಟಿಕರ್ತನೇ ಕಾರಣನೆಂದು ಅನೇಕ ಮಹಾತ್ಮರು ಕಾಲಾನುಕಾಲದಿಂದ ಉಪದೇಶ ಮಾಡುತ್ತಲೇ ಬಂದಿದ್ದಾರೆ. ಆದರೂ ಕೂಡ ಈ ಪಾಪದ ಕೆಲಸ ಇನ್ನೂ ನಿಂತಿಲ್ಲ! ಜಗತ್ತು ಇಷ್ಟು ಮುಂದುವರಿದರೂ ಮೂರ್ಖ ಪುಢಾರಿಗಳು ಮೂಢ ಜನರಿಗೆ ಬೆಂಬಲಿಸಿ ಪ್ರಾಣಿವಧೆಗೆ ಕಾರಣರಾಗುತ್ತಲಿದ್ದಾರೆ. 'ಬೇಲಿಯೇ ಎದ್ದು ಹೊಲ ಮೇಯ್ದಂತೆ' ರಕ್ಷಕರೇ ಭಕ್ಷಕರಾದರೆ ಯಾರಿಗೆ ದೂರಬೇಕು? ಜಿಡ್ಡುಗಟ್ಟಿದ ಈ ನಂಬಿಕೆಗಳು ಅಳಿಯುವದೆಂದು? ಮೂಢನಂಬಿಕೆ ವಿರೋಧ ಮಾಡುವವರು ಇತ್ತೀಚೆಗೂ ಹುತಾತ್ಮರಾಗುತ್ತಿದ್ದಾರೆ. ಎಂ.ಎಂ. ಕಲಬುರಗಿಯವರು ಇಂಥ ಪ್ರತಿಗಾಮಿಗಳಿಂದಲೇ ಹುತಾತ್ಮರಾದರು. ಬಸವಣ್ಣನವರು "ಮಾರಿಮಸಣೆ ಎಂಬುದು ಬೇರಿಲ್ಲ, ಕಣ್ಣುಗಳು ತಪ್ಪಿ ನೋಡಿದರೆ ಮಾರಿ, ನಾಲಿಗೆ ತಪ್ಪಿ ನುಡಿದರೆ ಮಾರಿ..." ಎಂದು ಹೇಳಿದ್ದಾರೆ. ನಾವು ಬದುಕುವಂತೆ ಎಲ್ಲ ಪ್ರಾಣಿಗಳೂ ಬದುಕಬೇಕೆನ್ನುತ್ತವೆ. ಯಾವ ಪ್ರಾಣಿಗಳೂ ಸಾಯಲು ಇಚ್ಛಿಸುವುದಿಲ್ಲ. ತನ್ನಂತೆ ಪರರ ಜೀವವಿದೆಯೆಂದು ಈ ಮೂಢ ಮಾನವರಿಗೆ ತಿಳಿಯುವದು ಹೇಗೆ? ಇಂಥ ಹಿರಿಯ ಉದ್ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದ ವೀರುಪಾಕ್ಷಪ್ಪಗೌಡರ ಸ್ಮಾರಕ ನಿರ್ಮಿಸಬೇಕು. ಬೇಮಳಖೇಡದಲ್ಲಿ ಪ್ರಗತಿಪರ ಯುವಕರು ಮುಂದೆ ಬರಬೇಕು. ಹೀಗಾದಾಗಲೇ ಹುತಾತ್ಮನ ಆತ್ಮಕ್ಕೆ ಶಾಂತಿ ಸಿಗುತ್ತದೆ.

ಶಿಕ್ಷಣವೇ ಶಕ್ತಿ :

ಬೇಮಳಖೇಡ ಪ್ರಗತಿಪರ ಗ್ರಾಮವಿದೆ. ಇದು ಹುಮನಾಬಾದ ತಾಲೂಕಿನಲ್ಲಿದೆ. ಈ ಊರು ಪ್ರಸಿದ್ಧಿಗೆ ಬರಲು ಅಭಿಮಾನಿಗಳೆ ಕಾರಣ. ಇವರಲ್ಲಿ ಸಂಗಯ್ಯ ಮರಿ ಒಬ್ಬರಾಗಿದ್ದಾರೆ. ಇವರು ಕೋಮಟಿ ಸಮಾಜಕ್ಕೆ ಸೇರಿದವರು. ತಮ್ಮ ಊರಿನ ಬಗ್ಗೆ ಅತ್ಯಂತ ಕಾಳಜಿಯುಳ್ಳವರೆಂದೇ ಹೇಳಬೇಕು. ಇವರು ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದರು. ಇವರ ತಂದೆ ತುಕ್ಕಪ್ಪ ಮರಿಯವರು ಊರಿನ ಸರಪಂಚರಾಗಿ ಜನಹಿತ ಕಾರ್ಯವನ್ನು ಮಾಡಿದವರೆಂದು ತಿಳಿದು ಬರುತ್ತದೆ. ಭಾರತದ ಸಾಮಾಜಿಕ ಸಮಸ್ಯೆಗಳಿಗೆ ಶಿಕ್ಷಣವೇ ಪರಿಹಾರವಾಗಿದ್ದು, ಶಿಕ್ಷಣವೇ ಶಕ್ತಿ. ಆದ್ದರಿಂದ ಸಂಗಯ್ಯ ಮರಿಯವರು ಶಿಕ್ಷಣ ಪ್ರಚಾರವಿಲ್ಲದ ಅಂದಿನ ಕಾಲದಲ್ಲಿ ಬೀದರಿನ ಸರಕಾರಿ ಹೈಸ್ಕೂಲಿನಲ್ಲಿ ಕಷ್ಟದ ಜೀವನ ಸಾಗಿಸಿ ಮೆಟ್ರಿಕ್ ಪಾಸಾದರು. ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ ಎಂ.ಎಸ್ಸಿ. ಉಚ್ಚ ಮಟ್ಟದಲ್ಲಿ ಉತ್ತೀರ್ಣರಾದರು. ನಾಗಪುರದ ಕಾಲೇಜೊಂದರಲ್ಲಿ ವಿಜ್ಞಾನ ಉಪನ್ಯಾಸಕರಾಗಿ ಅಲ್ಲಿಂದಲೇ ನಿವೃತ್ತಿ ಹೊಂದಿದರು. ಅನೇಕ ಸಂಶೋಧನಾತ್ಮಕ ಪ್ರಬಂಧಗಳನ್ನು ಮಂಡಿಸಿದ ವಿದ್ವಾಂಸರಾಗಿದ್ದರು. ಇವರೆ ಈ ತಾಲ್ಲೂಕಿನ ಪ್ರಪ್ರಥಮ ವಿಜ್ಞಾನ ಪದವಿಧರರು.

ನಿವೃತ್ತಿಯ ನಂತರ ಸ್ವಗ್ರಾಮ ಬೇಮಳಖೇಡದಲ್ಲಿಯೇ ವಾಸ ಮಾಡತೊಡಗಿದರು. ಬೇಸಿಗೆಯ ರಜೆಗಳಲ್ಲಿ ವಿದ್ಯಾರ್ಥಿಗಳಿಗೆ ವಿಜ್ಞಾನ, ಇಂಗ್ಲಿಷ್, ಗಣಿತ, ವ್ಯಾಕರಣ ಹೇಳಿ ಕೊಡುತ್ತಿದ್ದರು.

ಶಾಲೆಗಳಿಗೆ ಹೋಗಿ ಮುಖ್ಯ ಅಧ್ಯಾಪಕರ ಅನುಮತಿ ಪಡೆದು ಪಾಠ ಹೇಳುತ್ತಿದ್ದರು. ಅವರ ಕೈಬರಹ ಮುತ್ತು ಪೋಣಿಸಿದಂತೆ ಶೋಭಿಸುತ್ತಿದ್ದವು. ಇದನ್ನು ನಾನು ಬೇಮಳಖೇಡ ಪಾಠಶಾಲೆಯಲ್ಲಿ ಶಿಕ್ಷಕ ವೃತ್ತಿ ಕೈಕೊಂಡಾಗ ಕಂಡಿದ್ದೇನೆ. ಬೇಮಳಖೇಡದ ಬಹಳಷ್ಟು ವಿದ್ಯಾರ್ಥಿಗಳು ಇವರಿಂದ ಪ್ರೇರಣೆ ಪಡೆದಿದ್ದಾರೆ.

ಕರಕನಳ್ಳಿ ಬಕ್ಕಪ್ರಭುಗಳಲ್ಲಿ ಅಪಾರ ಭಕ್ತಿಯುಳ್ಳವರಾಗಿದ್ದರು. ಇವರಂಥ ಪ್ರಾಧ್ಯಾಪಕರಿಂದ ಭಾರತ ದೇಶದ ನಕಾಶೆಯೇ ಬದಲಾಯಿಸುತ್ತದೆ. ಆದರೆ ಅಪರೂಪಕ್ಕೊಬ್ಬರು ಇಂಥವರು ಸಿಗುತ್ತಾರೆ!

ಮಹಿಳಾ ಶಿಕ್ಷಣ :

ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬ ಗಾದೆ ಮಾತು ಅರಿತ ಸಿದ್ದಪ್ಪ ಹೂಡದಳ್ಳಿ ಬೇಮಳಖೇಡದವರೆ ಆಗಿದ್ದಾರೆ. ಇವರು ವಿಜ್ಞಾನ ಪದವೀಧರರಾಗಿದ್ದರು. ಬೇಮಳಖೇಡ ಪ್ರೌಢಶಾಲೆಯಲ್ಲಿ ವಿಜ್ಞಾನ ಶಿಕ್ಷಕರಾಗಿ, ಮುಖ್ಯೋಪಾಧ್ಯಾಯರಾಗಿ ಕಾರ್ಯನಿರ್ವಹಿಸಿದರು. ವಿಜ್ಞಾನ ಇವರ ಅಚ್ಚುಮೆಚ್ಚಿನ ವಿಷಯುವಾಗಿತ್ತು. ಉತ್ತಮ ಆಡಳಿತಗಾರರಾಗಿದ್ದರು. ಇವರ ಕಾರಣದಿಂದ ಬಾಲಕಿಯರು ನಿರ್ಭಯದಿಂದ ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಗೆ ಬರುತ್ತಿದ್ದರು.

ಪರಿಸರ ಪ್ರೀತಿ :

ಸಿದ್ದಪ್ಪನವರು ಮಾಡಿದ ಮುಖ್ಯ ಪರಿಸರ ಸಂಬಂಧಿ ಕಾರ್ಯವೆಂದರೆ ಗುಡ್ಡದ ಮೇಲಿನ ಪ್ರೌಢಶಾಲೆಯ ಸುತ್ತಮುತ್ತಲು ಎಕರೆಗಳಷ್ಟು ಕ್ಷೇತ್ರದಲ್ಲಿ ಅರಣ್ಯ ಇಲಾಖೆಯ ನಿಜಲಿಂಗಪ್ಪನವರ ನೆರವಿನೊಂದಿಗೆ ವೃಕ್ಷಗಳು ಬೆಳೆಸಿದರು. ಅವುಗಳಿಗೆ ನೀರುಣಿಸುವುದು, ಅವುಗಳ ರಕ್ಷಣೆ ಮಾಡುವ ಕೆಲಸಗಳನ್ನು ಕರ್ತವ್ಯನಿಷ್ಠ ಶಾಲೆಯ ಸೇವಕ ಚಂದ್ರಪ್ಪ ತುಪಾಕಿ ಮಾಡುತ್ತಿದ್ದರು. ಈಗ ಈ ವೃಕ್ಷಗಳು ಬೆಳೆದು ನಿಂತಿವೆ. ಊರಿಗೆ ತಂಪು ಗಾಳಿ ಬೀಸುತ್ತಿದೆ. ಇವುಗಳಿಂದ ಊರಿನ ಸೌಂದರ್ಯ ಹೆಚ್ಚಿದೆ. ವಿಹಾರಕ್ಕೆ ಬರುವ ಜನರಿಗೆ ಅನುಕೂಲವಾಗಿದೆ. ಇವುಗಳನ್ನೆಲ್ಲ ಪರಿಗಣಿಸಿ ಸರ್ಕಾರದಿಂದ ಉತ್ತಮ ಶಿಕ್ಷಕರೆಂದು ರಾಷ್ಟ್ರ ಪ್ರಶಸ್ತಿ ದೊರಕಿತು. ಇವರು ವಿ.ಎನ್. ಪಾಟೀಲರು ಹಾಗೂ ವೀರಪಾಕ್ಷಪ್ಪ ಗೌಡರಿಂದ ಪ್ರಭಾವಿತರಾಗಿದ್ದರು.

ಗ್ರಾಮಾಭಿವೃದ್ಧಿ :

ಮುತ್ತಂಗಿಯು ಮೀನಕೇರಿಯ ಸಮೀಪದಲ್ಲಿದೆ. ಇದು ಬಹಳ ಚಿಕ್ಕಗ್ರಾಮ. ರಾಚಪ್ಪ ಸಾದಾರವರು ಗ್ರಾಮೋದ್ಧಾರಕ್ಕಾಗಿ ದುಡಿದ ಕಾರಣ ಜನರ ಮನದಲ್ಲಿ ಸ್ಥಾನ ಪಡೆದಿದ್ದಾರೆ. ಏಕೀಕರಣಕ್ಕೂ ಮೊದಲು ಬೀದರ ಜಿಲ್ಲೆಯು ಹೈದರಾಬಾದ ರಾಜ್ಯಕ್ಕೆ ಒಳಪಟ್ಟಿತ್ತು. ರಾಚಪ್ಪನವರು ಊರಿನ ಸರಪಂಚರಾಗಿ ಅನೇಕ ವರ್ಷ ಸೇವೆ ಸಲ್ಲಿಸಿದರು. ಇವರು ಶ್ರೀಮಂತ ಮನೆತನದವರಾದರೂ ಅಹಂಕಾರವಿರಲಿಲ್ಲ. ಗ್ರಾಮಾಭಿವೃದ್ಧಿಯಲ್ಲಿ ತಮ್ಮ ಏಳಿಗೆ ಕಂಡರು. ರುಮಾಲು ಕಟ್ಟುತ್ತಿದ್ದರು. ಸಾದಾ ಉಡುಪು ಧರಿಸುತ್ತಿದ್ದರು. ಹೆಸರಿಗೆ ತಕ್ಕಂತೆ ಸಾದಾ ಜೀವನ ಅವರದಾಗಿತ್ತು. ಉನ್ನತ ವಿಚಾರದವರಾಗಿದ್ದರು. ಇವರ ಕಾರ್ಯವೈಖರಿಯನ್ನು ಮೆಚ್ಚಿಕೊಂಡು ಈ ಚಿಕ್ಕ ಗ್ರಾಮಕ್ಕೆ ಹೈದರಾಬಾದ ರಾಜ್ಯದ ಮುಖ್ಯಮಂತ್ರಿಗಳಾದ ಬಿ. ಕೃಷ್ಣರಾವ ಬಂದಿದ್ದರು.

ಅಭಿವೃದ್ಧಿಯ ರೂವಾರಿ : ಮಲ್ಲಶೆಟ್ಟಪ್ಪ ಬುಳ್ಳಾ

ಇವರು ಮುತ್ತಂಗಿ ಗ್ರಾಮದ ಪಕ್ಕದಲ್ಲಿರುವ ನಿರ್ಣಾ ಗ್ರಾಮದವರು. ಶ್ರೀಮಂತ ಮನೆತನದವರು. ಗ್ರಾಮದ ಏಳಿಗೆಗಾಗಿ ತಮ್ಮ ಮನೆಮಾರನ್ನು ನಿರ್ಲಕ್ಷಿಸಿದರು. ಊರಿನ ಶ್ರೇಯೋಭಿವೃದ್ಧಿಗಾಗಿ ಹೆಣಗಿದರು. ಇಂದು ನಿರ್ಣಾದಲ್ಲಿ ಕಾಣುವ ಅನೇಕ ಸರಕಾರಿ ಕಟ್ಟಡಗಳು, ರಸ್ತೆಗಳು ಇವರ ಪ್ರಯತ್ನದಿಂದಲೇ ಆಗಿವೆ. ಸರಪಂಚರುಗಳಿಗೆ ಅಧಿಕಾರದ ಗದ್ದುಗೆ ಮೇಲೆ ಕೂಡಿಸಿ ಇವರು ಹಿಂದೆ ನಿಂತು ಪ್ರೋತ್ಸಾಹಿಸುತ್ತಿದ್ದರು. ಇವರು ಆರ್ಯ ಸಮಾಜದವರಾಗಿದ್ದರು. ಏಳು ವರ್ಷದ ಚಿಕ್ಕ ಮಗುವನ್ನು ಉತ್ತರ ಪ್ರದೇಶದ ಕಾಂಗಡಿ ಗುರುಕುಲದಲ್ಲಿ ಶಿಕ್ಷಣ ಕೊಡಿಸಿದರು. ಧರ್ಮವೀರ ಅವರ ಹೆಸರು. ಮುಂದೆ ಇವರು ಎಂ.ಎ. ಪದವೀಧರರಾಗಿ, ಪ್ರಾಧ್ಯಾಪಕರಾಗಿ, ಒಳ್ಳೆಯ ಭಾಷಣಕಾರರಾಗಿ ನಿವೃತ್ತರಾಗಿದ್ದಾರೆ. ಮಲ್ಲಶೆಟ್ಟಪ್ಪನವರ ಇನ್ನೊಬ್ಬ ಮಗ ನ್ಯಾಯವಾದಿ ಸಿದ್ರಾಮಪ್ಪ ಇತ್ತೀಚೆಗೆ ಅಕಾಲ ಮರಣಕ್ಕೆ ತುತ್ತಾದರು.

ಮಹಾಮುತ್ಸದ್ದಿಯ ಜನನ :

ಒಬ್ಬ ರಾಜಕಾರಣಿ ವಿಧಾನಸಭೆಯಲ್ಲಿ ಕುಳಿತು ಐದು ವರ್ಷಗಳ ಕಾಲ ಮುಂದಿನ ಚುನಾವಣೆ ಬಗ್ಗೆ ಆಲೋಚಿಸಿದರೆ, ಮುತ್ಸದಿಯಾದವನು ವಿಧಾನಸೌಧದಲ್ಲಿ ಕುಳಿತು ಮುಂದಿನ ಜನಾಂಗದ ಬಗ್ಗೆ ಆಲೋಚಿಸುತ್ತಾನೆ. ವಿ.ಎನ್. ಪಾಟೀಲರು ಮಹಾಮುತ್ಸದ್ದಿಯಾಗಿದ್ದರು.

ವಿಶ್ವನಾಥ ಪಾಟೀಲರ ತಾಯಿಯ ಹೆಸರು ಕಾಶಿಬಾಯಿ. ಅವರ ತವರೂರು ಮೀನಕೇರಿಯಿಂದ 8 ಕಿ.ಮೀ. ದೂರವಿರುವ ಬಗದಲ (ವಗದಾಳ). ಇದು ಬಹಳ ಪುರಾತನವಾದ ಗ್ರಾಮ. ಈ ಗ್ರಾಮವು ಕಲ್ಯಾಣದ 6ನೇ ವಿಕ್ರಮಾದಿತ್ಯನ ಆಡಳಿತಕ್ಕೆ ಒಳಪಟ್ಟಿತ್ತು. ಚಾಲುಕ್ಯ ವಿಕ್ರಮನಿಗೆ 19 ಜನ ಮಡದಿಯರು. ಇವರಲ್ಲಿ ಶ್ರೇಯಾದೇವಿ ಎಂಬ ಹೆಸರಿನ ರಾಣಿ ಬಗದಲನಲ್ಲಿರುತ್ತಿದ್ದಳು. ರಾಜನು ಶ್ರೇಯಾದೇವಿಗೆ ಬಳುವಳಿಯಾಗಿ ಸುತ್ತಲಿನ ಊರುಗಳನ್ನು ಕೊಟ್ಟಿದ್ದನು. ಈತನ ಕಾಲ ಕ್ರಿ.ಶ. 1096. ಶ್ರೇಯಾದೇವಿಯ ವಂಶಸ್ಥರು ಇನ್ನೂ ಈ ಊರಿನಲ್ಲಿ ಇದ್ದಿರಬಹುದೆಂದು ಇತಿಹಾಸ ತಜ್ಞರಾಗಿದ್ದ ಬಿ.ಆರ್. ಕೊಂಡಾರವರು ಅಭಿಪ್ರಾಯಪಡುತ್ತಾರೆ.

ಕಾಶಿಬಾಯಿಯವರು ಬಗದಲ್‌ನ ಬೀರ್ಗೆ ಮನೆತನದವರು. ಗಾಂಭೀರ್ಯದಿಂದ ಕೂಡಿದ ಅವರ ಮುಖಮುದ್ರೆ ರಾಜಠೀವಿಯಂತಿತ್ತು. ಸಾಮಾನ್ಯ ಮಹಿಳೆಯರಂತೆ ಕಾಣುತ್ತಿರಲಿಲ್ಲ. ಅವರ ಹಣೆಯ ಮೇಲೆ ಒಂದು ರೂಪಾಯಿ ಅಗಲದಷ್ಟು ಕುಂಕುಮ ರಾರಾಜಿಸುತ್ತಿತ್ತು. ಆ ನೆನಪು ಇಂದಿಗೂ ನನ್ನ ಕಣ್ಣಲ್ಲಿ ಕಟ್ಟಿದಂತಿದೆ.

ಕಾಶಿಬಾಯಿಯವರಿಗೆ ಇಬ್ಬರು ಗಂಡು ಮಕ್ಕಳು. ಹಿರಿಯ ಮಗನ ಹೆಸರು ವೀರಭದ್ರಪ್ಪಗೌಡ. 7ನೇ ವರ್ಗದವರೆಗೆ ಕಲಿತಿದ್ದರು. ಕಿರಿಯ ಮಗ ನಮ್ಮ ಚರಿತ್ರ ನಾಯಕ ವಿಶ್ವನಾಥ ಪಾಟೀಲರು. ಕಾಶಿಬಾಯಿಯವರಿಗೆ ಮೂರು ಜನ ಹೆಣ್ಣು ಮಕ್ಕಳು. ಮೊದಲನೆಯವಳು ಸರಸ್ವತಿಬಾಯಿ. ಇವರಿಗೆ ಐನೂಲಿಯ ಪೋಲಿಸಗೌಡರಾದ

ಬಂಡೆಪ್ಪನವರೊಂದಿಗೆ ವಿವಾಹವಾಯಿತು. ಎರಡನೆಯ ಮಗಳು ಮಹಾದೇವಿ, ಮೂರನೆಯ ಮಗಳು ಪಾರ್ವತಿ ರಾಚಪ್ಪ ಗೌಡರು. ಇದರಿಂದಾಗಿ ಮೀನಕೇರಿ ಮತ್ತು ಐನೂಲಿಯ ಸಂಬಂಧ ಬೆಳೆಯಿತು.

ಬೆಳೆಯುವ ಸಿರಿ ಮೊಳಕೆಯಲ್ಲಿ :

'ಬೆಳೆಯುವ ಸಿರಿ ಮೊಳಕೆಯಲ್ಲಿ' ಎನ್ನುವಂತೆ ಮಗುವಿನ ಬಾಲ್ಯದ ವರ್ತನೆ, ಬಿಗು ಸ್ವಭಾವ ಹಾಗೂ ಲಕ್ಷಣವನ್ನು ಕಂಡು ಅದರ ಭವಿಷ್ಯವನ್ನು ಹೇಳುತ್ತಾರೆ. ವಿಶ್ವನಾಥ ಪಾಟೀಲರು ಚಿಕ್ಕವರಾಗಿದ್ದಾಗ ಕೂಡ ಗಂಭೀರ ವ್ಯಕ್ತಿಗಳಾಗಿದ್ದರು. ತಾಯಿ ಕಾಶಿಬಾಯಿಯವರ ಸ್ವಭಾವ ಪಾಟೀಲರ ಮೇಲೆ ಬೀಳದೆ ಇರಲಿಲ್ಲ. ಮೀನಕೇರಿಯಲ್ಲಿ ಮರಾಠಿ ಮತ್ತು ಉರ್ದು ಕಲಿಸುವ ಖಾಸಗಿ ಶಿಕ್ಷಕರಿದ್ದರು. ಕನ್ನಡ ಯಾರಿಗೂ ಬರುತ್ತಿರಲಿಲ್ಲ. ಇವರ ಚಿಕ್ಕಪ್ಪಂದಿರಾದ ಗಿರಿಯಪ್ಪಗೌಡ, ಅಣ್ಣನ ಮಗನನ್ನು ಮಾತೃಭಾಷೆಯಾದ ಕನ್ನಡದಲ್ಲಿಯೇ ಕಲಿಸಬೇಕೆಂದು ನಿರ್ಧಾರ ಮಾಡಿದರು.

ಕನ್ನಡ ಪ್ರೀತಿ :

ಬೀದರನ ಉತ್ತರಕ್ಕಿರುವ ಶಹಾಪೂರ (ಈಗ ತೆಲಂಗಾಣದಲ್ಲಿದೆ) ಗ್ರಾಮ ಮಾಂಜ್ರಾ ನದಿಯ ದಂಡೆಯ ಮೇಲಿದೆ. ಗಿರಿಯಪ್ಪಗೌಡರ ನೆಂಟರು ಶಹಾಪೂರಿನವರು ಇವರು ಮೇಲಿಂದ ಮೇಲೆ ಶಹಾಪೂರಕ್ಕೆ ಬರುತ್ತಿದ್ದರು. ಶಹಾಪೂರದಿಂದ ಸ್ವಲ್ಪ ದೂರ ಮೋರಗಿ ಎಂಬ ಗ್ರಾಮವಿದೆ. 1935ರಲ್ಲಿ ಭಾಲ್ಕಿಯ ಚನ್ನಬಸವ ಪಟ್ಟದ್ದೇವರು ಕನ್ನಡ ಶಾಲೆಯನ್ನು ತೆರೆದರು. ಬಸವ ಜಯಂತಿಯ ಶುಭ ಸಂದರ್ಭದಲ್ಲಿ ಕನ್ನಡ ಕಲಿಸುವ ಶಾಲೆಯೊಂದು ಬೀದರ ಜಿಲ್ಲೆಯಲ್ಲಿ ಪ್ರಥಮ ಸಲ ಪ್ರಾರಂಭವಾಯಿತು.

ಇದನ್ನು ಅರಿತ ಗಿರಿಯಪ್ಪನವರು ಎಂಟು ವರ್ಷದ ಬಾಲಕನಾದ ಅಣ್ಣನ ಮಗನನ್ನು ಈ ಶಾಲೆಗೆ ಸೇರಿಸಿದರು. ಪಟ್ಟದ್ದೇವರಿಗೆ ಒಪ್ಪಿಸಿ

ಅವರು ತಮ್ಮ ಊರಿಗೆ ಮರಳಿದರು. ಊಟ ಮತ್ತು ವಸತಿ ಶಿಕ್ಷಣ ಅಲ್ಲಿ ಉಚಿತವಾಗಿತ್ತು. ಆದರೆ ಗಿರಿಯಪ್ಪಗೌಡರು ಪ್ರಸಾದ ನಿಲಯಕ್ಕೆ ಸಹಕರಿಸುತ್ತಿದ್ದರು.

ಮೋರ್ಗಿ ಶಾಲೆ :

ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಮೋರ್ಗಿ ಗ್ರಾಮಕ್ಕೆ ಮಹತ್ವದ ಸ್ಥಾನವಿದೆ. ಸುಮಾರು ಐದು ವರ್ಷ ಇಲ್ಲಿ ಶಾಲೆ ನಡೆಯಿತು. ಕನ್ನಡ ಕಲಿಸುವ ಶಿಕ್ಷಕರನ್ನು ಭಾಲ್ಕಿ ಹಿರೇಮಠ ಸಂಸ್ಥಾನದ ಪೂಜ್ಯ ಶ್ರೀ ಚನ್ನಬಸವ ಪಟ್ಟದ್ದೇವರು ಕಲಬುರಗಿ ಜಿಲ್ಲೆಯವರಾದ ಮಹಾದೇವಪ್ಪ ಮಾಸನೂರಕರ್ ಬಳ್ಳಾರಿಯ ಸಿದ್ದೇಶ್ವರ, ಕಲಬುರಗಿ ಜಿಲ್ಲೆಯ ಬೆಂಡೆಗುಂಬಳಿಯ ಸಿದ್ವೀರಯ್ಯ ಮತ್ತು ರೇವಣಸಿದ್ದಯ್ಯ ಮುಂತಾದವರನ್ನು ಕರೆಸಿಕೊಂಡರು. ಈ ಶಿಕ್ಷಕರಿಗೆ ತಿಂಗಳಿಗೆ 12 ರೂ. ಸಂಬಳ, ಊಟ ಮತ್ತು ವಸತಿ ಉಚಿತವಾಗಿ ಒದಗಿಸಲಾಗುತ್ತಿತ್ತು. ಶಾಲೆಯ ಖರ್ಚನ್ನು ಮಠದ 40 ಎಕರೆ ಭೂಮಿಯಿಂದ ಬರುವ ಆದಾಯ ಹಾಗೂ ಸುತ್ತಲಿನ ಊರುಗಳಿಂದ 'ಮುಷ್ಠಿಫಂಡ್' ಧಾನ್ಯದಿಂದ ಸಾಗುತ್ತಿತ್ತು. ಧಾನ್ಯಗಳನ್ನು ತರಲು ಎರಡು ಕುದುರೆಗಳಿದ್ದವು. ವಾರಕ್ಕೊಮ್ಮೆ ಊರುಗಳಿಗೆ ಹೋಗಿ ಸಂಗ್ರಹಿಸುತ್ತಿದ್ದರು. ಜೋಳ ಬೀಸುವದಕ್ಕಾಗಿಯೇ ಇಬ್ಬರನ್ನು ನೇಮಿಸಲಾಗಿತ್ತು. ಉಸ್ಮಾನಸಾಬ ಮತ್ತು ಪೀರ್‌ಸಾಬ; ಈ ಇಬ್ಬರು ದಿನಕ್ಕೆ ಆರು ಅಡ್ಡಿ ಜೋಳ ಬೀಸುತ್ತಿದ್ದರು. ಅವರಿಗೆ ತಿಂಗಳಿಗೆ 2 ರೂ. ಮತ್ತು ಉಚಿತ ಊಟ ಕೊಡಲಾಗುತ್ತಿತ್ತು. ಇವರಿಬ್ಬರು ಅಂಧರಾಗಿದ್ದರು. 50 ಹುಡುಗರು ಇಲ್ಲಿ ಅಭ್ಯಾಸ ಮಾಡುತ್ತಿದ್ದರು. ಹುಡುಗರೊಂದಿಗೆ ಸ್ವಾಮಿಗಳು ಸಹ ಕೆಲಸ ಮಾಡುತ್ತಿದ್ದರು. ಹಾಗೂ ಸಾಯಂಕಾಲ ಮಕ್ಕಳೊಂದಿಗೆ ಚಂಡಿನ ಆಟ, ಕಬ್ಬಡ್ಡಿ ಆಟ ಆಡುತ್ತ ಮಕ್ಕಳ ಮನಸ್ಸನ್ನು ಮನೆಯ ಕಡೆ ಹೋಗದಂತೆ ನೋಡಿಕೊಳ್ಳುತ್ತಿದ್ದರು. ಈ ಪ್ರದೇಶ ಆಫ್ರಿಕಾ ಖಂಡದಂತೆ ಇತ್ತು. ಯಾವ ರಸ್ತೆ ಸಂಪರ್ಕ ಇರಲಿಲ್ಲ. ಇದೇ ಸಂದರ್ಭದಲ್ಲಿ ಮಳೆರಾಯನು ಕರುಣೆ ತೋರಲಿಲ್ಲ. ಬರಗಾಲ ಬಂದಿತು.

ಬಾವಿಯಲ್ಲಿಯ ನೀರು ಬತ್ತಿತ್ತು. ಅಪ್ಪ ಅವರು ಬಾವಿಯ ಆಳಕ್ಕೆ ಇಳಿದು ಹೂಳಿಕೆ ತೆಗೆಯುತ್ತಿದ್ದರು. ಕೂಲಿಗಳಿಗೆ ಬಂಡೆ ಒಡೆಯಲು ಆಗದಿದ್ದರೆ ತಾವೇ ಹಾರಿ (ಘುಸಿ)ಯಿಂದ ಒಡೆಯುತ್ತಿದ್ದರು ಎಂದು ವಿ.ಎನ್. ಪಾಟೀಲರು ತಮ್ಮ ಸಂದರ್ಶನದಲ್ಲಿ ನನಗೆ ತಿಳಿಸಿದ್ದರು. ಅರಿಯದ ಅಜ್ಞಾನಿಗಳಾದ ಕೆಲವು ಜಾತಿವಾದಿ ಜಂಗಮರು ಅಶ್ಲೀಲ ಭಾಷೆಯಿಂದ ಸ್ವಾಮಿಗಳನ್ನು ಕುಲಗೇಡಿ, ಕುಲಕೆಡಿಸುವನೆಂದು ಬಯ್ಯುತ್ತ ಹೋಗುತ್ತಿರುವುದನ್ನು ವಿ.ಎನ್. ಪಾಟೀಲರು ನನಗೆ ಹೇಳಿದ್ದರು. ಕಾರಣವೇನೆಂದರೆ, ಈ ಶಾಲೆಯಲ್ಲಿ ಎಲ್ಲ ಕುಲದವರು ಒಂದೇ ಕುಟುಂಬದಂತೆ ಒಂದೇ ಪಂಕ್ತಿಯಲ್ಲಿ ಊಟ ಮಾಡುತ್ತಿರುವುದು. ಈ ಜಾತಿವಾದಿಗಳಿಗೆ ಸಹಿಸಲಾಗುತ್ತಿರಲಿಲ್ಲ.

ಪಾಟೀಲರ ಬಾಲ್ಯದ ಚಟುವಟಿಕೆಗಳ ಬಗ್ಗೆ ಹಣಮಂತರಾವ ಮ್ಯಾನೇಜರ್‌ರನ್ನು ಕೇಳಿದೆನು. ಅವರು ಹೇಳಿದ್ದು ಹೀಗೆ ವಿಶ್ವನಾಥ ಪಾಟೀಲ ದಿಟ್ಟ ಹುಡುಗ. ಇದ್ದದ್ದು ಇದ್ದ ಹಾಗೆ ಭಡಭಡಾ ಹೇಳುವವ! ಎಲ್ಲಾ ಹುಡುಗರಿಗಿಂತ ತೇಜ್! ಇಲ್ಲಿ ಪಂಕ್ತಿಭೇದ ಮಾಡುತ್ತಿರಲಿಲ್ಲ. ಎಲ್ಲ ಜಾತಿಗಳಿಗೂ ಲಿಂಗಕಟ್ಟುತ್ತಿದ್ದರು. ಮನಸ್ಸಿಲ್ಲದವರಿಗೆ ಕಟ್ಟುತ್ತಿರಲಿಲ್ಲ.

ಸಹಭೋಜನ :

ವಿ.ಎನ್. ಪಾಟೀಲರ ಮೇಲೆ ಈ ಶಾಲೆಯು ಅಳಿಸಲಾರದ ಪ್ರಭಾವ ಬೀರಿತು. ಅವರು ಸಂದರ್ಶನ ಮಾಡಿದಾಗ ಹೇಳಿದ್ದು, "ಎಲ್ಲರೂ ಕೂಡಿ ಉಣ್ಣುವದು ಅಸ್ಪೃಶ್ಯತೆ ಆಚರಿಸದೆ ಇರುವುದು. ಜಾತಿಭೇದ ಮಾಡದಿರುವದು. ಪಟ್ಟದ್ದೇವರು ಆಚರಿಸುತ್ತಿದ್ದ ತತ್ವಗಳನ್ನು ಪಾಟೀಲರು ತಮ್ಮ ಜೀವಮಾನ ಪರ್ಯಂತ ಪಾಲಿಸಿಕೊಂಡು ಬಂದರು. ಈ ಶರಣರ ತತ್ವಗಳು ಕಮ್ಯುನಿಷ್ಟ ತತ್ವಗಳಲ್ಲಿ ಯಾವ ಭೇದಗಳೂ ಇಲ್ಲ. ಬಸವಣ್ಣನವರ ವಚನಗಳನ್ನು ಮಕ್ಕಳಿಗೆ ಕಲಿಸುತ್ತಿದ್ದರು. ಈ ಶಾಲೆಯ

ಪ್ರಭಾವದಿಂದಲೇ ನಾನು ಮುಂದೆ ಕಮ್ಯುನಿಷ್ಟ ಪಕ್ಷವನ್ನು ಅಪ್ಪಿದೆನೆಂದು ಹೇಳಿದರು. ಕಾಗೆ ಒಂದು ಅಗುಳ ಕಂಡರೆ ಕರೆಯದೆ ತನ್ನ ಬಳಗವನೆಲ್ಲವ... ಈ ವಚನ ಸಮಾಜವಾದದ ಕಮ್ಯುನಿಷ್ಟ ಸಿದ್ಧಾಂತಕ್ಕೆ ಹತ್ತಿರವಾಗಿರುವುದರಿಂದ ಅವರ ಮೇಲೆ ಹೆಚ್ಚಿನ ಪ್ರಭಾವ ಬೀರಿತು. ಸುಮಾರು ನಾಲ್ಕು ವರ್ಷ ಮೋರ್ಗಿ ಶಾಲೆಯಲ್ಲಿ ಅಭ್ಯಾಸ ಮಾಡಿದ ನಂತರ ಮಾಧ್ಯಮಿಕ ಅಭ್ಯಾಸಕ್ಕಾಗಿ ಅಕ್ಕನವರ ಊರಾದ ಐನೂಲಿಗೆ ಬಂದರು.

ಚಿಂಚೋಳಿ ಮಾಧ್ಯಮಿಕ ಶಾಲೆ :

ಚಿಂಚೋಳಿ ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರ ಹೆಸರು ಸೈಯದ ಗೌಸ್. ಹೈದರಾಬಾದ ನಗರದ ನವಾಬಿ ಮನೆತನದವರು. ಇವರ ವ್ಯಕ್ತಿತ್ವದ ಪ್ರಭಾವ ವಿದ್ಯಾರ್ಥಿಗಳ ಮೇಲೆ ಬೀರಿತು. ಇವರ ಬಗ್ಗೆ ತಿಳಿದುಕೊಳ್ಳಲು ಅವರ ವಿದ್ಯಾರ್ಥಿಗಳಾಗಿದ್ದ ಚಿಂಚೋಳಿಯ ಮಲ್ಲಪ್ಪ ಕುಕ್ಕಡಿ ಇವರನ್ನು ಸಂದರ್ಶಿಸಿದೆ. ಅವರು ಕೊಟ್ಟ ಮಾಹಿತಿ ಅಂದರೆ "ಸೈಯದ ಗೌಸ ತುಂಬ ಸುಶಿಕ್ಷಿತರು, ಕಟ್ಟುನಿಟ್ಟಿನ ಆಡಳಿತಗಾರರು, ಶಿಸ್ತಿಗೆ ಹೆಸರಾಗಿದ್ದವರು ಆಗಿದ್ದರು. ಚಿಂಚೋಳಿಯ ಮಾಧ್ಯಮಿಕ ಶಾಲೆಯ ಮೈದಾನದೊಳಗಿನಿಂದ ಕಚೇರಿಗೆ ತಹಸೀಲ್ದಾರರು ಹೋಗುತ್ತಿದ್ದರು. ಅವರು ತಮ್ಮ ಜವಾನರೊಂದಿಗೆ ಶಾಲೆಯ ಮೈದಾನದಿಂದಲೇ ಸಿಗರೇಟು ಸೇದುತ್ತ ಹೋಗುತ್ತಿದ್ದರು. ಮುಖ್ಯೋಪಾಧ್ಯಾಯರು ತಹಸೀಲ್ದಾರರಿಗೆ "ನೀವು ಈ ರೀತಿ ಸಿಗರೇಟ ಸೇದುತ್ತಾ ಶಾಲೆಯ ಮೈದಾನದೊಳಗಿನಿಂದ ದಿನಾಲು ಹೋಗುತ್ತೀರಿ. ಇದು ನಮ್ಮ ವಿದ್ಯಾರ್ಥಿಗಳ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ತಾವು ಇದರ ಬಗ್ಗೆ ವಿಚಾರ ಮಾಡಬೇಕು" ಎಂದು ಬರೆದರು. ಅಂದಿನಿಂದ ತಹಸೀಲ್ದಾರರು ಮುಂದೆ ಆ ರೀತಿ ವರ್ತಿಸಲಿಲ್ಲವೆಂದು ಮಲ್ಲಪ್ಪ ಕುಕ್ಕಡಿ ಹಳೆ ನೆನಪುಗಳನ್ನು ಬಿಚ್ಚಿಟ್ಟರು. ಒಬ್ಬ ಮಾಧ್ಯಮಿಕ ಶಾಲೆ ಶಿಕ್ಷಕರು ತಾಲೂಕಾ ಮಟ್ಟದ ಅಧಿಕಾರಿ ಮೇಲೆ ಬೀರಿದ ಪ್ರಭಾವದಿಂದ ಗೌಸರ ಶ್ರೇಷ್ಠತೆ ಮನವರಿಕೆಯಾಗುತ್ತದೆ!

ಪ್ರತಿದಿನ 10 ಗಂಟೆಗೆ ಶಾಲೆ ಪ್ರಾರಂಭವಾಗುತ್ತಿತ್ತು. ಆದರೆ, ಮುಖ್ಯೋಪಾಧ್ಯಾಯರು 9 ಗಂಟೆಗೆ ಶಾಲೆಗೆ ಆಗಮಿಸಿ 1 ತಾಸು ಇಂಗ್ಲಿಷ್ ಬೋಧನೆ ಮಾಡುತ್ತಿದ್ದರು. ಹೀಗೆ ಹಿಂದುಳಿದ ಭಾಗದ ವಿದ್ಯಾರ್ಥಿಗಳ ಶಿಕ್ಷಣ ಮಟ್ಟ ಹೆಚ್ಚಿಸುತ್ತಿದ್ದರು.

ಸಂಜೆ 4 ಗಂಟೆಗೆ ಶಾಲೆ ಬಿಡುತ್ತಿತ್ತು. ಆದರೆ ಇವರು 5 ಗಂಟೆಯವರೆಗೆ ವಿದ್ಯಾರ್ಥಿಗಳಿಗೆ ಹೆಚ್ಚುವರಿಯಾಗಿ ಪಾಠ ಮಾಡುತ್ತಿದ್ದರು. ಇವರಿಗೆ ಕನ್ನಡ ಭಾಷೆ ಬರುತ್ತಿರಲಿಲ್ಲ. ಆದರೆ, ಇವರು ನಟನೆ ಸಹಿತ ತಿಳಿಸುವಾಗ ಕನ್ನಡ ಹುಡುಗರಿಗೆ ಅರ್ಥವಾಗುತ್ತಿತ್ತು. ಈ ರೀತಿ ಮಕ್ಕಳ ಶಿಕ್ಷಣದ ಬಗ್ಗೆ ಪ್ರೀತಿಯುಳ್ಳ ಶಿಕ್ಷಕರು ಇಂದು ದೊರಕುವದು ಅಪರೂಪವೆಂದು ಕುಕ್ಕಡಿ ಮಲ್ಲಪ್ಪ ಹೇಳುತ್ತಾರೆ.

ಗೌಸ್ ಸಾಹೇಬರು ಎತ್ತರದ ನಿಲುವಿನವರಾಗಿರಲಿಲ್ಲ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಬಹಳ ಹೆಣಗುತ್ತಿದ್ದರು. ವಿದ್ಯಾರ್ಥಿಗಳು ಅಂಗಿಯ ಗುಂಡಿ ಹಾಕಿದ್ದಾರೊ ಇಲ್ಲವೊ ಎಂಬುದನ್ನು ಪರೀಕ್ಷಿಸುತ್ತಿದ್ದರು. ಹಾಕದವರಿಗೆ ತಾಕೀತು ಕೊಡುತ್ತಿದ್ದರು. ತಲೆ ಬಾಚಿಕೊಂಡು ಬರಬೇಕು ಇಲ್ಲವೆ ಟೋಪಿ ಧರಿಸಿಕೊಂಡು ಬರಬೇಕೆಂದು ಹೇಳುತ್ತಿದ್ದರು. ಸಹಾಯಕ ಶಿಕ್ಷಕರಾದ ಭೀಮಸೇನರಾವ್ ತಾಳಿಕೋಟೆ, ಕಿಶನರಾವ ಕೂಡ ತಮ್ಮ ವಿಷಯದ ಮೇಲೆ ಪ್ರಭುತ್ವ ಉಳ್ಳವರಾಗಿದ್ದರು. ಶಾಲೆಯ ಆವರಣದಲ್ಲಿ ಒಬ್ಬ ವಿದ್ಯಾರ್ಥಿಯೂ ಕಾಣಿಸುತ್ತಿರಲಿಲ್ಲ! ಇವರು ವರ್ಗವಾಗಿ ಹೋದ ಮೇಲೆ ಪ್ರೌಢಶಾಲೆಯಾಯಿತು. ವ್ಯವಸ್ಥಿತವಾಗಿ ಶಾಲೆ ನಡೆಯದ ಕಾರಣ ವೀರೇಂದ್ರ ಪಾಟೀಲರು ಮತ್ತೆ ಅವರನ್ನು ಚಿಂಚೋಳಿಗೆ ಕರೆಸಿಕೊಂಡರು. ಇದರಿಂದ ಶಾಲಾ ವಿದ್ಯಾರ್ಥಿಗಳ ಶಿಕ್ಷಣ ಗುಣಮಟ್ಟ ಹೆಚ್ಚಾಯಿತು.

ರಾಜ್ಯ ಪುನರ್‌ವಿಂಗಡಣೆಯಾಗುವ ಮೊದಲು ಸುಮಾರು 1955ರಲ್ಲಿ ಅವರು ಕರ್ತವ್ಯನಿರತರಾಗಿರುವಾಗಲೇ ಗೌಸರು ಪೈಗಂಬರ ವಾಸಿಗಳಾದರು.

ಐನೂಲಿಯ ಮಲ್ಲಪ್ಪ ಕುರುಬರು ಇವರು ವಿ.ಎನ್. ಪಾಟೀಲರ ಸಹಪಾಠಿ ಎಂಬುದನ್ನು ಅರಿತ ನಾನು, ಮಲ್ಲಪ್ಪನ ಮನೆಗೆ ಹೋದೆನು. ಆತನು ಹೇಳಿದ್ದು ಹೀಗೆ "ವಿ.ಎನ್. ಪಾಟೀಲರು ಉರ್ದು ಮಾಧ್ಯಮದಲ್ಲಿ ನಮ್ಮೊಡನೆ ಐದನೇ ವರ್ಗದಿಂದ ಏಳನೇ ವರ್ಗದವರೆಗೆ ಅಭ್ಯಾಸ ಮಾಡಿದವರು. ಆಗ ಗೌಸ್ ಸಾಹೇಬರು ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು. ಇಂಗ್ಲಿಷ್ ವಿಷಯ ಅವರೇ ಹೇಳುತ್ತಿದ್ದರು. ವಿ.ಎನ್. ಪಾಟೀಲರು ಎಲ್ಲ ಹುಡುಗರಿಗಿಂತಲೂ ಚುರುಕಾಗಿದ್ದರು. ಗೌಸರು ಪಾಟೀಲರನ್ನು ಬಹಳ ಪ್ರೀತಿಸುತ್ತಿದ್ದರು. ವಿನೋದಕ್ಕಾಗಿ ಅವರನ್ನು "ಟೀಲೂ, ಟೀಲೂ" ಎಂದು ಕರೆಯುತ್ತಿದ್ದರು". ವೀರೇಂದ್ರ ಪಾಟೀಲರ ಭಾವನವರಾದ ರಾಚಪ್ಪ ಭಂಡಾರಿಯವರು ವಿ.ಎನ್. ಪಾಟೀಲರ ಸಹಪಾಠಿಯಾಗಿದ್ದರು. ಮುಂದೆ ಇವರು ಇಂಜಿನಿಯರರಾಗಿ ಚಂಡ್ರಂಪಳ್ಳಿ ಆಣೆಕಟ್ಟು ನಿರ್ಮಾಣಕ್ಕೆ ಕಾರಣಕರ್ತರಾದರು ಎಂದು ಮಲ್ಲಪ್ಪ ಹೇಳಿದರು.

ಪಾಟೀಲರಲ್ಲಿ ಬಾಲ್ಯದಿಂದಲೇ ನಾಯಕತ್ವದ ಗುಣವಿತ್ತು. ವಿದ್ಯಾರ್ಥಿಗಳಲ್ಲಿ ಎದ್ದು ಕಾಣುವ ವ್ಯಕ್ತಿತ್ವವಿತ್ತು. ಇವರಲ್ಲಿ ಜಾತಿಭೇದವಿರಲಿಲ್ಲ. ಮನೆಗೆಲಸ ತಪ್ಪದೆ ಮಾಡಿಕೊಂಡು ಬರುತ್ತಿದ್ದರು. ಶಾಲೆಗೆ 6 ಕಿ.ಮೀ. ನಡೆದುಕೊಂಡು ಹೋಗಬೇಕಾಗುತ್ತಿತ್ತು. ಇಷ್ಟಿದ್ದರೂ ಕೂಡ ಓದಿನಲ್ಲಿ ಬರವಣಿಗೆಯಲ್ಲಿ ಎಲ್ಲರಿಗಿಂತ ಮುಂದೆ ಇರುತ್ತಿದ್ದರು. ಮಲ್ಲಪ್ಪ ಕುರುಬರು ಹಿಂದಿನ ವಿದ್ಯಾರ್ಥಿ ಜೀವನವನ್ನು ಸ್ಮರಿಸಿಕೊಂಡರು.

ಗೌಸರ ಇಂಗ್ಲಿಷ್ ಪ್ರಭಾವ ವಿ.ಎನ್. ಪಾಟೀಲರ ಮೇಲೆ ದಟ್ಟವಾಗಿ ಬೀರಿದೆ ಎಂದೆನಿಸುತ್ತದೆ. ಅವರ ವ್ಯಕ್ತಿತ್ವ ರೂಪುಗೊಂಡದ್ದು ಗೌಸ್‌ರಿಂದಲೇ ಎಂದು ಹೇಳಬಹುದು.

ಪ್ರೌಢಶಾಲೆ :

ಚಿಂಚೋಳಿಯಲ್ಲಿ ಮಾಧ್ಯಮಿಕ ಓದು ಮುಗಿದ ನಂತರ ಬೀದರಿನ ಸರ್ಕಾರಿ ಬಾಲಕರ ಪ್ರೌಢಶಾಲೆಯಲ್ಲಿ ಸೇರಿದರು. ಮಂಗಲಪೇಟೆಯ

ಮೆಟಕಾರಿ ಮನೆತನದವರು ಇವರ ನೆಂಟರು. ಗಿರಿಯಪ್ಪಗೌಡರ ಹೆಂಡತಿ ಪಾರ್ವತಿ ಅವರ ತವರು ಮನೆ. ಅಲ್ಲಿ ಉಳಿದುಕೊಂಡು ಅಭ್ಯಾಸ ಮಾಡ ತೊಡಗಿದರು. ಕನ್ನಡ ಮಾಧ್ಯಮ ಇರಲಾರದ ಕಾರಣ ಉರ್ದು ಮಾಧ್ಯಮದಲ್ಲಿಯೇ ಕಲಿಯಬೇಕಾಯಿತು.

ದಾಂಪತ್ಯ ಜೀವನ :

ಮಾನವ ಬದುಕಿನ ವಿಕಾಸಕ್ಕೆ ದಾಂಪತ್ಯವೇ ಬುನಾದಿ. ಹೀಗಾಗಿ ವಿ.ಎನ್. ಪಾಟೀಲರು ದಾಂಪತ್ಯ ಜೀವನಕ್ಕೆ ಅಣಿಯಾದರು. ಕಮಲಾಪುರ ಊರಿನ ಶಿವರಾಜ ಪಾಟೀಲ ಎಂಬುವವರು ಬೀದರನಲ್ಲಿ ಅಡತಿ ಅಂಗಡಿ ಇಟ್ಟಿದ್ದರು. ವಿ.ಎನ್. ಪಾಟೀಲರ ಗುಣಸ್ವಭಾವ ಅವರಿಗೆ ಹಿಡಿಸಿತು. ತಮ್ಮ ಮಗಳಾದ ಚಂಗಳಾದೇವಿಯನ್ನು ವಿವಾಹ ಮಾಡಿಕೊಡಬೇಕೆಂದು ನಿಶ್ಚಯಿಸಿದರು. ವಿದ್ಯಾರ್ಥಿ ಜೀವನದಲ್ಲಿಯೇ ಅವರ ವಿವಾಹವಾಯಿತು (1946ರಲ್ಲಿ). ಮೀನಕೇರಿಯಲ್ಲಿ ವಿವಾಹಕ್ಕೆ ನಾನು ಚಿಕ್ಕ ಬಾಲಕನಾಗಿದ್ದಾಗ ಹೋಗಿದ್ದೇನು. ಐದು ದಿವಸ ವಿಜೃಂಭಣೆಯಿಂದ ವಿವಾಹ ನೆರವೇರಿತು.

ಮದುವೆಯಾದ ನಂತರ ಬಹಳಷ್ಟು ಬಾಲಕರು ವಿಲಾಸಿ ಜೀವನದಲ್ಲಿ ಕಾಲ ಕಳೆಯುತ್ತಾರೆ. ಯಾವುದೇ ಸಾಮಾಜಿಕ, ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿ ತೋರುವದಿಲ್ಲ. ಆದರೆ, ವಿ.ಎನ್. ಪಾಟೀಲರು ಇದಕ್ಕೆ ವಿರುದ್ಧವೆಂಬಂತೆ ವಿಪರೀತವಾಗಿ ಸತತವಾಗಿ ಓದಿನ ಜೊತೆಗೆ ಸುತ್ತಲಿನ ಸಮಾಜ ದೇಶದ ಅಭಿವೃದ್ಧಿಯ ಕಾರ್ಯಗಳಲ್ಲಿ ತೊಡಗಿರುವದು ಅವರ ಜೀವನ ಚರಿತ್ರೆಯಿಂದ ತಿಳಿದು ಬರುತ್ತದೆ.

ಕಾಲೇಜು ಶಿಕ್ಷಣ :

ಬೀದರದಲ್ಲಿ ಪ್ರೌಢಶಾಲಾ ಅಭ್ಯಾಸ ಮುಗಿಸಿದ ನಂತರ ಪಾಟೀಲರು ಹೈದರಾಬಾದಿನ ಚಾದರಘಾಟ ಕಾಲೇಜಿನಲ್ಲಿ ಅಭ್ಯಾಸ ಮುಂದುವರಿಸಿದರು. ಭಾರತ ಸ್ವತಂತ್ರವಾಯಿತು. ಹೈದರಾಬಾದ ನಿಜಾಮನ ಕಪಿಮುಷ್ಠಿಯಲ್ಲಿ

ರಾಜ್ಯವು ನರಳುತ್ತಿತ್ತು. ನಿಜಾಮನ ಕಪಿಮುಷ್ಠಿಯಿಂದ ರಾಜ್ಯವನ್ನು ಮುಕ್ತಗೊಳಿಸಬೇಕೆಂಬ ಉದ್ದೇಶದಿಂದ ಆರ್ಯ ಸಮಾಜ ಮತ್ತು ಕಾಂಗ್ರೆಸ್ ಪಕ್ಷ ಹೋರಾಟ ನಡೆಸಿದವು. ಕಾಲೇಜಿನ ವಿದ್ಯಾರ್ಥಿಗಳು ಕೂಡ ಈ ಹೋರಾಟದಲ್ಲಿ ಭಾಗವಹಿಸುತ್ತಿದ್ದರು. ವಿ.ಎನ್. ಪಾಟೀಲರು 'ಫ್ರೀಡಂ ಕ್ಲಬ್' ಎಂಬ ಒಂದು ಚಳುವಳಿಗಾರರ ಸಂಸ್ಥೆಯ ಸದಸ್ಯರಾಗಿದ್ದರು. ಆ ಸಂಘದಲ್ಲಿ ನಮ್ಮ ಬೀದರ ಜಿಲ್ಲೆಯ ಹೋರಾಟಗಾರರೂ ಇದ್ದರು. ಕಾಲೇಜಿನ ವಿದ್ಯಾರ್ಥಿಗಳು ಕೂಡ ಸದಸ್ಯರಾಗಿದ್ದರು. ಅನೇಕ ಸಲ ಚಳುವಳಿ ಹೂಡಿ ಜೈಲು ಶಿಕ್ಷೆ ಅನುಭವಿಸಿದರು. ವಿದ್ಯಾರ್ಥಿಗಳಿದ್ದ ಪ್ರಯುಕ್ತ ವಯಸ್ಸಿಗನುಗುಣವಾಗಿ ದೀರ್ಘಕಾಲ ಜೈಲಿನಲ್ಲಿ ಇಡಲು ಬರುತ್ತಿರಲಿಲ್ಲ.

ಉಸ್ಮಾನಿಯಾ ವಿಶ್ವವಿದ್ಯಾಲಯದ ಮೇಲೆ ತ್ರಿವರ್ಣ ಧ್ವಜ ಹಾರಿಸಿದವರಲ್ಲಿ ವಿ.ಎನ್. ಪಾಟೀಲರು ಪ್ರಮುಖರಾಗಿದ್ದರು. ಧ್ವಜವೇರಿಸಿದ ವಿದ್ಯಾರ್ಥಿಗಳ ಮೇಲೆ ಸರ್ಕಾರ ಕ್ರಮ ಕೈಕೊಂಡಿತು.

ನಾಗಪುರ ಬಿಂಜಾನಿ ಕಾಲೇಜು :

ವಿದ್ಯಾರ್ಥಿಗಳಿಗೆ ರಾಜದ್ರೋಹಿಗಳೆಂದು ಬಗೆದು ಕಾಲೇಜಿನಿಂದ ತೆಗೆದು ಹಾಕಿದರು ಮತ್ತು ಇಂಥ ವಿದ್ಯಾರ್ಥಿಗಳಿಗೆ ಯಾವ ಕಾಲೇಜಿನಲ್ಲಿಯೂ ಪ್ರವೇಶ ಕೊಡಬಾರದೆಂದು ಪ್ರಮಾಣ ಪತ್ರದಲ್ಲಿ ನಮೂದಿಸಿದ್ದರು. ನಾಗಪುರ ಮೊದಲು ಮಧ್ಯಪ್ರದೇಶದಲ್ಲಿತ್ತು. ರಾಜ್ಯ ಪುನರ್‌ಘಟನೆಯ ನಂತರ ಮಹಾರಾಷ್ಟ್ರಕ್ಕೆ ಸೇರಿತು. ಅಲ್ಲಿನ ಮಾರ್ವಾಡಿಗರ ಬಿಂಜಾನಿ ಕಾಲೇಜು ಹೈದರಾಬಾದಿನಿಂದ ಹೊರತಳ್ಳಲ್ಪಟ್ಟ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುತ್ತಿತ್ತು. ಆ ಕಾಲೇಜಿನಲ್ಲಿ ವಿ.ಎನ್. ಪಾಟೀಲ ಮತ್ತು ಇನ್ನಿತರ ಸಹಪಾಠಿಗಳು ಬಂದು ಸೇರಿದರು. ಇಂಟರ್ ಮಿಡಿಯೆಟ್ 2 ವರ್ಷ ಕೋರ್ಸ್ ನಾಗ್ಪುರದಲ್ಲಿ ಮುಗಿಸಿದರು. (1947 ರಿಂದ 1949) ಕಾಲೇಜಿನ ಅಭ್ಯಾಸದೊಂದಿಗೆ ನಾಗ್ಪುರದಲ್ಲಿ ಹೈದರಾಬಾದ

ರಾಜ್ಯದ ವಿದ್ಯಾರ್ಥಿಗಳು ರಾಜಕೀಯ ಹಾಗೂ ಸಾಂಸ್ಕೃತಿಕ ಚಟುವಟಿಕೆಯಲ್ಲಿ ಭಾಗವಹಿಸುತ್ತಿದ್ದರು. ಭಾರತ ಮಟ್ಟದಲ್ಲಿ ಕವಿ ಸಮ್ಮೇಳನ ಏರ್ಪಡಿಸಿದ ಖ್ಯಾತಿ ಇವರಿಗೆ ಸಲ್ಲುತ್ತದೆ. ಆ ಸಮ್ಮೇಳನದಲ್ಲಿ ಭಾರತದ ನಾಮಾಂಕಿತ ಕವಿಗಳು ಭಾಗವಹಿಸಿದ್ದರು.

ವಿ.ಎನ್. ಪಾಟೀಲರು ನಾಗ್ಪುರದಲ್ಲಿ ಅಭ್ಯಾಸ ಮಾಡುತ್ತಿರುವಾಗಲೇ ಮಹಾತ್ಮ ಗಾಂಧೀಯವರು ಹುತಾತ್ಮರಾದರು. ಅರಾಜಕತೆವುಂಟಾಗಿ ಕೊಲೆ, ಸುಲಿಗೆಗಳು ಪ್ರಾರಂಭವಾದವು. ಗೊಂದಲವು ಏರ್ಪಟ್ಟಿತು. ಅಲ್ಲಿಯ ಸರ್ಕಾರವು ಅನೇಕ ಜನರನ್ನು ಬಂಧಿಸಿತು. ಕಾಲೇಜಿನ ವಿದ್ಯಾರ್ಥಿಗಳಿಗೆ ತಮ್ಮ ತಮ್ಮ ಪ್ರದೇಶಕ್ಕೆ ಹೋಗಲು ಒತ್ತಾಯಿಸಿತು. ಅಭ್ಯಾಸ ಮುಗಿಸಿದ ನಂತರ ವಿ.ಎನ್. ಪಾಟೀಲರು ಮನೆಗೆ ಮರಳಿದರು.

ಬೆಳಗಾವಿ ಲಿಂಗರಾಜ ಕಾನೂನು ಕಾಲೇಜು :

ವಿ. ಎನ್. ಪಾಟೀಲರಿಗೆ ಕಾನೂನು ಕಲಿಯಬೇಕೆಂಬ ಹಂಬಲವಾಯಿತು. ಆದ್ದರಿಂದ ಮುಂದೆ ಕಾನೂನು ಅಭ್ಯಾಸಕ್ಕಾಗಿ ಬೆಳಗಾವಿಯ ಲಿಂಗರಾಜ ಕಾನೂನು ಕಾಲೇಜಿನಲ್ಲಿ ಎರಡು ವರ್ಷ ಅಭ್ಯಾಸ ಮಾಡಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿ ವಕೀಲಿ ವೃತ್ತಿ ಕೈಕೊಂಡರು.

ರಜಾಕಾರರ ಉಪಟಳ :

ಹೈದರಾಬಾದಿನ ಸ್ವಾತಂತ್ರ್ಯ ಹೋರಾಟ ಹಾಗೂ ಪಾಟೀಲರ ವಿದ್ಯಾರ್ಥಿ ಜೀವನ ಏಕಕಾಲದಲ್ಲಿ ಸಂಭವಿಸಿತು. ಭಾರತ ಸ್ವತಂತ್ರವಾದರೂ ಹೈದರಾಬಾದ ರಾಜ್ಯದ ಜನರಿಗೆ ಆ ಭಾಗ್ಯ ದೊರೆಯಲಿಲ್ಲ. ಭಾರತ ಸ್ವಾತಂತ್ರ್ಯ ಪಡೆದ 13 ತಿಂಗಳ ನಂತರ ಹೈದರಾಬಾದ ಪ್ರಜೆಗಳಿಗೆ ಸ್ವಾತಂತ್ರ್ಯ ದೊರಕಿತು. ಇದಕ್ಕಿಂತ ಮೊದಲು ಹಿಂದುಗಳು ನಾನಾ ತರದ ಕಷ್ಟಕೋಟಲೆಗಳನ್ನು ಸಹಿಸಬೇಕಾಯಿತು. ಗ್ರಾಮಗಳು ಸುಟ್ಟು ಹೋದವು. ಮನೆಗಳು ಲೂಟಿಯಾದವು. ಮಹಿಳೆಯರ ಮೇಲೆ ಅತ್ಯಾಚಾರಗಳು

ಅವ್ಯಾಹತವಾಗಿ ನಡೆದವು. ಹೈದರಾಬಾದ ನಿಜಾಮನು ದುಷ್ಟ ರಜಾಕಾರರಿಗೆ ಕುಮ್ಮಕ್ಕು ಕೊಟ್ಟನು. ರಜಾಕಾರರ ನಾಯಕ ಖಾಸಿಮ್ ರಜ್ವಿ ಈ ಹೀನ ಕೃತ್ಯಗಳಿಗೆ ಕಾರಣನಾಗಿದ್ದನು. ಈ ರೀತಿ ಹೀಗೆಯೇ ಮುಂದುವರಿದರೆ ಹಿಂದುಗಳ ಸಾಮೂಹಿಕ ಹತ್ಯೆಯಾಗುವ ಸೂಚನೆಗಳು ದೊರೆತವು. ಭಯಭೀತರಾದ ಹಿಂದೂಗಳು ರಾಜ್ಯದ ನೆರೆ ರಾಜ್ಯಗಳ ಗಡಿ ಪ್ರದೇಶಗಳಿಗೆ ಓಡಿ ಹೋದರು. ಈ ಪ್ರದೇಶಗಳು ಭಾರತ ಒಕ್ಕೂಟಕ್ಕೆ ಸೇರಿದವು. ವಿ.ಎನ್. ಪಾಟೀಲರು ಹಾಗೂ ಆ ಊರಿನ 60 ಜನರು ಅಕ್ಕಲಕೋಟೆಗೆ ವಲಸೆ ಹೋದರು. ಪಾಟೀಲರು ಹೈದರಾಬಾದ ರಾಜ್ಯವನ್ನು ಮುಕ್ತಗೊಳಿಸಲು ಸೈನ್ಯದ ತರಬೇತಿ ಪಡೆದರು. ನಿವೃತ್ತ ಸೈನಕರಿಂದ ಹೋರಾಟಗಾರರು ತರಬೇತಿ ಹೊಂದಿದರು. ಗಡಿಯಲ್ಲಿ ರಜಾಕಾರರ ಹಾಗೂ ಹೋರಾಟಗಾರರ ನಡುವೆ ಯುದ್ಧಗಳು ನಡೆಯುತ್ತಿದ್ದವು. ವಿ.ಎನ್. ಪಾಟೀಲರು ಆ ಹೋರಾಟದಲ್ಲಿ ಭಾಗಿಯಾಗುತ್ತಿದ್ದರು. ಶಸ್ತ್ರಾಸ್ತ್ರ ತರಬೇತಿ ನಡೆಸುವ ಶಿಬಿರಗಳೆಂದರೆ ಗಡಿಭಾಗದ ಗ್ರಾಮಗಳಾದ ದುಧನಿ, ಮೈಂದರ್ಗಿ ಮುಂತಾದ ಊರುಗಳಿದ್ದವು.

ರಜಾಕಾರರಿಗೆ ಪಾಕಿಸ್ತಾನದ ನೆರವು ಇತ್ತು. ಪಠಾಣರು ರಜಾಕಾರರಿಗೆ ತರಬೇತಿ ಕೊಡುತ್ತಿದ್ದರು. ಹೊರ ರಾಜ್ಯಗಳಿಂದ ಮುಸಲ್ಮಾನರನ್ನು ಹೈದರಾಬಾದಿಗೆ ಬರ ಮಾಡಿಕೊಂಡು ಮುಸಲ್ಮಾನರ ಜನಸಂಖ್ಯೆ ಹೆಚ್ಚಿಸಬೇಕು ಎಂಬ ದೂರ ದೃಷ್ಟಿಯಿಂದ ಅವರನ್ನು ಬರ ಮಾಡಿಕೊಳ್ಳುತ್ತಿದ್ದರು ಮತ್ತು ಹಿಂದುಗಳನ್ನು ಸಂಹರಿಸಿ ಅವರನ್ನು ದೇಶಭ್ರಷ್ಟರನ್ನಾಗಿ ಮಾಡುವದೇ ಅವರ ಗುರಿಯಾಗಿತ್ತು. ಇದನ್ನು ಅರಿತ ಭಾರತದ ಉಪಪ್ರಧಾನಿಗಳಾದ ಸರ್ದಾರ ವಲ್ಲಭಭಾಯಿ ಪಟೇಲರು ಅರಾಜಕತೆಯನ್ನು ಸಹಿಸದೆ 13-09-1948ಕ್ಕೆ ಪೋಲಿಸ್ ಕಾರ್ಯಾಚರಣೆಗೆ ಅನುಮತಿ ಕೊಟ್ಟರು. ಭಾರತ ಸರ್ಕಾರದ ಸೇನೆಯು ರಜಾಕಾರರಿಗೆ ಮಣ್ಣು ಮುಕ್ಕಿಸಿದರು. ಹೈದ್ರಾಬಾದ ರಾಜ್ಯವನ್ನು 17-09-1948ರಂದು ಭಾರತದ ಒಕ್ಕೂಟದಲ್ಲಿ ಸೇರಿತು. ಸರ್ದಾರ

ಪಟೇಲರನ್ನು ಭಾರತದ ಉಕ್ಕಿನ ಮನುಷ್ಯರೆನ್ನುತ್ತಾರೆ. ನಾವು ಅವರಿಗೆ ಚಿರಋಣಿಗಳಾಗಿರಬೇಕಾಗುತ್ತದೆ.

ಇದೇ ಕಾಲಕ್ಕೆ ಬಸವರಾಜ ಹುಡುಗಿಯವರು ಏಕಕಾಲಕ್ಕೆ ಭಾರತ ಸ್ವಾತಂತ್ರ್ಯಕ್ಕಾಗಿಯೂ ಹೈದರಾಬಾದ ರಾಜ್ಯವನ್ನು ನಿಜಾಮನ ದುರಾಡಳಿತದಿಂದ ಮುಕ್ತಗೊಳಿಸುವದಕ್ಕಾಗಿಯೂ ಹಾಗು ಪೋರ್ಚುಗೀಸರನ್ನು ಗೋವಾದಿಂದ ಓಡಿಸುವದಕ್ಕಾಗಿಯೂ ಹೋರಾಡಿದ್ದು ಆಶ್ಚರ್ಯವನ್ನುಂಟು ಮಾಡಿದೆ! ಹೀಗೆ ಮೂರೂ ರಾಜ್ಯಾಡಳಿತದ ವಿರೋಧವಾಗಿ ಹೋರಾಡಿದವರು ಭಾರತದಲ್ಲಿ ವಿರಳವೆಂದೇ ಹೇಳಬೇಕು!

ಗೋವಾ ವಿಮೋಚನೆಯ ಸತ್ಯಾಗ್ರಹದಲ್ಲಿ ಭಾಗವಹಿಸಲು ಹೋದಾಗ ಪೋರ್ಚುಗೀಸರ ಗುಂಡಿಗೆ ಆಹುತಿಯಾದರು. ಇವರ ಪಾರ್ಥಿವ ಶರೀರವನ್ನು ಅಕ್ಕಲಕೋಟೆಗೆ ತರಲು ಅಸಾಧ್ಯವಾಗಿತ್ತು. ವಿ.ಎನ್. ಪಾಟೀಲರು ತಮ್ಮ ಸಂಗಡಿಗರೊಂದಿಗೆ ಗೋವಾಕ್ಕೆ ಹೋಗಿ ಅಲ್ಲಿನ ಸರ್ಕಾರಕ್ಕೆ ಬಸವರಾಜ ಹುಡಗಿಯವರು ಕ್ರೈಸ್ತ ಧರ್ಮಕ್ಕೆ ಸೇರಿದವರೆಂದು ಮನವರಿಕೆ ಮಾಡಿಕೊಟ್ಟರು. ಕ್ರೈಸ್ತರೆಂದು ತಿಳಿದ ಅಲ್ಲಿಯ ಕ್ರೈಸ್ತ ಆಡಳಿತಗಾರರು ಕಳೇಬರವನ್ನು ಒಯ್ಯಲು ಅನುಮತಿಯನ್ನಿತ್ತರು. ಕ್ರೈಸ್ತ ಧರ್ಮದ ಪದ್ಧತಿಯಂತೆ ಶವವನ್ನು ಪೆಟ್ಟಿಗೆಯಲ್ಲಿಟ್ಟು ತೆಗೆದುಕೊಂಡು ಬಂದರು. ಅಕ್ಕಲಕೋಟ ಬಸವರಾಜ ಹುಡುಗಿಯವರ ಪತ್ನಿಯವರ ತವರು ಮನೆಯಾಗಿದೆ. ಅಕ್ಕಲಕೋಟೆಯ ಸಿಂಧಿಯಾ ರಾಜಮನೆತನದ ರುದ್ರಭೂಮಿಯಲ್ಲಿ ಸಮಾಧಿ ಮಾಡಲಾಯಿತು. ಈ ಘಟನೆಯು 1948ರ ಮೇ ತಿಂಗಳಲ್ಲಿ ಜರುಗಿತು.

ಈ ರೀತಿ ವಿಶ್ವನಾಥ ಪಾಟೀಲರು ಎಂತಹ ದೂರಾಲೋಚನೆಯವರಿದ್ದರೆಂದು ತಿಳಿದು ಬರುತ್ತದೆ. ಹೈದರಾಬಾದ ವಿಮೋಚನೆ ನಂತರ ಮರಳಿ ಮನೆಗೆ ಬಂದರು. ವಿ.ಎನ್. ಪಾಟೀಲರು

ಸಮಾಜದಲ್ಲಿಯ ಉಚ್ಚ-ನೀಚ ಭಾವನೆಗಳನ್ನು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಪ್ರಯತ್ನಿಸ ತೊಡಗಿದರು.

ಪಾಟೀಲರಿಗೆ ಸಮಾಜ ಸುಧಾರಣೆಯ ಪ್ರೇರಣೆ ದೊರಕಿದ್ದು ಚನ್ನಬಸವ ಪಟ್ಟದ್ದೇವರಿಂದ ಎಂದು ಹೇಳಬಹುದು. ಬಾಲ್ಯದಲ್ಲಿಯೆ ಪಟ್ಟದ್ದೇವರಿಂದ ಕಲಿತದ್ದನ್ನು ಅವರ ಉಪದೇಶಗಳನ್ನು ಕೃತಿಯಲ್ಲಿ ತಂದರು.

ಅಸ್ಪೃಶ್ಯೋದ್ಧಾರ :

1952ರಲ್ಲಿ ಒಂದು ಘಟನೆ ಸಂಭವಿಸಿತು. ವಿ.ಎನ್. ಪಾಟೀಲರು ನಮ್ಮೂರು ಐನೂಲಿಗೆ ಆಗಮಿಸಿದಾಗ ರಾಮ ದೇವರ ಗುಡಿಯಲ್ಲಿ ಸಭೆಯನ್ನೇರ್ಪಡಿಸಿದರು. ಸಾಕಷ್ಟು ಜನರು ಸೇರಿದರು. ಸಭೆಯ ಅಧ್ಯಕ್ಷತೆಯನ್ನು ಬೇಮಳಖೇಡದ ಉರಿಲಿಂಗಪೆದ್ದಿ ಮಠದ ಸಿ.ಜಿ. ಸ್ವಾಮಿ ವಹಿಸಿದ್ದರು. ಹರಿಜನರು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದರು. ಪಾಟೀಲರು ಜನರನ್ನುದ್ದೇಶಿಸಿ ಹೀಗೆ ಹೇಳಿದರು "ಮನುಷ್ಯ ಕುಲವು ಒಂದೇ ಆಗಿದೆ. ಇವರಲ್ಲಿ ಜಾತಿಭೇದವಿಲ್ಲ. ಅಸ್ಪೃಶ್ಯತೆ ಎಂಬುದು ಮೂರ್ಖರ ಕಲ್ಪನೆಯಾಗಿದೆ. ಸದಾಚಾರಿಯೇ ಉತ್ಕೃಷ್ಟ ಕುಲದವ. ಭವಿಯೊಂದು ಕುಲ ಭಕ್ತವೊಂದು ಕುಲ. ಕಲ್ಲು ಮಣ್ಣು ಹೊತ್ತು ಗುಡಿಗೋಪುರಗಳನ್ನು ಹರಿಜನರು ಕಟ್ಟುತ್ತಾರೆ.

ಆಗ ಅವರ ಜಾತಿಯನ್ನು ನೋಡುವದಿಲ್ಲ! ದೇವಾಲಯ ತಯಾರಾದ ನಂತರ ಅವರಿಗೆ ಪ್ರವೇಶ ಕೊಡದೆ ಇರುವುದು ಯಾವ ನ್ಯಾಯ ? ನಮ್ಮ ಮನಸ್ಸಿನಿಂದ ಇಂತಹ ಹೀನ ವಿಚಾರಗಳನ್ನು ತೆಗೆಯಬೇಕು. ಅಸ್ಪೃಶ್ಯತೆ ಆಚರಿಸುವವರು ಬಸವಣ್ಣನವರ ಮತ್ತು ಶರಣರ ಅನುಯಾಯಿಗಳಾಗುವದಿಲ್ಲ. ಅವರಿಗೆ ದ್ರೋಹ ಮಾಡಿದಂತಾಗುವದು. ಅವರು ನಮ್ಮವರೆಂದು ಅಪ್ಪಿಕೊಳ್ಳಬೇಕು. ಇಷ್ಟು ದಿನ ತಿಳಿದೋ ತಿಳಿಯದೆಯೋ ಅಸ್ಪೃಶ್ಯತೆ ಆಚರಿಸಿದ್ದೀರಿ. ಇನ್ನು ಮುಂದೆ ನಿಮ್ಮ ತಪ್ಪು ತಿದ್ದಿಕೊಳ್ಳಿರೆಂದು ಹೇಳಿದರು. ಅವರ ಅಂತಃಕರಣದ

ಮಾತುಗಳು ಜನರ ಮನಸ್ಸನ್ನು ತಟ್ಟಿದವು ದೇವಾಲಯ ಪ್ರವೇಶಕ್ಕೆ ಯಾರೂ ವಿರೋಧಿಸಲಿಲ್ಲ!"

ಅಧ್ಯಕ್ಷತೆ ವಹಿಸಿದ ಸಿ.ಜಿ. ಸ್ವಾಮಿಗಳು ಹೀಗೆ ಹೇಳಿದರು "ನಮ್ಮನ್ನು ಹೀನ ದೃಷ್ಟಿಯಿಂದ ನೋಡುವದರಿಂದ ನಮ್ಮ ಮನಸ್ಸಿಗೆ ನೋವಾಗುವದಿಲ್ಲವೆ ? ನಾವು ಮನುಷ್ಯರಲ್ಲವೆ ? ನಮ್ಮನ್ನು ಮನುಷ್ಯರೆಂದು ಭಾವಿಸಿರಿ ಎಂದು ತಮಗಾದ ನೋವನ್ನು ತೋಡಿಕೊಂಡರು.

ಸವರ್ಣೀಯರ ದಬ್ಬಾಳಿಕೆಯನ್ನು ಹರಿಜನರು ಕಾಲಾನುಕಾಲದಿಂದ ಸಹಿಸಿಕೊಂಡು ಬರುತ್ತಿರುವದು ಅವರ ಔದಾರ್ಯವೆಂದೇ ಹೇಳಬೇಕು. ಗಾಂಧೀಜಿಯವರು ಕೂಡ ಅಸ್ಪೃಶ್ಯತೆಯು ಹಿಂದು ಧರ್ಮಕ್ಕೆ ಅಂಟಿದ ಕುಷ್ಠರೋಗವೆಂದು ಹೇಳಿದರು. ಗಾಂಧೀಜಿಯ ನಂತರ ಅಂಬೇಡ್ಕರರು ತಮ್ಮ ಜನಾಂಗದ ಸ್ವಾಭಿಮಾನಕ್ಕಾಗಿ ಅಹೋರಾತ್ರಿ ಶ್ರಮಿಸಿದ್ದನ್ನು ಸ್ವಾಮಿಗಳು ಹೇಳಿದರು". ಆಗ ನಾನು ಸಭೆಯಲ್ಲಿ ಹಾಜರಿದ್ದೆನು.

ವಾಚನಾಲಯಗಳ ಸ್ಥಾಪನೆ :

ಪಾಟೀಲರು ವಿದ್ಯಾರ್ಥಿಯಾಗಿದ್ದಾಗಲೇ ಅಭ್ಯಾಸದೊಂದಿಗೆ ಕನ್ನಡ ಪ್ರಚಾರ ವಾಚನಾಲಯಗಳ ಸ್ಥಾಪನೆ. ಕನ್ನಡ ಶಾಲೆ, ಪ್ರೌಢಶಾಲೆಗಳ ಪ್ರಾರಂಭಗೊಳಿಸಲು ಶ್ರಮಿಸಿದರು. ಯುವಕ ಸಂಘಗಳನ್ನು ಸ್ಥಾಪಿಸಿದರು. ಇದರಿಂದ ಜನರಲ್ಲಿ ಕನ್ನಡದ ಬಗ್ಗೆ ಜಾಗೃತಿಯುಂಟಾಯಿತು.

ಶಿಕ್ಷಕರಾದ ವೀರಸಂಗಪ್ಪ ಮಣಗೆಯವರು ಪಾಟೀಲರೊಡನೆ ಸಾಮಾಜಿಕ ಕಾರ್ಯಗಳಲ್ಲಿ ದುಡಿದವರಾಗಿದ್ದರು. ಅವರಿಂದ ಮಾಹಿತಿ ಪಡೆಯಬೇಕೆಂಬ ಉದ್ದೇಶದಿಂದ ಬೀದರ ನನಗರದ ಬಸವ ಮಂಟಪದ ಹತ್ತಿರವಿರುವ ಅವರ ಮನೆಗೆ ಹೋದೆನು. ಅವರೊಂದಿಗೆ ಚರ್ಚಿಸಿದೆನು. ವಿ.ಎನ್. ಪಾಟೀಲರನ್ನು ಕುರಿತು ಅವರು ಹೇಳಿದ್ದೇನೆಂದರೆ "ಬೀದರನಲ್ಲಿ ಕರ್ನಾಟಕ ವಾಚನಾಲಯವನ್ನು ಸ್ಥಾಪಿಸುವವರಲ್ಲಿ ಮೊದಲಿಗರೆಂದು

ಹೇಳಬೇಕು. ನಾನು ಮೊದಲು ಆ ವಾಚನಾಲಯದ ಕಾರ್ಯದರ್ಶಿಯಾಗಿದ್ದೆ. ಬೀದರ ನಗರದ ಪ್ರತಿಯೊಬ್ಬ ಶಿಕ್ಷಕರು ಈ ವಾಚನಾಲಯದ ಸದಸ್ಯರಾಗಿದ್ದರು. ಪ್ರತಿ ತಿಂಗಳು ಎರಡಾಣೆ ಶುಲ್ಕ ಕೊಡಬೇಕಾಗಿತ್ತು. ಈ ವಾಚನಾಲಯವು 1952ರಲ್ಲಿ ಪ್ರಾರಂಭವಾಯಿತು. ಇಂದಿನ ಬಸವ ಮಂಟಪವೇ ಅಂದಿನ ವಾಚನಾಲಯ. ಕರ್ನಾಟಕದಲ್ಲಿ ಪ್ರಕಟವಾಗುವ ದಿನಪತ್ರಿಕೆಗಳು, ವಾರ ಪತ್ರಿಕೆಗಳು ಬರುತ್ತಿದ್ದವು. ಸರ್ಕಾರದ ಸಹಾಯದಿಂದ ಉತ್ತಮ ಗ್ರಂಥಗಳು ತರಿಸಲಾಯಿತು" ಎಂದು ಮಣಗೆಯವರು ಹೇಳಿದರು.

ಶಾಲೆ ಬಿಟ್ಟ ನಂತರ ವಿದ್ಯಾರ್ಥಿಗಳು, ಯುವಕರು ಪತ್ರಿಕೆಗಳನ್ನು ಓದಲು ಧಾವಿಸಿ ಬರುತ್ತಿದ್ದವು. ಆಗಾಗ ಉಪನ್ಯಾಸಗಳು ಏರ್ಪಡಿಸುತ್ತಿದ್ದರು. ಈ ವಾಚನಾಲಯದಿಂದ ವಿದ್ಯಾರ್ಥಿಗಳಿಗೆ ಬಹಳಷ್ಟು ಪ್ರೇರಣೆ ದೊರೆಯಿತು. (ಅದರ ಫಲಾನುಭವಿಗಳಲ್ಲಿ ನಾನೂ ಒಬ್ಬನು.)

ಪಾಟೀಲರು ಮೀನಕೇರಿಯಲ್ಲಿ ತಮ್ಮ ಚಿಕ್ಕಪ್ಪಂದಿರ ಸಹಕಾರದಿಂದ ವಾಚನಾಲಯವನ್ನು ಸ್ಥಾಪಿಸಿದರು. ಆ ಚಿಕ್ಕ ಹಳ್ಳಿಯಲ್ಲಿ ಕರ್ನಾಟಕದ ಶ್ರೇಷ್ಠ ಲೇಖಕರ ಪುಸ್ತಕಗಳು ದೊರಕುತ್ತಿದ್ದವು. ಜನರಿಗೆ ಜ್ಞಾನ ಸಂಪಾದನೆ ಮಾಡುವ ಅವಕಾಶ ಅವರಿಂದಲೇ ದೊರೆಯಿತು. ಮೀನಕೇರಿಯ ಗ್ರಂಥಾಲಯದಿಂದ ಐನೂಲಿಗೆ ಪುಸ್ತಕಗಳನ್ನು ನಮ್ಮ ಅಣ್ಣ ನಾಗಶೆಟ್ಟಿ ಪುಣ್ಯಶೆಟ್ಟಿಯುವರು ತರುತ್ತಿದ್ದರು. ಇವರು ಗಿರಿಯಪ್ಪಗೌಡರ ಅಳಿಯಂದಿರು. ದೇವಕಿ ಇವರ ಧರ್ಮಪತ್ನಿ. ಗಳಗನಾಥ, ಕೃಷ್ಣಮೂರ್ತಿ ಪುರಾಣಿಕರ, ಅ.ನ.ಕೃ.ರವರ ಕಾದಂಬರಿಗಳು ತಂದಿದ್ದನ್ನು ನಾವೆಲ್ಲರೂ ಓದುತ್ತಿದ್ದೆವು. ಮೀನಕೇರಿ ಗ್ರಂಥಾಲಯದಿಂದ ನಾನೂ ಪ್ರೇರಣೆ ಪಡೆದಿದ್ದೇವೆ. ಈ ರೀತಿ ಜ್ಞಾನ ಪ್ರಸಾರದ ಕೆಲಸ ಮಾಡಿ ಜಿಲ್ಲೆಯಲ್ಲಿ ಹಾಗೂ ಗಡಿಭಾಗದಲ್ಲಿ ಕನ್ನಡಾಭಿಮಾನವನ್ನು ಜಾಗೃತಗೊಳಿಸಿದವರಲ್ಲಿ ಪಾಟೀಲರೆ ಮೊದಲಿಗರು ಹಾಗೂ ಅಗ್ರ ಗಣ್ಯರು!

ಧನಶ್ರೀಯಲ್ಲಿ ಕನ್ನಡ ಅಧಿವೇಶನ :

ರಾಜ್ಯ ಪುನರ್ಘಟನೆಯಾದ ನಂತರ ಕನ್ನಡ ಮಾತನಾಡುವ ಕೆಲ ಪ್ರದೇಶಗಳು ಆಂಧ್ರಕ್ಕೆ ಸೇರಿಸಲಾಯಿತು. ಧನಶ್ರೀ ಹಳ್ಳಿಯು ಕನ್ನಡ ಮಾತನಾಡುವ ಜನರಿಂದ ಕೂಡಿದ್ದರೂ ಆಂಧ್ರಕ್ಕೆ ಒಳಪಟ್ಟು ಜಹೀರಾಬಾದ ತಾಲೂಕಿಗೆ ಸೇರಿಸಲಾಯಿತು. ಇಂತಹ ಸಂದಿಗ್ಧ ಸಮಯದಲ್ಲಿ ವಿ.ಎನ್. ಪಾಟೀಲರು ಧನಶ್ರೀಯಲ್ಲಿ ಕನ್ನಡಿಗರ ಅಧಿವೇಶನವನ್ನು ಏರ್ಪಡಿಸಿದರು. ಚಿತ್ರದುರ್ಗದ ಸಂಸದ್ ಸದಸ್ಯರಾದ ಸಿ.ಆರ್. ಬಸಪ್ಪನವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಗಿರಿಯಪ್ಪ ಪಾಟೀಲರು ಆ ಅಧಿವೇಶನದ ಅಧ್ಯಕ್ಷರಾಗಿದ್ದರು. ಅನೇಕ ಕನ್ನಡ ಅಭಿಮಾನಿಗಳು ಹಾಗೂ ಅನೇಕ ಮುಖಂಡರು ಆಗಮಿಸಿದ್ದರು. ಧನಶ್ರಿ ಗ್ರಾಮದ ಬಸವರಾಜ ಸಿಂದೋಲರವರು ವ್ಯವಸ್ಥಾಪಕರಾಗಿದ್ದರು.

ಈ ಅಧಿವೇಶನದಲ್ಲಿ ಕೈಕೊಂಡ ನಿರ್ಣಯಗಳೆಂದರೆ, ಧನಶ್ರೀ ಮತ್ತು ಮಾಡಗಿ ಗ್ರಾಮಗಳಲ್ಲಿ ಕನ್ನಡ ಮಾತನಾಡುವವರ ಸಂಖ್ಯೆ ಹೆಚ್ಚಿದೆ. ಆಂಧ್ರದಲ್ಲಿ ಸೇರಿದ ಈ ಎರಡು ಗ್ರಾಮಗಳನ್ನು ಕರ್ನಾಟಕದಲ್ಲಿ ಸೇರಿಸಬೇಕು. ಇದರಂತೆ ಬರೂರ ಮತ್ತು ಧರಮಪೂರ ತೆಲುಗು ಮಾತನಾಡುವ ಗ್ರಾಮಗಳು ಕರ್ನಾಟಕದಲ್ಲಿ ಸೇರಿವೆ. ಇವೆರಡು ಹಳ್ಳಿಗಳನ್ನು ಆಂಧ್ರಕ್ಕೆ ಸೇರಿಸಬೇಕು. ಈ ರೀತಿ ಕೊಟ್ಟು ತೆಗೆದುಕೊಳ್ಳುವ ನ್ಯಾಯಯುತ ಬೇಡಿಕೆಯನ್ನು ಮಂಡಿಸಲಾಯಿತು. ಆಗ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಬಿ. ರಾಮಕೃಷ್ಣರಾವ ಆಗಿದ್ದರು. ಎಲ್ಲವೂ ನಿಗದಿಯಂತೆಯೇ ಆಗುವುದರಲ್ಲಿತ್ತು. ಆದರೆ, ನಾರಾಯಣಖೇಡದ ಬಾಪುರಾವ ದೇಶಪಾಂಡೆ ಅಡ್ಡಗಾಲು ಹಾಕಿದರು. ಹಾಗಾಗಿ ಅದು ಅಷ್ಟಕ್ಕೆ ನಿಂತು ಬಿಟ್ಟಿತು. ಈ ಅಧಿವೇಶನದಲ್ಲಿ ನಾನೂ ಕೂಡ ಭಾಗವಹಿಸಿದ್ದೆನು. ಕನ್ನಡದ ಖ್ಯಾತ ಕವಿ ಡಾ. ಮಾಣಿಕರಾವ ಧನಶ್ರೀಯವರು ಅದೇ ಊರಿನವರು. ವಿ.ಎನ್. ಪಾಟೀಲರ ಪ್ರಯತ್ನದಿಂದ ಆಂಧ್ರಕ್ಕೆ ಸೇರಿದ ಬೇಮಳಖೇಡ ಮತ್ತು ನಿರ್ಣಾ ಹಾಗೂ ಆ ಸರ್ಕಲ್‌ಗೆ ಸೇರಿದ ಎಲ್ಲಾ ಹಳ್ಳಿಗಳು ಕರ್ನಾಟಕಕ್ಕೆ

ಸೇರಿದವು. ಕನ್ನಡ ಮಾತನಾಡುವ ಎರಡು ಹಳ್ಳಿಗಳು ಮಾತ್ರ ಕರ್ನಾಟಕದಲ್ಲಿ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಈ ಹಿನ್ನಲೆಯಲ್ಲಿ ಬೇಮಳಖೇಡ ಹಾಗೂ ನಿರ್ಣಾ ಸರ್ಕಲ್‌ದ ಕನ್ನಡಿಗರು ಪಾಟೀಲರಿಗೆ ಚಿರಋಣಿಯಾಗಿರಬೇಕು ಎಂದು ಡಾ. ಮಾಣಿಕರಾವ ಧನಶ್ರೀ ಹೇಳುತ್ತಾರೆ. (ಅವರು ಇತ್ತೀಚೆಗೆ ಶಿವನ ಪಾದ ಸೇರಿದರು.)

ಕಮ್ಯುನಿಷ್ಟ ಪಕ್ಷದಲ್ಲಿ ಪ್ರವೇಶ :

ಕರ್ನಾಟಕದ ಕಮ್ಯುನಿಷ್ಟ ಪಕ್ಷದ ಅಧ್ಯಕ್ಷರು ಬಿ.ವಿ. ಕಕ್ಕಿಲಾಯರವರಾಗಿದ್ದರು. ವಿ.ಎನ್. ಪಾಟೀಲರು 1957ರಲ್ಲಿ ಕಮ್ಯುನಿಷ್ಟ ಪಕ್ಷ ಸೇರಿದರು. ಬೀದರ ಜಿಲ್ಲೆಯಲ್ಲಿ ಇವರ ಸಂಗಾತಿಗಳೆಂದರೆ ರಂಗನಾಥರಾವ ಸಾಯಗಾಂವಕರ್, ಶಂಕರರಾವ ಘಂಟಿ, ಶಂಕರರಾವ ದೇಶಪಾಂಡೆ ಹಳ್ಳಿಖೇಡ, ಹಾವಗಿರಾವ ತಮಸಂಗೆ ದಾಡಗಿ, ಕಲ್ಯಾಣರಾವ ಪಾಟೀಲ ತಲವಾಡ ಮುಂತಾದವರು. ಅನೇಕ ಹಳ್ಳಿಗಳಲ್ಲಿ ಅವರ ಪಕ್ಷದ ಸದಸ್ಯರಾದರು. ವಿ.ಎನ್. ಪಾಟೀಲರು ಬೀದರ ಜಿಲ್ಲೆಯ ಭಾರತೀಯ ಕಮ್ಯುನಿಷ್ಟ ಪಾರ್ಟಿಯ ಕಾರ್ಯದರ್ಶಿಗಳಾಗಿದ್ದರು.

ಕಮ್ಯುನಿಷ್ಟ ಸಿದ್ಧಾಂತ :

ಕಮ್ಯುನಿಷ್ಟ ಸಿದ್ಧಾಂತವು ಕಾರ್ಲ್‌ಮಾರ್ಕ್ಸ್ ಸಿದ್ಧಾಂತವಾಗಿದೆ. ಸಮಾಜದಲ್ಲಿರುವ ಆರ್ಥಿಕ ಅಸಮಾನತೆಯನ್ನು ಸರಿಪಡಿಸುವ ತತ್ವಗಳನ್ನು ಬರೆದಿಟ್ಟಿದ್ದಾನೆ. ಈತನ ಸ್ನೇಹಿತನಾದ ಏಂಜಲ್, ಮಾರ್ಕ್ಸ್‌ನ ತತ್ವಗಳನ್ನು ಪ್ರಕಟಿಸುವ ಜವಾಬ್ದಾರಿ ಹೊತ್ತಿದ್ದನು. ಈ ತತ್ವವು ರಷ್ಯಾ ಮತ್ತು ಚೈನಾ ದೇಶಗಳಲ್ಲಿ ಹೆಚ್ಚು ಪ್ರಚಾರಗೊಂಡಿತು. ಲೆನಿನ್ ಮತ್ತು ಸ್ಟಾಲಿನ್ ರಷ್ಯಾ ದೇಶದಲ್ಲಿ ಈ ಸಿದ್ಧಾಂತವನ್ನು ರಾಜ್ಯದ ಆಡಳಿತದಲ್ಲಿ ತಂದರು. ನಮ್ಮ ದೇಶದಲ್ಲಿ ಪಶ್ಚಿಮ ಬಂಗಾಲ ಮತ್ತು ಕೇರಳದಲ್ಲಿ ಕಮ್ಯುನಿಷ್ಟ ಸರ್ಕಾರ ರಚನೆಗೊಂಡಿತು.

"ಶಕ್ತಿ ಇದ್ದಷ್ಟು ದುಡಿ, ಅವಶ್ಯಕತೆ ಇದ್ದಷ್ಟು ಪಡಿ" ಇದು ಕೂಡ ಶರಣ ಸಿದ್ಧಾಂತವೇ ಆಗಿದೆ. ಬಂಡವಾಳಶಾಹಿಗಳ ಹಿಡಿತದಲ್ಲಿರುವ ದುಡಿಯುವ ಕಾರ್ಯಕರ್ತರೇ ಒಡೆಯರಾಗಬೇಕೆಂಬ ಸಿದ್ಧಾಂತ ಕಮ್ಯುನಿಷ್ಟ ಪಕ್ಷದ್ದಾಗಿದೆ. ಪಾಟೀಲರು ಕಮ್ಯುನಿಷ್ಟ ಪಕ್ಷದ ನಾಯಕರಾಗಿ ಹಗಲಿರುಳು ಪಾರ್ಟಿಗಾಗಿ ದುಡಿದರು. ಅವರಿಗೆ ಈ ಸಿದ್ಧಾಂತದ ಮೇಲೆ ಅಗಾಧವಾದ ನಿಷ್ಠೆ ಇತ್ತು. ಯಾವುದೇ ಸಂದರ್ಭದಲ್ಲಿ ಪಕ್ಷ ತೊರೆಯಲಿಲ್ಲ. ಕೊಂಬೆಯಿಂದ ಕೊಂಬೆಗೆ ಹಾರುವ ಮಂಗನಂತೆ ಪಕ್ಷಾಂತರ ಮಾಡುವ ರಾಜಕಾರಣಿ ಇವರಾಗಿರಲಿಲ್ಲ. ವೀರೇಂದ್ರ ಪಾಟೀಲರು ಇವರನ್ನು ಕಾಂಗ್ರೆಸ್ ಪಕ್ಷದಲ್ಲಿ ಸೇರಿಸಿಕೊಳ್ಳಬೇಕೆಂದು ಆಮಿಷ್ ಒಡ್ಡಿದ್ದರು. ಒಂದು ವೇಳೆ ಇವರು ಕಾಂಗ್ರೆಸ್ ಪಕ್ಷ ಸೇರಿದ್ದರೆ ಪ್ರಭಾವಿ ಸಚಿವರಾಗಬಹುದಿತ್ತು. ಆದರೆ ಇವರು ತಮ್ಮ ಪಕ್ಷದ ನಿಷ್ಠೆ ಬಿಡಲಿಲ್ಲ!

ಕರ್ನಾಟಕ ಏಕೀಕರಣ :

ಕರ್ನಾಟಕ ಪ್ರದೇಶವು ಕಾವೇರಿಯಿಂದ ಗೋದಾವರಿವರೆಗೆ ಹರಡಿತ್ತು. ರಾಷ್ಟ್ರಕೂಟ ವಂಶದ ಸಮ್ರಾಟನಾಗಿದ್ದ ನೃಪತುಂಗನು ತನ್ನ 'ಕವಿರಾಜ ಮಾರ್ಗ' ಗ್ರಂಥದಲ್ಲಿ ಇದನ್ನು ವ್ಯಕ್ತಪಡಿಸಿದ್ದಾನೆ. ಮುಂದೆ ಬರಬರುತ್ತ ನಮ್ಮ ಕರ್ನಾಟಕವು ಹರಿದು ಹಂಚಿಹೋಗಿ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು. ಮತ್ತೆ ಕರ್ನಾಟಕವು ಒಂದುಗೂಡಬೇಕೆಂಬ ಪ್ರಯತ್ನಗಳು ನಡೆದವು. ಕರ್ನಾಟಕದ ಪಿತಾಮಹರಾದ ಆಲೂರು ವೆಂಕಟರಾಯರು "ಕರ್ನಾಟಕ ಒಂದಾಗದೇ ಕನ್ನಡಿಗರ ಏಳಿಗೆ ಎಂದಿಗೂ ಸಾಧ್ಯವಿಲ್ಲ" ಎಂದು ಘಂಟಾಘೋಷವಾಗಿ ಹೇಳಿದರು. ಭಾರತ ಸ್ವಾತಂತ್ರ್ಯದ ಹೋರಾಟದೊಂದಿಗೆ ಕರ್ನಾಟಕ ಏಕೀಕರಣದ ಪ್ರಯತ್ನವೂ ನಡೆಯಿತು. ಅಂದಾನಪ್ಪ ದೊಡ್ಡಮೇಟಿಯವರು ಕರ್ನಾಟಕ ಪ್ರಾಂತ ರಚನೆಗಾಗಿ ಉಪವಾಸ ಸತ್ಯಾಗ್ರಹ ಹೂಡಿದರು. ಕನ್ನಡಿಗರು ಇವರ ಸತ್ಯಾಗ್ರಹಕ್ಕೆ ಬೆಂಬಲಿಸಿದರು. ಅಲ್ಲಲ್ಲಿ ಚಳುವಳಿಗಳು ನಡೆದವು.

ಗಾಂಧೀಜಿಯವರು ಕೂಡ ಭಾಷಾನ್ವಯ ತಳಹದಿಯ ಮೇಲೆ ಪ್ರಾಂತಗಳು ರಚನೆಯಾಗಬೇಕೆಂದು ಕರೆ ಕೊಟ್ಟರು.

ನಮ್ಮ ದೇಶದ ಪ್ರಧಾನಿಗಳಾದ ಪಂಡಿತ ಜವಾಹರಲಾಲ್ ನೆಹರೂರವರು ಭಾಷಾವಾರು ಪ್ರಾಂತ ರಚನೆಗಾಗಿ ನಿವೃತ್ತ ನ್ಯಾಯಧೀಶರಾದ ಫಜಲಾಲಿ ನೇತೃತ್ವದಲ್ಲಿ ಒಂದು ಕಮೀಷನ್ ನಿಯಮಿಸಿದರು. ಮೊಟ್ಟಮೊದಲು ಆಂಧ್ರಪ್ರದೇಶ ರಚನೆಗಾಗಿ ಪೊಟ್ಟಿ ಶ್ರೀರಾಮಲುರವರು 56 ದಿನ ಉಪವಾಸ ಸತ್ಯಾಗ್ರಹ ಹೂಡಿ ಪ್ರಾಣತ್ಯಾಗ ಮಾಡಿದರು.

ಮೊಟ್ಟ ಮೊದಲು ಆಂಧ್ರಪ್ರದೇಶ ರಾಜ್ಯವು ಅಸ್ತಿತ್ವಕ್ಕೆ ಬಂತು. ಫಜಲಾಲಿ ಕಮೀಷನ್ ಕೇಂದ್ರ ಸರ್ಕಾರಕ್ಕೆ ತನ್ನ ವರದಿ ಒಪ್ಪಿಸಿತು. ಈ ವರದಿಯಲ್ಲಿ ಬೀದರ ಜಿಲ್ಲೆಯ ಕನ್ನಡ ಮಾತನಾಡುವ ಪ್ರದೇಶಗಳು ಆಂಧ್ರಪ್ರದೇಶಕ್ಕೆ (ಹೈದ್ರಾಬಾದ್) ಸೇರಬೇಕೆಂದು ಸೂಚಿಸಿದರು. ಏಕೆಂದರೆ ಹೈದ್ರಾಬಾದ ರಾಜಧಾನಿ ಹತ್ತಿರ ಇರುವದರಿಂದ ಇಲ್ಲಿಯ ಜನರಿಗೆ ಶಿಕ್ಷಣ ಮತ್ತು ಇನ್ನತರ ವ್ಯವಹಾರಗಳಿಗೆ ಅನುಕೂಲವಾಗಬಹುದೆಂದು ತಮ್ಮ ವರದಿಯಲ್ಲಿ ತಿಳಿಸಿದ್ದರು. ಫಜಲಾಲಿಯವರ ಈ ವರದಿ ಬೀದರಿನ ಕೆಲವು ಮುಖಂಡರಿಗೆ ಸರಿ ಕಂಡಿತು. ಆದರೆ, ವಿ.ಎನ್. ಪಾಟೀಲರು ಈ ಮುಖಂಡರ ಹೇಳಿಕೆಯನ್ನು ಪ್ರತಿಭಟಿಸಿದರು. ಬೆಂಗಳೂರಿನ "ಕೆಂಪು ಬಾವುಟ" ಎಂಬ ಪತ್ರಿಕೆಯಲ್ಲಿ ಮುಖಂಡರ ಅಭಿಪ್ರಾಯಕ್ಕೆ ವಿರೋಧಿಸಿ ಲೇಖನ ಬರೆದರು. ಮತ್ತು ಜಿಲ್ಲೆಯ ನಾನಾ ಭಾಗಗಳಲ್ಲಿ ಯುವಕರ ಗುಂಪಿನೊಂದಿಗೆ ಹೋರಾಟಕ್ಕೆ ಇಳಿದರು.

"ಬೀದರ ಭಾಗವು ಕನ್ನಡ ಭಾಷೆಗೆ ಸೇರಿದ್ದು; ಇದು ಕರ್ನಾಟಕದಲ್ಲಿ ಸೇರಲೇಬೇಕೆಂದು" ಜನರನ್ನು ಜಾಗೃತಗೊಳಿಸಿದರು. ಆ ಹೋರಾಟದ ಫಲವಾಗಿಯೇ ಇಂದು ಬೀದರ ಕರ್ನಾಟಕದಲ್ಲಿ ಉಳಿಯಲು ಸಾಧ್ಯವಾಗಿದೆ.

ಹೋರಾಟದ ಕಾವು ಚಾಂಗಲೇರಿ ಜಾತ್ರೆಯಲ್ಲಿ ಭಾಷಣ :

ಚಾಂಗಲೇರಿ ಗ್ರಾಮವು ವೀರಭದ್ರೇಶ್ವರ ದೇವಸ್ಥಾನದಿಂದ ಪ್ರಸಿದ್ಧಿಗೆ ಬಂದಿದೆ. ಸುಮಾರು 400 ವರ್ಷಗಳ ಹಿಂದೆ ಈ ದೇವಸ್ಥಾನ ಸ್ಥಾಪಿಸಲ್ಪಟ್ಟಿತು. ಈ ದೇವಸ್ಥಾನವು ಪಾಟೀಲರ ಊರಾದ ಮೀನಕೇರಿಯಿಂದ 8 ಕಿ.ಮೀ. ದೂರದಲ್ಲಿದೆ. ವರ್ಷಕ್ಕೊಮ್ಮೆ ದೊಡ್ಡ ಜಾತ್ರೆಯಾಗುತ್ತದೆ. ಕರ್ನಾಟಕ ಸೇರಿದಂತೆ ಮಹಾರಾಷ್ಟ್ರ, ಆಂಧ್ರದ ಜನರು ಈ ಜಾತ್ರೆಗೆ ಆಗಮಿಸುತ್ತಾರೆ. ಜಾತ್ರೆಯು ದೀಪಾವಳಿ ಅಮವಾಸ್ಯೆ ನಂತರ ಬರುವ ಮಂಗಳವಾರದಿಂದ ಪ್ರಾರಂಭವಾಗುತ್ತದೆ. ಅಗ್ಗಿ ತುಳಿಯುವುದು, ತೇರು ಎಳೆಯುವುದು, ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಕುಸ್ತಿ ಪಂದ್ಯಗಳು ಜರುಗುತ್ತವೆ. ಈ ಜಾತ್ರೆಯ ಸಂದರ್ಭವನ್ನು ಸದುಪಯೋಗಪಡಿಸಿಕೊಂಡು ಪಾಟೀಲರು, ಭಾಷಣ ಕಾರ್ಯಕ್ರಮ ಇಟ್ಟುಕೊಂಡರು. ವಿ.ಎನ್. ಪಾಟೀಲರು ಪ್ರಸಿದ್ಧ ವಾಗ್ಮಿಗಳಾಗಿದ್ದರು. ಕನ್ನಡ, ಹಿಂದಿ, ಉರ್ದು, ಮರಾಠಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಪ್ರಭುತ್ವ ಪಡೆದವರಾಗಿದ್ದರು. ಎಂಥವರನ್ನು ಕೂಡ ತಮ್ಮ ವಾಕ್ ಚಾತುರ್ಯದಿಂದ ತಮ್ಮೆಡೆಗೆ ಸೆಳೆಯುವ ಸಾಮರ್ಥ್ಯ ಅವರಲ್ಲಿತ್ತು. ಇಂಥ ಕಠಿಣ ಪ್ರಸಂಗಗಳಲ್ಲಿ ಜನರ ಮನಸ್ಸನ್ನು ಪರಿವರ್ತಿಸುವ ಒಬ್ಬ ನಾಯಕನ ಅವಶ್ಯಕತೆ ಇತ್ತು. ವಿ.ಎನ್. ಪಾಟೀಲರು ಸುಮಾರು 10,000 ಜನರ ಮಧ್ಯದಲ್ಲಿ ಎತ್ತರದ ಕಟ್ಟೆಯ ಮೇಲೆ ನಿಂತುಕೊಂಡು "ಬೀದರ ಕರ್ನಾಟಕದಲ್ಲಿ ಸೇರಬೇಕು. ನಾವು ಆಡುವ ಮಾತು ಕನ್ನಡ. ಕನ್ನಡಿಗರೆಲ್ಲರೂ ಒಂದೆಡೆ ಸೇರಬೇಕು. ನಮ್ಮ ಮಕ್ಕಳು ಕನ್ನಡದಲ್ಲಿ ಕಲಿತರೆ ಅವರ ಭವಿಷ್ಯ ಉಜ್ವಲವಾಗುವುದು. ತೆಲುಗುವಿನಲ್ಲಿ ಕಲಿತರೆ ಅವರು ಮುಂದೆ ಪರಿತಪಿಸಬೇಕಾಗುತ್ತದೆ" ಎಂದು ಕಳಕಳಿಯಿಂದ ಜನರಲ್ಲಿ ವಿನಂತಿಸಿಕೊಂಡರು.

ಕನ್ನಡ ಕ್ರಿಯಾ ಸಮಿತಿಯ ಅಧ್ಯಕ್ಷರಾದ ಇವರು ತಿಳಿಯಾದ ಕನ್ನಡ ಭಾಷೆಯಲ್ಲಿ ಮಾತಾಡಿದ ಕಾರಣ ಜನರು ಇವರ ಮಾತಿಗೆ ಒಪ್ಪಿಕೊಂಡರು.

ಕನ್ನಡ ಮಾತೆಗೆ ಜೈಕಾರ ಹಾಕಿದರು. ಬೀದರ ಭಾಗವು ಕರ್ನಾಟಕದಲ್ಲಿ ಸೇರುವ ಕಾರ್ಯದಲ್ಲಿ ಪಾಟೀಲರಿಗೆ ಬೆಂಬಲಿಸಿದರು.

ಪಾಟೀಲರ ಪ್ರಯತ್ನದಿಂದ ಹಾಗೂ ಭಾಲ್ಕಿಯ ಚನ್ನಬಸವ ಪಟ್ಟದೇವರು ಮುತ್ತು ಬಳ್ಳಾರಿ ವೀರಭದ್ರಪ್ಪ ಮುಂತಾದವರ ಹೋರಾಟದಿಂದ, ಶಾಲಾ-ಕಾಲೇಜು ವಿದ್ಯಾರ್ಥಿಗಳ ಮುಷ್ಕರಗಳಿಂದ ಈ ಭಾಗವು ಕರ್ನಾಟಕದಲ್ಲಿ ಸೇರಿತು. ಆಂಧ್ರದಲ್ಲಿ ಸೇರಬೇಕೆಂಬ ಹೇಳಿಕೆ ಕೊಟ್ಟ ಪ್ರಭುರಾವ ಕಂಬಳಿವಾಲೆ ಮತ್ತು ಅವರ ಬೆಂಬಲಿಗರು ತೆಪ್ಪಗಾದರು. ಏಕೀಕರಣ ಹೋರಾಟದಲ್ಲಿ ತಾವೂ ಕೂಡ ಮುಂದೆ ಭಾಗವಹಿಸ ತೊಡಗಿದರು.

ಮಹಾಜನ ಆಯೋಗ :

ಫಜಲಾಲಿ ಕಮೀಷನ್ ವರದಿಯನ್ನು ಮಹಾರಾಷ್ಟ್ರಿಗರು ಒಪ್ಪಲಿಲ್ಲ. 'ಫಜಲಾಲಿ ಕಮೀಷನ್' ಪ್ರಕಾರ ಕನ್ನಡ ಮಾತನಾಡುವ ತಾಲೂಕಗಳು ವಿಶಾಲ ಮೈಸೂರು ಪ್ರದೇಶಕ್ಕೆ ಸೇರಿದವು. ಕರ್ನಾಟಕದಲ್ಲಿ ಮರಾಠಿ ಭಾಷೆಯನ್ನಾಡುವ ಹಳ್ಳಿಗಳು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂ.ಇ.ಎಸ್.)ಯುವರು ಹೋರಾಟ ಮಾಡತೊಡಗಿದರು. ಚಳುವಳಿಗಳು ಪ್ರಾರಂಭವಾದವು. 'ಝಾಲಾಚ ಪಾಹಿಜೆ' ಎಂಬ ಘೋಷಣೆ ಮಾಡ ತೊಡಗಿದರು. ಸೇನಾಪತಿ 'ಬಾಪಟ್' ಎಂಬುವವರು ಮತ್ತೊಂದು ಹೊಸ ಆಯೋಗ ರಚಿಸಬೇಕೆಂದು ಉಪವಾಸ ಸತ್ಯಾಗ್ರಹ ಹೂಡಿದರು. ಮಹಾರಾಷ್ಟ್ರೀಯರ ಬೇಡಿಕೆಯ ಮೇರೆಗೆ ನ್ಯಾಯಮೂರ್ತಿ 'ಮಹಾಜನ್' ನೇತೃತ್ವದಲ್ಲಿ ಹೊಸ ಆಯೋಗ ರಚಿಸಲಾಯಿತು.

'ಮಹಾಜನ್'ರವರು ಎಲ್ಲ ಸಂಗತಿಗಳನ್ನು ಅಭ್ಯಸಿಸಿ ರಾಜ್ಯವನ್ನು ಸುತ್ತಾಡಿ ಜನರ ಅಭಿಪ್ರಾಯ ಸಂಗ್ರಹಿಸಿ ಭೌಗೋಳಿಕ ಹಿನ್ನೆಲೆಯನ್ನು ಅನುಲಕ್ಷಿಸಿ ಕೇಂದ್ರ ಸರ್ಕಾರಕ್ಕೆ ತಮ್ಮ ವರದಿಯನ್ನು ಒಪ್ಪಿಸಿದರು.

'ಮಹಾಜನ್'ರವರು ಕೂಡ 'ಫಜಲಾಲಿ'ಯವರಂತೆ ಎಲ್ಲ ತಾಲೂಕುಗಳು ಕರ್ನಾಟಕಕ್ಕೆ ಸೇರಬೇಕೆಂದು ತಮ್ಮ ವರದಿಯಲ್ಲಿ ನಮೂದಿಸಿದರು. ಆದರೆ ಹಟಮಾರಿಗಳಾದ ಮಹಾರಾಷ್ಟ್ರಿಗರು ಮತ್ತೊಂದು ಹೊಸ ಕಮೀಷನ್ ಕೂಡಿಸಬೇಕೆಂದು ಹಠ ತೊಟ್ಟರು. ಅವರೇ ಒಪ್ಪಿಸಿದ 'ಮಹಾಜನ್' ವರದಿಗೆ ಒಪ್ಪಲಿಲ್ಲ. ವಿರೋಧ ವ್ಯಕ್ತಪಡಿಸಿದರು. ಬಾಪುರಾವ ಏಕಂಬೆಕರ್ ಸಂಘರ್ಷ ಮಾಡತೊಡಗಿದರು. ಆದರೆ ಕೇಂದ್ರದಲ್ಲಿ 'ಮಹಾಜನ್' ವರದಿ ಜಾರಿಯಲ್ಲಿ ತರದೆ ಇನ್ನೂ ಧೂಳು ತಿನ್ನುತ್ತಿದೆ!

ವಿ.ಎನ್. ಪಾಟೀಲರ ಮೇಲೆ ಬ್ರಿಜ್‌ಪಾಲಸಿಂಗ್ ಪ್ರಭಾವ :

ನನ್ನ ಭಾವಜಿ ಶರಣಪ್ಪ ಕರ್ಪೂರರರ ಜೊತೆ ಮೀನಕೇರಿಗೆ ಹೋಗಿದ್ದೆನು. ವಿ.ಎನ್. ಪಾಟೀಲರು ಒಂದು ಚಿಕ್ಕ ಕೋಣೆಯಲ್ಲಿ ಮಂಚದ ಮೇಲೆ ಪವಡಿಸಿದ್ದರು. ನನ್ನನ್ನು ನೋಡಿದರು. ಕೂಡಲು ಹೇಳಿದರು. ಬಂದ ಕಾರಣವನ್ನು ಕೇಳಿದರು. ನಾನು ಅವರಿಗೆ ಅವರ ಜೀವನದ ಕೆಲವು ಪ್ರಮುಖ ಘಟನೆಗಳನ್ನು ವಿವರಿಸಲು ಕೇಳಿದೆನು. ಬಾಲ್ಯದಲ್ಲಿ ಚನ್ನಬಸವ ಪಟ್ಟದ್ದೇವರ ಮೋರ್ಗಿ ಗುರುಕುಲದಲ್ಲಿ ಅಭ್ಯಾಸ ಮಾಡಿರುವುದನ್ನು ನೆನಪಿಸುತ್ತ "ಚನ್ನಬಸವ ಪಟ್ಟದ್ದೇವರು ವಿದ್ಯಾರ್ಥಿಗಳ ಮೇಲೆ ಅವರು ತೋರಿದ ಪ್ರೇಮ ತಂದೆಯ ಸ್ವರೂಪದಂತಿತ್ತು. ಎಲ್ಲ ವಿದ್ಯಾರ್ಥಿಗಳೊಡನೆ ಎಲ್ಲ ಜಾತಿಯವರೊಡನೆ ಕೂಡಿ ಉಣುತ್ತಿದ್ದೆವು. ಸ್ವಾಮಿಗಳು ಶರಣರ ವಚನಗಳನ್ನು ನಮಗೆ ಕಲಿಸುತ್ತಿದ್ದರು.

ಮೋರ್ಗಿಯಲ್ಲಿ ನೀರಿನ ಕೊರತೆಯಾಯಿತು. ಆಗ ಸ್ವಾಮಿಗಳು ಸ್ವತಃ ಬಾವಿಯಲ್ಲಿಳಿದು ಬಂಡೆಗಲ್ಲುಗಳನ್ನು ಘುಸಿಯಿಂದ ಒಡೆಯುತ್ತಿದ್ದರು. ಕೂಲಿ ಕೆಲಸದವರಿಗಿಂತಲೂ ಹೆಚ್ಚಿನ ಶ್ರಮಪಡುತ್ತಿದ್ದರು. ಇದನ್ನು ಸಹಿಸದ ಜಾತಿಯ ಜಂಗಮರು ಇವರನ್ನು ಕುರಿತು "ಕಲ್ಲುಗಳು ಉರುಳಿ ಬಿದ್ದು ಸಾಯಲಿ ಹೊಲೆಯ!" ಎಂದು ಬಯ್ಯುತ್ತಾ ಹೋಗುತ್ತಿದ್ದರು."

ನಾನು ದೇವರನ್ನು ಕಂಡಿಲ್ಲ. ನನ್ನ ಪಾಲಿನ ದೇವರೆಂದರೆ ಪಟ್ಟದ್ದೇವರು. ಅವರ ಪ್ರೇರಣೆಯಿಂದಲೇ ನಾನು ಜನಸೇವೆಯಲ್ಲಿ

ಸ್ವಲ್ಪ ಮಟ್ಟಿಗೆ ಶ್ರಮಿಸಿದ್ದೇನೆಂದು ಹೇಳಿದರು. ನಾನು ಮಾಡಿದ ಕೆಲಸಗಳು ಪತ್ರಿಕೆಯಲ್ಲಿ ಪ್ರಕಟವಾದ ತುಣುಕುಗಳು ಹಾಗೂ ಅಲ್ಲಲ್ಲಿ ತೆಗೆದ ಅನೇಕ ಫೋಟೋಗಳು ಸಾಕಷ್ಟು ಸಂಗ್ರಹಿಸಿದ್ದೆ. ಆದರೆ ಅವುಗಳನ್ನು ಸುರಕ್ಷಿತವಾಗಿ ಇಡದ ಕಾರಣ ಎಲ್ಲೆಲ್ಲೋ ಬಿದ್ದು ಹೋಗಿವೆ ಎಂದು ವಿಷಾದಪಟ್ಟರು.

ಯಾರಾದರೂ ಲೇಖಕರಿಗೆ ನಾನು ಮಾಡಿದ ಕೆಲಸಗಳ ಸಾಮಗ್ರಿಗಳು ದೊರಕಿದರೆ ಒಂದು ದೊಡ್ಡ ಪುಸ್ತಕವೇ ಆಗಬಹುದಾಗಿತ್ತು. ನಾನು ಮಾಡಿದ ಕೆಲಸ ಜನರಿಗೆ ಅಪರಿಚಿತವಾಗಿಯೇ ಉಳಿದಿದೆ ಎಂಬ ವಿಷಯವನ್ನು ವ್ಯಕ್ತಪಡಿಸಿದ್ದರು.

ವಿಶ್ವನಾಥ ಪಾಟೀಲರು ಬೀದರನಲ್ಲಿ ವಿದ್ಯಾರ್ಥಿಯಾಗಿದ್ದಾಗ ಬ್ರಿಜ್‌ಪಾಲ್‌ಸಿಂಗರ ಅಭಿಮಾನಿಗಳಾಗಿದ್ದರು. ಅವರ ಕೊನೆಯ ಕಾಲದಲ್ಲಿ ಬ್ರಿಜ್‌ಪಾಲ್‌ಸಿಂಗ್‌ರನ್ನು ಸ್ಮರಿಸಿದರು. ಬಾಯಿ ತುಂಬ ಹೊಗಳಿದರು. ದೇಶಪ್ರೇಮವನ್ನು ಬ್ರಿಜ್‌ಪಾಲ್‌ಸಿಂಗ್‌ರಿಂದ ಕಲಿಯಬೇಕು. ನನ್ನಲ್ಲಿರುವ ಅಲ್ಪಸ್ವಲ್ಪ ದೇಶಪ್ರೇಮ ಬ್ರಿಜ್‌ಪಾಲ್‌ಸಿಂಗ್‌ರಿಂದಲೇ ಬಂದಿದೆ ಎಂದು ಹೇಳಿ ನನಗೆ ಅಚ್ಚರಿಗೊಳಿಸಿದರು. ಆಗ ನನಗೆ ಅಲ್ಲಮಪ್ರಭುದೇವರ ವಚನ ನೆನಪಾಯಿತು. "ಎತ್ತಣ ಮಾಮರ ಎತ್ತಣ ಕೋಗಿಲೆ, ಎತ್ತಣೆಂದೆತ್ತಣ ಸಂಬಂಧವಯ್ಯ..." ಎಂಬಂತೆ ಕಮ್ಯುನಿಷ್ಟ ಪಕ್ಷ ಮತ್ತು ರಾಷ್ಟ್ರೀಯ ಸ್ವಯಮ್ ಸೇವಕ ಸಂಘಗಳೆರಡು ಹಾವು-ಮುಂಗಸಿಗಳಿದ್ದಂತೆ. ಒಂದಕ್ಕೊಂದು ವಿರೋಧ. ಆದರೆ, ವಿ.ಎನ್. ಪಾಟೀಲರು ತಮ್ಮ ಕೊನೆಗಾಲದಲ್ಲಿ ಸತ್ಯವನ್ನೇ ನುಡಿದಿದ್ದಾರೆ ಎಂದು ನನಗನಿಸಿತು.

ವಿ.ಎನ್. ಪಾಟೀಲರು ರಕ್ತದೊತ್ತಡ, ಸಕ್ಕರೆ ಕಾಯಿಲೆ ಮುಂತಾದ ರೋಗಗಳಿಂದ ಬಳಲುತ್ತಿದ್ದರು. ಅವರ ಮನೆಯವರು ಕೂಡ ಈ ರೋಗಗಳಿಂದಲೇ ಬಳಲುತ್ತಿದ್ದರು. ಪಾಟೀಲರು ಮೊದಲು ಸಿಂಹದಂತೆ ಇದ್ದವರು. ಈಗ ಆ ಸ್ಥಿತಿ ಹೊರಟು ಹೋಗಿತ್ತು. ಇದನ್ನು ಕಂಡ ನಾನು ದುಃಖಿತನಾದೆ. ಅವರಿಂದ ಬೀಳ್ಕೊಂಡು ಮತ್ತೆ ಬೀದರಗೆ ಹೊರಟೆವು.

ರಾಷ್ಟ್ರಧ್ವಜ :

ರಾಷ್ಟ್ರ ಮತ್ತು ರಾಷ್ಟ್ರಧ್ವಜದ ಬಗ್ಗೆ ಪ್ರತಿಯೊಬ್ಬರಿಗೂ ಪ್ರೀತಿ, ಗೌರವ ಇರಬೇಕು ಆದರೆ ಬಹಳ ಜನರಿಗೆ ಈ ವಿಷಯಗಳ ಕುರಿತ ತಿಳುವಳಿಕೆ ಬಹಳ ಕಡಿಮೆ. ವಿ.ಎನ್. ಪಾಟೀಲರು ಶಾಸಕರಾಗಿದ್ದಾಗಿನ ಒಂದು ಪ್ರಸಂಗ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಸರ್ಕಾರಿ ಖಾತೆಯೊಂದರ ಅಧಿಕಾರಿಯು ಉಪಯೋಗಿಸಲು ಬಾರದ ವಸ್ತುಗಳೊಡನೆ ಹರಾಜಿಗಾಗಿ ರಾಷ್ಟ್ರಧ್ವಜ ತಂದಿಟ್ಟಿದ್ದರು. ಪಾಟೀಲರು ಇದನ್ನು ಕಂಡು ಆ ಧ್ವಜವನ್ನು ವಿಧಾನಸಭೆಯಲ್ಲಿ ಸಭಾಧ್ಯಕ್ಷರ ಎದುರು ಪ್ರದರ್ಶಿಸಿದರು. ಯಾವ ವಸ್ತುವನ್ನು ಹರಾಜಿನಲ್ಲಿಡಬೇಕು ಎನ್ನುವ ಪರಿಜ್ಞಾನವಿಲ್ಲದ ಅಧಿಕಾರಿಯನ್ನು ಕಾರಣ ಕೇಳಬೇಕೆಂದು ಕೋಪೋದ್ರೇಕರಾಗಿ ಹೇಳಿದರು.

ರಾಷ್ಟ್ರಧ್ವಜವು ರಾಷ್ಟ್ರದ ಅಭಿಮಾನದ ಸಂಕೇತವಾಗಿದೆ. ಇದನ್ನು ಹರಾಜಿನಲ್ಲಿಟ್ಟರೆ ದೇಶದ ಮರ್ಯಾದೆಗೆ ಭಂಗಪಡಿಸಿದಂತೆ ಅದನ್ನು ಯಾರೂ ಕಾಣದ ಸ್ಥಳದಲ್ಲಿ ಒಯ್ದು ಸಂಸ್ಕರಿಸಬೇಕು ಎಂದು ಪಾಟೀಲರು ಧ್ವಜದ ಬಗ್ಗೆ ಮಾತನಾಡಿದರು. ಕಮ್ಯುನಿಷ್ಟರು ರಾಷ್ಟ್ರದ ಬಗ್ಗೆ ಕಡಿಮೆ ನಿಷ್ಠೆಯುಳ್ಳವರೆಂದು ಟೀಕಿಸುತ್ತಾರೆ. ಆದರೆ ಪಾಟೀಲರು ರಾಷ್ಟ್ರದ ಬಗ್ಗೆ ರಾಷ್ಟ್ರದ ಸಂಕೇತಗಳ ಬಗ್ಗೆ ಎಂತಹ ಅಭಿಮಾನ ಉಳ್ಳವರಾಗಿದ್ದರೆಂದು ಈ ಪ್ರಸಂಗದಿಂದ ಗೊತ್ತಾಗುತ್ತದೆ.

ಸಮಾನ ಮನಸ್ಕರು :

ಯಾವುದೇ ವ್ಯಕ್ತಿಯ ನಿಜವಾದ ವ್ಯಕ್ತಿತ್ವ ಅನಾವರಣಗೊಳ್ಳಬೇಕಾದರೆ ಸಮಕಾಲೀನ ಸಮಾನ ವಯಸ್ಕರ, ಸಮಾನ ಮನಸ್ಕರ ಅಭಿಮತ ಮುಖ್ಯವಾಗುತ್ತವೆ. ಆದ್ದರಿಂದ ಒಡನಾಡಿಗಳು ಸಮಾನ ಮನಸ್ಕರ ನಿಲುವುಗಳು ಇಲ್ಲಿ ದಾಖಲಿಸಿದ್ದೇನೆ. ಭೀಮಣ್ಣ ಮಜಗೆಯವರು ಬೀದರಿನ ಪ್ರತಿಷ್ಠಿತ ವ್ಯಕ್ತಿಗಳಲ್ಲಿ ಒಬ್ಬರು. ಇವರು ಕರ್ನಾಟಕ ಉಪ ಲೋಕಾಯುಕ್ತರಾದ ಶಶಿಧರ ಮಜಗೆಯವರ ತಂದೆಯವರು. ಬೀದರಿನ

ರಂಗಮಂದಿರದ ಹತ್ತಿರದ ಅವರ ನಿವಾಸಕ್ಕೆ ಹೋದೆನು. ವಿ.ಎನ್. ಪಾಟೀಲರ ಬಗ್ಗೆ ಅವರು ವ್ಯಕ್ತಪಡಿಸಿದ ಅನಿಸಿಕೆ ಎಂದರೆ "ಸದ್ಯದ ಎಂ.ಎಲ್.ಎ. ಗಳಲ್ಲಿ ವಿಶ್ವನಾಥ ಪಾಟೀಲರ ಹಾಗೆ ಉತ್ತಮ ಭಾಷಣ ಮಾಡುವವರು ಇಲ್ಲ ಅಂದರ ನಡೀತದ. ಸ್ವಲ್ಪ ಮಟ್ಟಿಗೆ ಭೀಮಣ್ಣಾ ಖಂಡ್ರೆ, ಮುರಲಿಧರರಾವ ಕಾಮ್ಡಿಕರ್, ಮಾಣಿಕರಾವ ಪಾಟೀಲ ಕುಶನೂರ, ಹಳ್ಳಿಖೇಡದ ವಿ.ಆರ್. ಶೆಟಕಾರ ಭಾಷಣ ಮಾಡುತ್ತಿದ್ದರು.

ವಿ.ಎನ್. ಪಾಟೀಲರು ಊಂಚಾಪುರಾ (ಎತ್ತರ ನಿಲುವಿನ) ಇದ್ದರು. ಲೀಡರ್ ಮನುಷ್ಯ. ನಿಸ್ವಾರ್ಥ ಮನುಷ್ಯ. ಆದರೆ ಈಗಿನ ಮುಖಂಡರು ರೊಕ್ಕದ ಹಿಂದ್ ಬೆನ್ನು ಹತ್ತ್ಯಾರ! ಈಗಿನವರಿಗೆ ಸೇವಾಭಾವನೆಯ ಬುದ್ಧಿ ಇಲ್ಲ. ಅಸೂಯೆ ಭಾಳ. ಆದರೆ ಆತನಲ್ಲಿ ಸ್ವಲ್ಪ ಮಟ್ಟಿಗೆ ಗರ್ವ ಇತ್ತು. ಅದೇ ಅವರಿಗೆ ಹಾನಿ ಮಾಡಿತು" ಎಂದು ತಮ್ಮ ಅಭಿಪ್ರಾಯವನ್ನು ಹೇಳಿದರು.

ಬಡವರ ಸೇವಕ :

ದೀಪಕ ಚಿತ್ರ ಮಂದಿರದ ಹತ್ತಿರವಿರುವ ಆಯುರ್ವೇದ ವೈದ್ಯರಾದ ಡಾ. ರೇವಣಸಿದ್ದಯ್ಯ ಸ್ವಾಮಿಗಳು ಜಿಲ್ಲೆಯ ಪ್ರಮುಖರ ಬಗ್ಗೆ ತಿಳುವಳಿಕೆಯುಳ್ಳವರು. ಇವರನ್ನು ಸಂಧಿಸಿದಾಗ, "ಖಡಾಖಂಡಿತ ಮಾತನಾಡುವ ಮನುಷ್ಯ ವಿ.ಎನ್. ಪಾಟೀಲ. ಎಂ.ಎಲ್.ಎ. ಆಗಿ ಬಡ-ಬಗ್ಗರ ಸೇವೆ ಮಾಡಿದವರಾಗಿದ್ದರು. ಅವರು ಬೆಂಗಳೂರಿನಲ್ಲಿ ಉಳಿದು ಹೈಕೋರ್ಟ್ ವಕೀಲಿ ಮಾಡುತ್ತಿದ್ದರು. ಆಗಾಗ ತಮ್ಮ ಕ್ಷೇತ್ರಕ್ಕೆ ಬರುತ್ತಿದ್ದರು. ಹುಮನಾಬಾದಿನಲ್ಲಿಯೇ ಜನರ ಮಧ್ಯವಿದ್ದು ವಕಾಲತ್ ಮಾಡುತ್ತಿದ್ದರೆ ಜನರು ತಪ್ಪದೆ ಅವರನ್ನು ಸತತ ಆಯ್ಕೆ ಮಾಡುತ್ತಿದ್ದರು ಎಂದು ಹೇಳಿದರು.

ಸ್ವತಂತ್ರ ವಿಚಾರವಾದಿ :

ಕರ್ನಾಟಕ ಸಾಹಿತ್ಯ ಸಂಘದ ಅಧ್ಯಕ್ಷರಾಗಿದ್ದ ಬಸವಂತರಾವ ಶೆಟಕಾರ ಇವರು ಉದಗೀರಿನವರು. ಉದಗೀರದ ಧರ್ಮವೀರ ಸಂಗ್ರಾಮಪ್ಪ ವಕೀಲರ ಸಹೋದರ ಸಂಬಂಧಿಗಳು. ಬೆಂಗಳೂರಿನಲ್ಲಿ ಸರ್ಕಾರಿ ವಕೀಲರಾಗಿದ್ದರು. ವಿ.ಎನ್. ಪಾಟೀಲರನ್ನು ಸಮೀಪದಿಂದ ಬಲ್ಲವರು ಅವರು ವ್ಯಕ್ತಪಡಿಸಿದ್ದು ಹೀಗೆ 'ನಾನು ಬೆಂಗಳೂರಿನಲ್ಲಿ ಸರ್ಕಾರಿ ವಕೀಲನಾಗಿದ್ದೆ. ಆಗ ಪಾಟೀಲರು ಹೈಕೋರ್ಟಿನ ವಕೀಲರಾಗಿದ್ದರು. ನಿಸ್ವಾರ್ಥದಿಂದ ಜನಸೇವೆ ಮಾಡಿದವರಾಗಿದ್ದರು. ಕಮ್ಯುನಿಷ್ಟ ಪಕ್ಷದ ಮುಖಂಡರಾಗಿದ್ದರು. ಈ ಭಾಗದಲ್ಲಿ ಕಮ್ಯುನಿಷ್ಟ ಪಕ್ಷದ ಪ್ರಚಾರವಿರಲಿಲ್ಲ. ಕಾಂಗ್ರೆಸ್ ಪಕ್ಷವೇ ಹೆಚ್ಚು ಪ್ರಚಾರದಲ್ಲಿತ್ತು. ಕಾಂಗ್ರೆಸ್ ಪಕ್ಷದಲ್ಲಿದ್ದರೆ ಅವರು ರಾಷ್ಟ್ರ ಮಟ್ಟದ ಮುಖಂಡರಾಗಿರುತ್ತಿದ್ದರು. ಕಲ್ಕತ್ತಾದಲ್ಲಿ ಕಮ್ಯುನಿಷ್ಟ ಪಕ್ಷ ಪ್ರಚಾರದಲ್ಲಿತ್ತು. ಕಲ್ಕತ್ತಾದಲ್ಲಿ ಜನ್ಮವೆತ್ತಿದರೆ ದೇಶದಲ್ಲಿಯೇ ಪ್ರಖ್ಯಾತರಾಗುತ್ತಿದ್ದರು. ಭಾಳ್ ಪ್ರಿನ್ಸಿಪಲ್ ಮನುಷ್ಯ. ಯಾರ ಹತ್ತಿರ ಏನರ ತಗೊಂಡು ಕೆಲಸ ಮಾಡ್ಯಾರ ಅಂಬೋದು ನಾನ್ ಕೇಳಿಲ್ಲ. ನಿಸ್ವಾರ್ಥ ಮನುಷ್ಯ. ಅಂಥ ಧೈರ್ಯವಾನ ಸಿಗೋದಿಲ್ಲ. ಶಾಸನ ಸಭೆಯಲ್ಲಿ ಇದ್ದದ್ದು ಇದ್ದ ಹಾಗೆ ಮಾತನಾಡಿ ಸರ್ಕಾರಕ್ಕೆ ಇಕ್ಕಟ್ಟಿಗೆ ಸಿಲುಕಿಸುತ್ತಿದ್ದರು. ಕಮ್ಯುನಿಷ್ಟರಾಗಿದ್ದರೂ ಸ್ವತಂತ್ರ ವಿಚಾರದವರು. ಅಂಥ ಕ್ವಾಲಿಟಿ ಈಗಿನವರಲ್ಲಿಲ್ಲ. ಬೆಂಗಳೂರಲ್ಲಿ ಹೈಕೋರ್ಟ ವಕಾಲತ್ ಮಾಡೋ ಬದಲಾಗಿ ಹುಮನಾಬಾದಿನಲ್ಲಿ ವಕಾಲತ್ ಮಾಡಿದ್ದರೆ, 'ರೆಗ್ಯುಲರ್' ಆಗಿ ಆರಿಸಿ ಬರುತ್ತಿದ್ದರು ಎಂದು ಹೇಳಿದರು.

ಮಹಲ್ ಮೇಲಿನ ಆಡಂಬರವೇ ಜನ ನೋಡುತ್ತಾರೆ. ಕೆಳಗಿನ ಬುನಾದಿ ಕಲ್ಲುಗಳನ್ನು ಯಾರೂ ನೋಡೋದಿಲ್ಲ! ನೀವು ಬರೆಯುವ ಪುಸ್ತಕವು ಬುನಾದಿ ಕಲ್ಲಿನ ಪರಿಚಯ ಜನರಿಗೆ ಮಾಡಿಕೊಡುತ್ತಲಿದ್ದೀರಿ" ಎಂದು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಅನ್ಯಾಯದ ವಿರುದ್ಧ ಲಡಾಯಿ :

ಗಣೇಶ ಮೈದಾನ ಹತ್ತಿರವಿರುವ ಸಿದ್ರಾಮಪ್ಪ ವಕೀಲ ಧನ್ನೂರ ಇವರ ಮನೆಗೆ ಹೋದೆ. ಇವರು ಕೌಜಲಗಿ ಪ್ರೌಢಶಾಲೆಯ ಅಧ್ಯಕ್ಷರಾಗಿದ್ದರು. ಹಾಗೂ ನಾಗಪುರದಲ್ಲಿ ವಿ.ಎನ್. ಪಾಟೀಲರ ಕಾಲೇಜಿನ ಸಹಪಾಠಿಗಳಾಗಿದ್ದವರು ಅವರು ಹೇಳಿದ್ದು, "ಹಮ್‌ದರ್ದ್ ಮನುಷ್ಯ, 'ಹೆಲ್ಪಿಂಗ್ ನೇಚರ', ಬಡುರ್‌ಗೆ ಸಹಾಯ ಮಾಡುತ್ತಿದ್ದರು. ಸ್ವಾತಂತ್ರ್ಯ ಹೋರಾಟ ಮತ್ತು ಇನ್ನಿತರ ಚಳುವಳಿಗಳಲ್ಲಿ ಭಾಗವಹಿಸುತ್ತಲೇ ಅಭ್ಯಾಸ ಮಾಡುತ್ತಿದ್ದರು. ಪ್ರತಿವರ್ಷ ಪಾಸ್ ಆಗುತ್ತಲೇ ಬಂದರು. ಇದು ನನಗೆ ಬಹಳ ಆಶ್ಚರ್ಯಗೊಳಿಸಿದೆ. ಅನ್ಯಾಯದ ವಿರುದ್ಧ ಲಡಾಯಿ (ಹೋರಾಟ) ಮಾಡುತ್ತಿದ್ದರು" ಎಂದು ತಮ್ಮ ಸ್ನೇಹಿತನ ಬಗ್ಗೆ ಗುಣಗಾನ ಮಾಡಿದರು.

ಒಳ್ಳೆ ಮನಸ್ಸುಳ್ಳ ಮನುಷ್ಯ :

ಮಹಾದೇವಪ್ಪ ಮೀಸೆಯವರು ವಿನೋಬಾ ಭಾವೆಯವರ ಸೇವಾ ಗ್ರಾಮದಲ್ಲಿದ್ದು ಭೂದಾನ ಚಳುವಳಿಯಲ್ಲಿ ಸಾವಿರಾರು ಕಿ.ಮೀ. ಪಾದಯಾತ್ರೆ ಮಾಡಿದ್ದಾರೆ. ಪಾಟೀಲರನ್ನು ಕುರಿತು ಅವರು ಹೇಳಿದ್ದು ಹೀಗೆ : "ನಾನು ಪಾಟೀಲರ ಕಾಲು ಮುರಿದಾಗ ಮಾತಾಡಲು ಮೀನಕೇರಿಗೆ ಹೋಗಿದ್ದೆ. ಕಾಲು ಮುರಿದಕ್ಕಾಗಿ ಬಹಳ ನೊಂದುಕೊಂಡಿದ್ದರು. "ಬಹಳ ಕೆಲಸ ಮಾಡಬೇಕೆಂದಿದ್ದೆ ಹೀಗಾಯ್ತು" ಎಂದು ಪಾಟೀಲರು ದುಃಖ ವ್ಯಕ್ತಪಡಿಸಿದರು.

ಬಹಳ ವರ್ಷಗಳಾದ ನಂತರ 1997ರಲ್ಲಿ ಬೀದರಲ್ಲಿ ಆಚರಿಸಿದ ರಾಜ್ಯೋತ್ಸವ ಸಂದರ್ಭದಲ್ಲಿ ನಮ್ಮಿಬ್ಬರನ್ನು ಸನ್ಮಾನಸಲಾಯಿತು. ಆಗ ನಾನು ಆವೇಶದಿಂದ ಅವರನ್ನು ತಬ್ಬಿಕೊಂಡೆನು. ದುಃಖ ಸಹಿಸಲಾಗಲಿಲ್ಲ. ಕಾರಣವೆಂದರೆ ಪೈಲ್ವಾನರಂತಿದ್ದ ಅವರು ಕಮ್‌ಜೋರ್ ಆಗಿದ್ದನ್ನು ನೋಡಿದೆ!

ದುಃಖ ತಡೆಯದಾಯಿತು! ಬಹಳ ಒಳ್ಳೆ ಮನಸ್ಸುಳ್ಳ ಮನುಷ್ಯ. ದೊಡ್ಡಸ್ತಾನಕಿಗಿ ಹೋಗುತ್ತಿರಲಿಲ್ಲ. ಹಸನ್ಮುಖ ಚೆಹರಾ! ಮಾತು ರುಚಿ! ಎಂದು ವರ್ಣಿಸಿದರು.

ದೆಹಲಿ ನಿಯೋಗ :

ಬೀದರಿನ ಮುಖಂಡರಾದ ಭೀಮಣ್ಣಾ ಖಂಡ್ರೆ ನೇತೃತ್ವದಲ್ಲಿ 'ಮಹಾಜನ್ ವರದಿಯ ಹೋರಾಟ ಸಮಿತಿ' ಸ್ಥಾಪಿಸಲಾಯಿತು. 1969ರಲ್ಲಿ ದಿಲ್ಲಿಗೆ ನಿಯೋಗ ಕೊಂಡೊಯ್ಯಲಾಯಿತು. ಬೀದರದಿಂದ ರೈಲ್ವೆ ಹಾಗೂ ಸರ್ವಿಸ್‌ಗಳ ಜೀಪುಗಳ ಮುಖಾಂತರ ದಿಲ್ಲಿಗೆ ಹೊರಟರು. ಸುಮಾರು 2000 ಕಿ.ಮೀ.ದಿಂದ ಪ್ರಯಾಣ ಸರ್ವಿಸ್‌ನಲ್ಲಿ ಹೋಗುವದು ಕಷ್ಟದಾಯಕವಾಗಿತ್ತೆಂದು ಗಣಪತರಾವ ಖೂಬಾ ಹೇಳುತ್ತಾರೆ. ಅವರು ತಮ್ಮ ಅನುಭವದ ಬುತ್ತಿಯನ್ನು ಬಿಚ್ಚುತ್ತಾ ನಮ್ಮ ನಯೋಗವು ದಿಲ್ಲಿಗೆ ತಲುಪಿತು. ಸಂಸತ್ ಸದಸ್ಯರಾದ ರಾಮಚಂದ್ರ ವೀರಪ್ಪನವರು ನೂರಾರು ಜನರಿಗೆ ಇಳಿದುಕೊಳ್ಳುವ ವ್ಯವಸ್ಥೆ, ಊಟದ ವ್ಯವಸ್ಥೆ ಮಾಡಿಸಿದರು.

ಆಗ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದರು. ಅವರು ನಮ್ಮನ್ನು ಭೆಟ್ಟಿಯಾಗಲು ಟೈಮ್ ಕೊಡಲಿಲ್ಲ. ನಿಜಲಿಂಗಪ್ಪನವರನ್ನು ಕೇಳಿದೆವು "ಇಂದಿರಾಗಾಂಧಿಯವರು ವಿಜ್ಞಾನ ಭವನದಲ್ಲಿದ್ದಾರೆ. ಅಲ್ಲಿಗೆ ನೀವು ಹೋಗಿ ಘೇರಾವ ಮಾಡಿರಿ" ಎಂದು ಸಲಹೆಯನ್ನಿತ್ತರು. ನಿಯೋಗದಲ್ಲಿ ವಿ.ಎನ್. ಪಾಟೀಲರು ಇದ್ದರು. 'ಮಹಾಜನ್ ಕಮೀಷನ್ ಅಮಲ್ ಮೇ ಲಾವೋ" ('ಮಹಾಜನ್ ವರದಿ' ಜಾರಿಗೆ ತನ್ನಿರಿ) ಎಂಬ ಘೋಷಣೆ ಮುಗಿಲು ಮುಟ್ಟಿತು ಎಂದು ಗಣಪತರಾವ ಖೂಬಾ ಹೇಳುತ್ತಾರೆ.

ಇಂದಿರಾಗಾಂಧಿಯವರು ವಿಜ್ಞಾನ ಭವನದಿಂದ ಹೊರಗೆ ಬಂದರು. ವಿ.ಎನ್. ಪಾಟೀಲರು ಒಳ್ಳೆಯ ವಕ್ತಾರರಾದ ಕಾರಣ ಇಂದಿರಾಗಾಂಧಿಯವರೊಂದಿಗೆ 'ಮಹಾಜನ್ ವರದಿ' ಬಗ್ಗೆ ಚರ್ಚಿಸಿದರು.

ಬೀದರ ಜಿಲ್ಲೆ ಯಥಾರ್ಥವಾಗಿರಬೇಕು ಎಂದು ಮನವಿ ಕೊಡಲಾಯಿತು. ಭಾಲ್ಕಿ, ಔರಾದ್ ಜನರ ಹಸ್ತಾಕ್ಷರವನ್ನೊಳಗೊಂಡ ರಿಕಾರ್ಡ್ಸ್‌ಗಳನ್ನು, ಶಿಲಾಶಾಸನಗಳು ಮತ್ತು ಇನ್ನಿತರ ದಾಖಲೆಗಳನ್ನು ಒಪ್ಪಿಸಲಾಯಿತು. ಇಂದಿರಾಗಾಂಧಿಯವರು ಮನವಿ ಪತ್ರ ಸ್ವೀಕರಿಸಿದರು. ನಿಮ್ಮ ಮನವಿ ಬಗ್ಗೆ ವಿಚಾರ ಮಾಡಲಾಗುವದೆಂದು ಆಶ್ವಾಸನೆ ಕೊಟ್ಟರು. ಈ ಹೋರಾಟದಿಂದಲೇ ಯಾವುದೇ ರೀತಿಯ ಬದಲಾವಣೆಯಾಗದೆ ಇದ್ದದ್ದು ಇದ್ದ ಹಾಗೇ ಉಳಿದಿದೆ.

ಪಾಠಸ್ಕರ್ ಸಿದ್ಧಾಂತದ ಪ್ರಕಾರ ಮರಾಠಿ ಮಾತನಾಡುವ ಹಳ್ಳಿಗಳು ಮಹಾರಾಷ್ಟ್ರ ರಾಜ್ಯಕ್ಕೆ ಸೇರಬೇಕೆಂಬುದಕ್ಕೆ ಕರ್ನಾಟಕದವರು ಒಪ್ಪಲಿಲ್ಲ. ಮುಂಬೈ ಪಟ್ಟಣವು ಪಾಠಸ್ಕರ್ ಸಿದ್ಧಾಂತ ಪ್ರಕಾರ ಹೆಚ್ಚು ಮರಾಠಿ ಮಾತನಾಡುವ ಜನರಿಲ್ಲ ಹಾಗಾಗಿ ಮಹಾರಾಷ್ಟ್ರಕ್ಕೆ ಸೇರಿಸಲು ಸಾಧ್ಯವೆ ? ಎಂದು ಕರ್ನಾಟಕದವರು ಪ್ರಶ್ನಿಸಿದರು. ನ್ಯಾಯಮೂರ್ತಿ 'ಮಹಾಜನ್'ರವರು ಇದಕ್ಕೆ ಒಪ್ಪಲಿಲ್ಲ.

ದಿಲ್ಲಿಗೆ ಹೋದ ನಿಯೋಗದಲ್ಲಿದ್ದವರು ವೀರಪಾಕ್ಷಪ್ಪ ಅಗಡಿ ಹುಮನಾಬಾದ, ಚನ್ನಬಸಪ್ಪ ಹಾಲಹಳ್ಳಿ, ನೀಲಕಂಠರಾವ ಬಸನಾಳೆ, ಅಮೃತರಾವ ಬಸನಾಳೆ, ನೀಲಕಂಟೆಪ್ಪ ಹಲಬರ್ಗೆ, ಬಸವರಾಜ ಪಾಟೀಲ ಹುಮನಾಬಾದ, ಶಶಿಧರ ಮಜಗೆ, ಸಂಗ್ರಾಮ ವಕೀಲ, ಮಹೇಶ ಶಂಕರರಾವ ಹಾಗೂ ಮಹಾದೇವಪ್ಪ ಮೀಸೆ, ವಿ.ಎನ್. ಪಾಟೀಲ ಸೇರಿದಂತೆ ನೂರಾರು ಜನರು ಇದ್ದರು ಎಂದು ಗಣಪತರಾವ ಖೂಬಾ ಸಂದರ್ಶನ ಕಾಲದಲ್ಲಿ ಹೇಳಿದರು.

ಆಂಧ್ರದಲ್ಲಿ ಕನ್ನಡ ಸಂಘ :

ಬೀದರಿನ ಶಿವಾಜಿನಗರದಲ್ಲಿ ವಾಸವಾಗಿರುವ ಬಿ.ಜಿ. ಸಿದ್ಧಬಟ್ಟೆ ಇವರ ಮನೆಗೆ ಮಧ್ಯಾಹ್ನದ ಸಮಯ ನಾನು ಹೋದೆ. ವಿ.ಎನ್.

ಪಾಟೀಲರನ್ನು ಸಮೀಪದಿಂದ ಅವರು ಬಲ್ಲವರು. ಅವರ ವಿಷಯದಲ್ಲಿ ತಮ್ಮ ಅನುಭವಕ್ಕೆ ಬಂದ ವಿಚಾರಗಳನ್ನು ತಿಳಿಸಲು ಕೇಳಿದೆನು. ಅವರು ಹೇಳಿದ್ದು "ನಾನು ಮಾಧ್ಯಮಿಕ ಶಾಲೆಯಲ್ಲಿ ಔರಾದಿನಲ್ಲಿ ಓದುತ್ತಿದ್ದೇನು. ಆಗಾಗ ಬೀದರನಲ್ಲಿರುವ ನಮ್ಮ ಅಕ್ಕ ಗುಂಡಮ್ಮನವರ ಮನೆಗೆ ಬರುತ್ತಿದ್ದೆ. ಆಗಿನ ಪಾಠಶಾಲೆ ಈಗಿನ ಬಸವ ಮಂಟಪ ಸ್ಥಳದಲ್ಲಿಯೇ ಗ್ರಂಥಾಲಯವಿತ್ತು. ಆಗಾಗ ವಿ.ಎನ್. ಪಾಟೀಲರು ಯುವಕರನ್ನುದ್ದೇಶಿಸಿ ಭಾಷಣ ಮಾಡುತ್ತಿದ್ದರು. ಉತ್ತೇಜನಕಾರಿಯಾದ ಅವರ ಭಾಷಣ ಕೇಳಿ ನನ್ನಲ್ಲಿ ಅಭಿಮಾನ ಜಾಗೃತವಾಯಿತು. ಆಗಾಗ ಅವರು ಔರಾದ್‌ನ ಗಣಪತರಾವ ಖೂಬಾರವರ ಮನೆಗೆ ಬರುತ್ತಿದ್ದರು. ಈ ಭಾಗ ಕರ್ನಾಟಕದಲ್ಲಿ ಸೇರಬೇಕು. ನಾವೆಲ್ಲರೂ ಕನ್ನಡಾಭಿಮಾನಿಗಳಾಗಬೇಕೆಂದು ಹೇಳುತ್ತಿದ್ದರು. ಅವರಿಂದ ಪ್ರಭಾವಿತರಾದವರಲ್ಲಿ ಶರಣಪ್ಪ ಕರಂಜೆ, ವೈಜಿನಾಥ ಘುಲಾರೆ, ವಿಶ್ವನಾಥ ಕನಕೆ, ಬಿ.ಜಿ. ಹಿರೇಮಠ ಮತ್ತು ನಾಗನಾಥ ನೇಳಗೆ ಮುಂತಾದವರು 'ಫಜಲಾಲಿ ಕಮೀಷನ್' ಪ್ರಕಾರ ಬೀದರ ಜಿಲ್ಲೆಯು ಆಂಧ್ರಪ್ರದೇಶಕ್ಕೆ ಸೇರಿಸಿದಾಗ ನಾವೆಲ್ಲ ವಿದ್ಯಾರ್ಥಿಗಳು ಚಳುವಳಿ ಹೂಡಿದೆವು.

ಶಾಲೆಯ ಹುಡುಗರೆಲ್ಲ ಚಳುವಳಿಯಲ್ಲಿ ಸೇರುತ್ತಿದ್ದರು. ಭಾಲ್ಕಿಯ ಪಟ್ಟದ್ದೇವರು ವಿ.ಎನ್. ಪಾಟೀಲರೊಂದಿಗೆ ಒಂಟೆ ಮೇಲೆ, ಕುದುರೆ ಮೇಲೆ ಹಾಗೂ ಪಾದಯಾತ್ರೆ ಮಾಡುತ್ತ ಗ್ರಾಮ ಗ್ರಾಮಗಳಿಗೆ ಸಂಚರಿಸುತ್ತಿದ್ದರು. ನಾವು ಅವರೊಡನೆ ಕೂಡಿಕೊಂಡು ಜನರಲ್ಲಿ ಕನ್ನಡತನವನ್ನು ಜಾಗೃತಗೊಳಿಸಿದೆವು. ಎಲ್ಲರ ಪ್ರಯತ್ನದ ಫಲವಾಗಿ ಔರಾದ್ ತಾಲೂಕ ಕರ್ನಾಟಕದಲ್ಲಿ ಸೇರಿತು ಎಂದು ಸಿದಬಟ್ಟೆ ಹೇಳಿದರು. ಈ ಸಂದರ್ಭದಲ್ಲಿ ಅವರು ಬಿಜಾಪುರದ ಇಬ್ಬರು ಶಿಕ್ಷಕರ ಹೆಸರು ಹೇಳಲು ಮರೆಯಲಿಲ್ಲ. ರಾಮನಗೌಡ ಮತ್ತು ಆಶಣ್ಣ. ಅಲ್ಲದೆ ಅನೇಕ ಕನ್ನಡ ಕಲಿಸುವ ಶಿಕ್ಷಕರಿಂದ ಈ ಭಾಗವು ಕನ್ನಡಮಯವಾಯಿತೆಂದು ಸ್ಮರಿಸಿದರು!

ಔರಾದ್‌ನಲ್ಲಿ ಯುವಕ ಸಂಘ ಸ್ಥಾಪಿಸಿದರು. ಯುವಕ ಸಂಘದವರಿಂದ ವಾಚನಾಲಯವು ಪ್ರಾರಂಭವಾಯಿತು. ಗಣಪತರಾವ ಖೂಬಾ ಅಧ್ಯಕ್ಷರಾಗಿದ್ದರು. ನಾನು ಕಾರ್ಯದರ್ಶಿಯಾಗಿದ್ದೆ. ಕನ್ನಡ ಬಲ್ಲವರ ಮತ್ತು ಅಭಿಮಾನಿಗಳ ಸಂಖ್ಯೆ ಹೆಚ್ಚಿತು. ಈ ಶ್ರೇಯಸ್ಸು ಪಾಟೀಲರಿಗೆ ಸಲ್ಲುತ್ತದೆ.

ಆಂಧ್ರಕ್ಕೆ ಸೇರಿದ ನಾರಾಯಣಖೇಡದಲ್ಲಿಯೂ ಕನ್ನಡ ಸಂಘವನ್ನು ಸ್ಥಾಪಿಸಿದರು. ನಾರಾಯಣಖೇಡ ಆಂಧ್ರಕ್ಕೆ ಸೇರಿದ್ದರೂ ಅಲ್ಲಿ ಕನ್ನಡಿಗರ ಸಂಖ್ಯೆ ಹೆಚ್ಚಿದೆ ಎಂದರು. ಅವರಿಂದ ಬೀಳ್ಕೊಂಡು ಮನೆಗೆ ಮರಳಿದೆನು.

ಕಮ್ಯುನಿಷ್ಟ ತತ್ವದ ಅಪೂರ್ವ ಶಾಸಕ :

ಕಾಜಿ ಅರ್ಷದ ಅಲಿಯವರು ಹಿಂದಿ ದಿನಪತ್ರಿಕೆ 'ಬೀದರ ಕಿ ಆವಾಜ್'ನ ಸಂಪಾದಕರು. ಇವರನ್ನು ಕಾಣಲು ಅವರ ಕಚೇರಿಗೆ ಹೋದೆನು. ನಾನು ಹೋಗುವಾಗ ಮಧ್ಯಾಹ್ನದ ರಣಬಿಸಿಲು ಸುಡುತ್ತಿತ್ತು. ಅವರು ತಮ್ಮ ಕಚೇರಿಯಲ್ಲಿ ಜನರೊಡನೆ ಮಾತಾಡುತ್ತಿದ್ದರು. ನನ್ನನ್ನು ಕಂಡು ಕೈ ಕುಲುಕಿದರು. ಅವರೆಲ್ಲರ ಮಧ್ಯದಿಂದ ಎದ್ದು ಬೇರೊಂದು ಕೋಣೆಯಲ್ಲಿ ಕರೆದೊಯ್ದರು.

ನಾನು ಬರುವ ಕಾರಣ ಮೊದಲೇ ತಿಳಿಸಿದ್ದೆ. ಅವರು ಹೇಳಿದ್ದು ಹೀಗೆ "ವಿ.ಎನ್. ಪಾಟೀಲರು ಜನರ ಹತ್ತಿರ ಹೋಗಿ ಅವರ ಸುಖ-ದುಃಖಗಳನ್ನು ವಿಚಾರಿಸುತ್ತಿದ್ದರು. ತೊಂದರೆಗಳನ್ನು ಪರಿಹರಿಸುತ್ತಿದ್ದರು. ಬಡವರ ಬಗ್ಗೆ ಶೋಷಿತರ ಬಗ್ಗೆ ಅವರಂತೆ ಈಗಿನ ಮುಖಂಡರು ಎಲ್ಲಿ ಸಿಗುತ್ತಾರೆ ? ಮಾರ್ಕ್ಸ್‌ವಾದವನ್ನು ಆಳವಾಗಿ ಅಭ್ಯಾಸ ಮಾಡಿದವರಾಗಿದ್ದರು. ಸಾಮ್ಯವಾದದ ಬಗ್ಗೆ ಅವರಿಗೆ ವಿಶ್ವಾಸವಿತ್ತು. ಮಡದಿ ಮಕ್ಕಳ ಬಗ್ಗೆ ಹೆಚ್ಚು ಚಿಂತಿಸುತ್ತಿರಲಿಲ್ಲ. ಎರಡು ಸಲ ಚುನಾವಣೆಯಲ್ಲಿ ಸೋತು, ಎರಡು ಸಲ ಗೆದ್ದರು. ಮತ್ತೊಂದು ಸಲ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ಸ್ಪರ್ಧಿಸಿದ್ದರು.

ಬಹುಸಂಖ್ಯಾತರು ಕಾಂಗ್ರೆಸ್ ಪಕ್ಷದವರೇ ಇದ್ದ ಕಾರಣ ಕಾಂಗ್ರೆಸ್‌ನ ಸಿದ್ದಪ್ಪ ಖೇಳಗಿಯವರು ಗೆದ್ದರು. ಮೊಟ್ಟ ಮೊದಲು ಬೀದರ ಜಿಲ್ಲೆಯಿಂದ ಕಮ್ಯುನಿಷ್ಟ ಪಕ್ಷದಿಂದ ಆಯ್ಕೆಯಾದವರು ವಿ.ಎನ್. ಪಾಟೀಲರು.

ಅವರ ನಂತರ ಆ ಪಕ್ಷದಿಂದ ಯಾರೂ ಇಲ್ಲಿಯವರೆಗೆ ಆರಿಸಿ ಬಂದಿಲ್ಲ. ನನಗೆ ತಿಳಿದ ಮಟ್ಟಿಗೆ ಪಾಟೀಲರೇ ಕಮ್ಯುನಿಷ್ಟ ಪಕ್ಷದ ಮೊದಲನೆಯ ಮತ್ತು ಕೊನೆಯ ಅಪೂರ್ವ ಶಾಸಕರೆಂದು ಹೇಳಬಹುದು" ಎಂದು ಹೇಳಿದರು.

ನಾನು ಕಾಜಿಯವರಿಗೆ ಮತ್ತೊಂದು ಪ್ರಶ್ನೆ ಕೇಳಿದೆ. ವಿ.ಎನ್. ಪಾಟೀಲರಂತೆ ಈಗಿನ ಶಾಸಕರು ಇದ್ದಾರೆಯೇ? ಎಂದು. ಅವರಿಂದ ಬಂದ ಉತ್ತರ "ಇನ್ನೂ ನಮ್ಮ ಜಿಲ್ಲೆಯಲ್ಲಿ ಜನ್ಮವೆತ್ತಿಲ್ಲ! ಆದರೆ ಭಾಲ್ಕಿಯ ಸಮಾಜ ಸೇವಕರಾದ ನಿಸ್ವಾರ್ಥಿಗಳಾದ ಹೀರಾಚಂದ ವಾಘ್ಮಾರೆಯವರ ಹೆಸರನ್ನು ಹೇಳಿ ನನ್ನನ್ನು ಅಚ್ಚರಿಗೊಳಿಸಿದರು. ಕಾರಣವೆಂದರೆ, ಡಂಬಾಚಾರಿಗಳ ಆರ್ಭಟವಿರುವ ಇಂದಿನ ಕಾಲದಲ್ಲಿ ಒಬ್ಬ ಪತ್ರಕರ್ತನಾದರೂ ಶರಣಜೀವಿಯಾದ ಹೀರಾಚಂದ ವಾಘ್ಮಾರೆಯವರನ್ನು ಸ್ಮರಿಸಿದ್ದು!

ಮೂಲಭೂತ ಅವಶ್ಯಗಳತ್ತ ಚಿತ್ತ :

ಬೀದರನ ಖ್ಯಾತ ಹಿಂದಿ ದೈನಿಕ 'ದಮನ್'ನ ಸಂಪಾದಕರು ನಿರ್ಭೀಡೆಯ ಬರಹಗಾರರು ಹಾಗೂ ಬೀದರ ಜಿಲ್ಲೆಯ ಜನರಲ್ಲಿ ಜಾಗೃತಿ ಹುಟ್ಟಿಸಿದವರು. ವಿಶ್ವನಾಥ ಪಾಟೀಲರು 'ದಮನ್ ಪಾಟೀಲ' ಎಂದೇ ಖ್ಯಾತಿ ಪಡೆದವರು. ನಾನು ಮತ್ತು ನನ್ನ ಯುವಮಿತ್ರ ಸಂಗಮೇಶ ಜಾಂತೆಯವರೊಡನೆ ಅವರ ಮನೆಗೆ ಹೋದೆನು. ಅವರು ಶರಶಯ್ಯೆಯ ಮೇಲೆ ಮಲಗಿದ ಭೀಷ್ಮನಂತೆ ಪಾರ್ಶ್ವವಾಯು ಪೀಡಿತರಾಗಿ ಮಲಗಿದ್ದರು. ನಾವು ಬಂದದ್ದನ್ನು ಕಂಡು ಹಾಸಿಗೆಯಿಂದ ಎದ್ದು ಕುಳಿತರು. ವಿ.ಎನ್. ಪಾಟೀಲರ ಬಗ್ಗೆ ತಮ್ಮ ವಿಚಾರವೇನು ? ಎಂದು ಕೇಳಿದೆನು. ಅವರು

ನಸುನಗುತ್ತ, "ಈಗಿನ ಮುಖಂಡರಂತೆ ದಲ್ಲಾಳಿತನ ಮಾಡಿ ಧನ ಸಂಪಾದಿಸುವವರಾಗಿರಲಿಲ್ಲ. ನೌಕರಿ ಕೊಡಿಸುತ್ತೇನೆಂದು ಹೇಳುವದು, ವರ್ಗಾವಣೆ ಮಾಡಿಸುವುದು ಅವರ ಕೆಲಸವಾಗಿರಲಿಲ್ಲ. ಜನರ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವದರ ಕಡೆಗೆ ಸಮಯ ವೆಚ್ಚ ಮಾಡುತ್ತಿದ್ದರು. ಒಂದು ದುಡ್ಡಿನಷ್ಟು ಕೂಡ ಭ್ರಷ್ಟಾಚಾರ ಮಾಡಲಿಲ್ಲ! ಕಮ್ಯುನಿಷ್ಟ ಮೂವ್‌ಮೆಂಟ್ ಅವರಿಂದಲೇ ಜಿಲ್ಲೆಯಲ್ಲಿ ಪ್ರಾರಂಭವಾಯಿತು.

ಅವರ ಮಾತುಗಳು ಜನರ ಮೇಲೆ ಪ್ರಭಾವ ಬೀರುತ್ತಿದ್ದವು. ಅವರಿಂದ ಇನ್ನೂ ಹೆಚ್ಚಿನ ಲಾಭ ಜನರಿಗೆ ಆಗಬಹುದಾಗಿತ್ತು. ಮೊದಲನೆಯ ಸಲ ಚುನಾವಣೆಗೆ ನಿಂತಾಗ ಕಾಲು ಮುರಿಯಿತು. ಹೆಚ್ಚಿನ ಚಳುವಳಿ ಅವರಿಂದ ನಡೆಯಲಿಲ್ಲ. ಪಾಟೀಲರೊಂದಿಗೆ ಅವರ ಕಾಮ್ರೇಡ್‌ಗಳಾದ ರಂಗನಾಥರಾವ ಸಾಯಗಾಂವಕರ್ ಹಾಗೂ ಶಂಕರರಾವ ಘಂಟಿ ಇವರ ಹೆಸರು ಕೂಡ ತೆಗೆದುಕೊಂಡರು.

ರಷ್ಯಾ ಪ್ರವಾಸ :

ಕಮ್ಯುನಿಷ್ಟ ಪಕ್ಷಕ್ಕೆ ಪಾಟೀಲರು ಸಲ್ಲಿಸಿದ ಸೇವೆಯನ್ನು ಮನಗಂಡು ರಷ್ಯಾ ದೇಶದ ಇಂಡೋ-ರಷ್ಯನ್ ಕಲ್ಚರ್ ಸೊಸೈಟಿಯವರು ಇವರನ್ನು ರಷ್ಯಾ ದೇಶಕ್ಕೆ ಆಮಂತ್ರಿಸಿದರು. ಸುಮಾರು 15 ದಿವಸ ರಷ್ಯಾ ದೇಶದ ಪ್ರಮುಖ ನಗರಗಳನ್ನು ಸಂದರ್ಶಿಸಿದರು. ಅಲ್ಲಿಯ ಸರ್ಕಾರ ಮಾಡಿದ ಪ್ರಗತಿಪರ ಕಾರ್ಯಗಳನ್ನು ಮೆಚ್ಚಿದರು. ಭಾರತ ಮತ್ತು ರಷ್ಯಾ ದೇಶದಲ್ಲಿರುವ ಮಹದಂತರವನ್ನು ನೋಡಿದರು. ಭಾರತದಲ್ಲಿಯೂ ರಷ್ಯಾ ದೇಶದಂತೆ ಬದಲಾವಣೆ ತರಬೇಕೆಂದು ಪಾಟೀಲರು ಇಚ್ಛಿಸಿದರು.

ದಮನ್ ಪತ್ರಿಕೆಯ ಸಂಪಾದಕರನ್ನು ರಷ್ಯಾ ಮತ್ತು ಭಾರತ ಬಾಂಧವ್ಯದ ಬಗ್ಗೆ ಕೇಳಿದಾಗ ಹೀಗೆ ಹೇಳಿದರು: "ಇಂಡೋ-ಸೋವಿಯತ್ ಕಲ್ಚರಲ್ ಸೊಸೈಟಿಯು ಈ ಎರಡೂ ದೇಶಗಳ ಮಧ್ಯೆ ಮೈತ್ರಿಯನ್ನು ಬಲಗೊಳಿಸುತ್ತಿದೆ. ರಷ್ಯಾವು ಭಾರತದ ಆಪತ್ಕಾಲದಲ್ಲಿ

ಹೇಗೆ ನೆರವಾಗಿತ್ತೆಂದು ದಮನ್ ಪಾಟೀಲರು ತಮ್ಮ ಹೇಳಿಕೆಯನ್ನು ಮುಂದುವರಿಸಿದರು. ಪ್ರಧಾನಮಂತ್ರಿ ಲಾಲ ಬಹಾದ್ದೂರ್ ಶಾಸ್ತ್ರಿಯವರ ಕಾಲದಲ್ಲಿ ಪಾಕಿಸ್ತಾನ ಮತ್ತು ಭಾರತದ ನಡುವೆ ಮೂರನೇ ಬಾರಿಗೆ ಯುದ್ಧ ನಡೆಯಿತು. ಪಾಕಿಸ್ತಾನವು ಯುದ್ಧದಲ್ಲಿ ಸೋಲುತ್ತಿರುವುದನ್ನು ಕಂಡು ಅಮೆರಿಕ ದೇಶದ ಸಹಾಯವನ್ನು ಕೋರಿತು. ಇಂತಹ ಸಂದಿಗ್ಧ ಸಮಯದಲ್ಲಿ ರಷ್ಯಾ ದೇಶವು ಸಹಾಯ ಮಾಡಿತು. ರಷ್ಯಾದ ಯುದ್ಧನೌಕೆಗಳು ಅರಬ್ಬಿ ಮಹಾಸಾಗರದಲ್ಲಿ ಬಂದು ನಿಂತವು. ಆಗ ಈ ವಿಷಯವನ್ನು ಮನಗಂಡ ಅಮೆರಿಕ ದೇಶದ ನೌಕೆಗಳು 'ಬಂದ ದಾರಿಗೆ ಸುಂಕವಿಲ್ಲ'ವೆಂಬಂತೆ ತಮ್ಮ ದೇಶಕ್ಕೆ ಮರಳಿದವು! ಈ ರೀತಿ ರಷ್ಯಾ ಮತ್ತು ಭಾರತದ ಮೈತ್ರಿ ಮೊದಲಿನಿಂದಲೂ ಇದೆಯೆಂದು ಪಾಟೀಲರು ಹೇಳಿದರು.

ಪಾಟೀಲರು ಶೇಷಾರಾವ ಕಾಮ್ತಿಕರ್ ರಷ್ಯಾ ದೇಶಕ್ಕೆ ಭೇಟಿ ಕೊಟ್ಟ ವಿಷಯವನ್ನೂ ಕೂಡ ಈ ಸಂದರ್ಭದಲ್ಲಿ ಪ್ರಸ್ತಾಪಿಸಿದರು. 557 ವರ್ಷಗಳ ಹಿಂದೆ ರಷ್ಯಾ ದೇಶದ ಪ್ರವಾಸಿ ಅಫನಾಸಿ ನಿಕೆಟನ್ ಭಾರತಕ್ಕೆ ಆಗಮಿಸಿದನು. ಬೀದರನಲ್ಲಿ 4 ತಿಂಗಳು ನೆಲೆಸಿದನು. ಆಗ ಬರೀದ ಶಾಹಿ ಮನೆತನದ 3ನೇ ಮಹ್ಮದಷಾನ ಆಡಳಿತವಿತ್ತು. ನಿಕೆಟನ್‌ನನು ತನ್ನ ದಿನಚರಿಯಲ್ಲಿ ಬೀದರ ನಗರದ ಅಂದಿನ ರಾಜಕೀಯ, ಸಾಮಾಜಿಕ ಜೀವನವನ್ನು ಕುರಿತು ಬರೆದಿದ್ದಾನೆ.

ಇದನ್ನು ಮನಗಂಡ ರಷ್ಯಾ ಸರ್ಕಾರವು ಬೀದರ ನಗರಸಭೆಯ ಅಧ್ಯಕ್ಷರಾಗಿದ್ದ ಶೇಷಾರಾವ ಕಾಮ್ತಿಕರ್‌ರನ್ನು ಆಮಂತ್ರಿಸಿತ್ತು. ಅವರು ರಷ್ಯಾ ದೇಶದ ಪ್ರವಾಸದ ನಂತರ ಬೀದರಕ್ಕೆ ಆಗಮಿಸಿದರು. ಆಗ Fasilitation ನಡೆದಾಗ ಕಾಮ್ತಿಕರರು ಹೇಳಿದ್ದು, ರಷ್ಯಾ ದೇಶವನ್ನು ಸ್ವರ್ಗವನ್ನಾಗಿ ಮಾಡಿದ್ದಾರೆ. ಆದರೆ ನಮ್ಮ ಮುಖಂಡರು 'ಸೋನೆ ಕಿ ಚಿಡಿಯಾ' ಎಂದು ಹೆಸರು ಪಡೆದ ದೇಶಕ್ಕೆ ನರಕ ಸಮಾನ ಮಾಡಿದ್ದಾರೆ ಎಂದು ಸಂತಾಪ ವ್ಯಕ್ತಪಡಿಸಿದ್ದನ್ನು ಪಾಟೀಲರು ನೆನಪಿಸಿಕೊಟ್ಟರು.

ರಷ್ಯಾಕ್ಕೆ ಹೋದ ವ್ಯಕ್ತಿಗಳೆಂದರೆ ರಂಗನಾಥರಾವ ಸಾಯಗಾಂವಕರ ಹಾಗೂ ಬೀದರ ಡಿಸಿಸಿ ಬ್ಯಾಂಕ್ ಮ್ಯಾನೇಜರ್ ಬಿ.ಎಸ್. ಕುದುರೆಯವರು.

ದಲಿತರ ಮನೆಯಲ್ಲಿ ಸಹಭೋಜನ :

ನನ್ನ ಮೊಮ್ಮಗ ಸಂಗಮೇಶನು ಮಂಗಲಪೇಟೆಯ ಅಡವೆಪ್ಪ ಮೇಟಕಾರಿಯವರ ಮನೆಗೆ ಕರೆದೊಯ್ದನು. ಮೆಟಕಾರಿಯವರು ಬಂಕಿನಲ್ಲಿ ಕುಳಿತಿದ್ದರು. ಅವರಿಗೆ ಈಗ 80 ವರ್ಷಗಳಾಗಿವೆ! ಹಣೆಯ ಮೇಲೆ ವಿಭೂತಿ, ಕೊರಳಲ್ಲಿ ರುದ್ರಾಕ್ಷಿ ಸರ ಹಾಕಿಕೊಂಡು ನಿರಂಜನ ಮೂರ್ತಿಗಳಂತೆ ಕಂಗೊಳಿಸಿದರು. ಸಕ್ಕರೆ ಕಾಯಿಲೆ, ರಕ್ತದೊತ್ತಡ ಮತ್ತು ಹೃದಯ ರೋಗಗಳು ಅವರನ್ನು ಜರ್ಝರಿತಗೊಳಿಸಿದ್ದವು. ಮನೆಯಿಂದ ಹೊರಗೆ ಹೋಗಲು ಸಾಧ್ಯವಿರಲಿಲ್ಲ. ನಮ್ಮನ್ನು ನೋಡಿ ಸಂತೋಷ ಪಟ್ಟು ಕ್ಷೀಣ ಧ್ವನಿಯಲ್ಲಿ ಕುಳಿತುಕೊಳ್ಳಲು ಹೇಳಿದರು.

ಮೆಟಕಾರಿಯವರು ವಿ.ಎನ್. ಪಾಟೀಲರ ನೆಂಟರು. (ಗಿರಿಯಪ್ಪ ಗೌಡರ ಧರ್ಮಪತ್ನಿ ಪಾರ್ವತಿ ತವರುಮನೆ ಇದು) ಬಾಲ್ಯದಿಂದಲೇ ಅವರನ್ನು ಚೆನ್ನಾಗಿ ಬಲ್ಲವರು. ಅವರಿಂದ ಏನಾದರೂ ಹೊಸ ವಿಚಾರಗಳು ದೊರಕಬಹುದೆಂದು ಅವರಲ್ಲಿ ಹೋದೆನು.

ಅವರು ಕೊಟ್ಟ ಉತ್ತರ, "ಪಾಟೀಲರನ್ನು ಬಾಲ್ಯದಿಂದಲೇ ನಾನು ಬಲ್ಲೆನು. ಬಹಳ ದಿವಸ ಮೀನಕೇರಿಯಲ್ಲಿ ನಾನು ಕಾಲ ಕಳೆದವನು. ಅವರ ಋಣ ನನ್ನ ಮೇಲೆ ಬಹಳಷ್ಟಿದೆ. ತೀರಿಸಲು ಸಾಧ್ಯವಿಲ್ಲವೆಂದು ಹೇಳಿದರು. ಬೀದರನ ಸರ್ಕಾರಿ ಹೈಸ್ಕೂಲಿನಲ್ಲಿ ಅವರ ಪ್ರೌಢಶಿಕ್ಷಣ ಮುಗಿಯಿತು. ನಮ್ಮ ಮನೆಯಲ್ಲಿಯೇ ಇದ್ದರು. ಸಂಘರ್ಷಮಯ ಜೀವನ ಅವರದು. ವಿದ್ಯಾರ್ಥಿಗಳಿದ್ದಾಗಲೇ ನಾಯಕತ್ವದ ಗುಣ ಅವರಲ್ಲಿತ್ತು. ಅವರ ದಟ್ಟವಾದ ಪ್ರಭಾವ ನನ್ನ ಮೇಲೆ ಆಗಿದೆ. ಹೈಸ್ಕೂಲಿನಲ್ಲಿರುವಾಗಲೇ ಅವರ ವಿವಾಹ ನೆರವೇರಿತು. ಚಂಗಳಮ್ಮ ಅವರ ಧರ್ಮಪತ್ನಿಯವರು. ಸಾರ್ವಜನಿಕ ಸೇವೆ ಮಾಡುವದರಲ್ಲಿ ಪತಿಗೆ ಬೆಂಬಲಿಸಿದರು. ಕನ್ನಡದ ಹೋರಾಟ,

ಸ್ವಾತಂತ್ರ್ಯ ಹೋರಾಟ, ಕಾಲೇಜಿನ ಓದು ಇವುಗಳೆಲ್ಲ ಏಕಕಾಲಕ್ಕೆ ನಡೆಯುತ್ತಿದ್ದವು.

ಅಭ್ಯಾಸ ಮುಗಿದ ನಂತರ ವಕೀಲರಾಗಿ ಕಮ್ಯುನಿಷ್ಟ ಪಕ್ಷದ ಸದಸ್ಯರಾಗಿ, ಶಾಸಕರಾಗಿ ಅವಿರತ ಸೇವೆ ಮಾಡಿದರು. ಅವರ ಹಿಂದೆ ದಲಿತರ ದಂಡು, ಹಿಂದುಳಿದವರ ದಂಡು ಸದಾ ಇರುತ್ತಿತ್ತು. ಅಸ್ಪೃಶ್ಯತೆ ಆಚರಿಸುವ ಅಂದಿನ ಕಾಲದಲ್ಲಿ ಅವರು ದಲಿತರ ಮನೆಯಲ್ಲಿ ಸಹಭೋಜನ ಮಾಡುತ್ತಿದ್ದರು. ಝುರೆಪ್ಪ ಹರಿಜನ್ ಹಳ್ಳಿಖೇಡ ಇವರು ಅವರ ಅಚ್ಚುಮೆಚ್ಚಿನ ಅನುಯಾಯಿಗಳಾಗಿದ್ದರು. ಜಿಲ್ಲೆ ಹಾಗೂ ತಾಲೂಕುಗಳ ಸರ್ಕಾರಿ ಜಮೀನನ್ನು ದಲಿತರಲ್ಲಿ ಹಂಚಿದರು. ಕನ್ನಡ ಚಳುವಳಿ ಬೀದರನಲ್ಲಿ ಪ್ರಪ್ರಥಮ ಸಲ ಇವರಿಂದಲೇ ಪ್ರಾರಂಭವಾಯಿತು. ದಿಗ್ಗಾವಿ ಎಂಬ ಶಿಕ್ಷಕರು ಹಾಗೂ ಇನ್ನಿತರ ಶಿಕ್ಷಕರು ಇವರ ಚಳುವಳಿಯಲ್ಲಿ ಭಾಗವಹಿಸುತ್ತಿದ್ದರು. ಕನ್ನಡದ ವಿಷಯಕ್ಕೆ ಸಂಬಂಧಪಟ್ಟ ಸಭೆಗಳು ಆಗಾಗ ಜರುಗುತ್ತಿದ್ದವು. ಅವರಲ್ಲಿ ಜನರನ್ನು ಸಂಘಟಿಸುವ ಸಾಮರ್ಥ್ಯವಿತ್ತು. ಮನೆಯ ಬಗ್ಗೆ ಚಿಂತೆ ಇರಲಿಲ್ಲ. 'ಬೇಫಿಕರ ಫಕೀರ್' ಎಂದು ಅವರಿಗೆ ಹೇಳಬಹುದು! ವೀರಸಂಗಪ್ಪ ಮಣಗೆಯವರು ಅವರ ಪಕ್ಕಾ ಸಾಥಿಗಳಾಗಿದ್ದರು. ಚುನಾವಣೆಯ ಕೆಲಸದಲ್ಲಿ ಕನ್ನಡ ಚಳುವಳಿಯಲ್ಲಿ ಸದಾ ಅವರ ಹಿಂದೆ ಇರುತ್ತಿದ್ದರು.

ಚುನಾವಣೆಯಲ್ಲಿ ನಾಲ್ಕಾರು ಸಲ ಸ್ಪರ್ಧಿಸಿರುವುದರಿಂದ ಅವರ ಆರ್ಥಿಕ ಸ್ಥಿತಿ ಗಂಭೀರವಾಯಿತು. ಶಾಸಕರುಗಳಂತೆ ಭವ್ಯವಾದ ಬಂಗಲೆ ಕಟ್ಟಿಕೊಳ್ಳದೆ ಪೂರ್ವಜರ ಹಳೆ ಮನೆಯಲ್ಲಿಯೇ ಅಂತ್ಯಕಾಲದವರೆಗೆ ಜೀವಿಸಿದರು" ಎಂದು ಮೆಟಕಾರಿಯವರು ಹೇಳಿದರು. ಅಡಿವೆಪ್ಪನವರ ಮನೆಯಿಂದ ಹೊರ ಬರುವಾಗ ಕುವೆಂಪು ಮಹಾಕವಿಯ ಕವನ ನೆನಪಿಗೆ ಬಂತು. 'ಕನ್ನಡಕ್ಕೆ ಹೋರಾಡು ಕನ್ನಡದ ಕಂದ, ಕನ್ನಡವ ಕಾಪಾಡು ನನ್ನ ಆನಂದ..." ಎಂಬುದನ್ನು ಪಾಟೀಲರು ನಿಜ ಜೀವನದಲ್ಲಿ ಅನುಷ್ಠಾನಕ್ಕೆ ತಂದ ಮಹನೀಯರು.

ಸುಮಾರು ಎರಡುವಾರ ಗತಿಸಿರಬಹುದು 'ವಿಜಯ ವಾಣಿ' ಪತ್ರಿಕೆಯಲ್ಲಿ ಅಡವೆಪ್ಪ ಮೆಟಕಾರಿಯವರು ಹೃದಯಾಘಾತದಿಂದ ನಿಧನ ಹೊಂದಿದರೆಂಬ ಸುದ್ದಿ ಓದಿದೆನು! ಮನಸ್ಸಿಗೆ ಬಹಳ ಖೇದವೆನಿಸಿತು!

ನಿಸ್ವಾರ್ಥಿಗಳು :

ಬೀದರಿನ ಜಾನಪದ ವಿದ್ವಾಂಸರಾದ ಹಿರಿಯ ಸಾಹಿತಿ ದೇಶಾಂಶ ಹುಡುಗಿಯವರ ಹತ್ತಿರ ಹೋದೆನು. ಹುಡುಗಿಯವರು ಹಿರಿಯ ಕವಿಗಳು. ಹುಮನಾಬಾದ ಚುನಾವಣಾ ಕ್ಷೇತ್ರಕ್ಕೆ ಸೇರಿದ ಹುಡುಗಿ ಗ್ರಾಮದವರು. ಇವರಿಂದ ಮಾಹಿತಿ ಪಡೆಯಬೇಕಾಗಿತ್ತು. ವೃದ್ಧಾವಸ್ಥೆಯಲ್ಲಿ ಬಳಲುತ್ತಿದ್ದ ಅವರು ಹಾಸಿಗೆಯ ಮೇಲೆ ಮಲಗಿದ್ದರು. ನಾನು ಹೋದಾಗ ಎದ್ದು ಕುಳಿತರು. ಬಂದ ಕಾರಣವನ್ನು ತಿಳಿಸಿದೆನು. ಅವರು ಪಾಟೀಲರ ಬಗ್ಗೆ ಅಭಿಮಾನದಿಂದ ಹೇಳಿದರು. "ಪಾಟೀಲರು ಒಳ್ಳೆಯ ವ್ಯಕ್ತಿಗಳು. ಕೊಟ್ಟ ಮಾತು ನಿಭಾಯಿಸುವವರು. ಸಾಮಾನ್ಯ ಜನರ ಸಂಗಡ ಹೆಚ್ಚಿನ ಸಂಪರ್ಕವಿಟ್ಟುಕೊಳ್ಳುತ್ತಿದ್ದರು. ಹುಸಿಕರಲ್ಲ.

ನಾನೊಮ್ಮೆ ಬೆಂಗಳೂರಿಗೆ ಹೋಗಿದ್ದಾಗ ಶಾಸಕರ ಭವನದಲ್ಲಿ ಅವರ ಹತ್ತಿರವಿದ್ದೆನು. ಅವರ ಕೋಣೆಯಲ್ಲಿ ಅನೇಕ ಪತ್ರಿಕೆಗಳಿದ್ದವು. ಓದುವ ಹವ್ಯಾಸ ಅವರಿಗೆ ಹೆಚ್ಚು ಇತ್ತು. ಸಣ್ಣಪುಟ್ಟ ಕೆಲಸಗಳನ್ನು ಸೇವಕರಿಂದ ಮಾಡಿಸಿಕೊಳ್ಳದೇ ತಾವೇ ಮಾಡಿಕೊಳ್ಳುತ್ತಿದ್ದರು. ಸಾದಾ ಆಹಾರ ಸೇವನೆ, ಕರಿದ ಪದಾರ್ಥ ಸೇವಿಸುತ್ತಿರಲಿಲ್ಲ. ಎಣ್ಣೆ ಹಚ್ಚಿದ ಊಟ ಹಿಂತಿರುಗಿಸಿ, ಮೊಸರು ಮತ್ತು ಅನ್ನ ತರಿಸಿದರು. ಇಬ್ಬರು ಊಟ ಮಾಡಿದೆವು. ಪಾಟೀಲರು ನಿಸ್ವಾರ್ಥಿಗಳಾಗಿದ್ದರು". ಎಂದು ದೇಶಾಂಶ ಹುಡುಗಿಯವರು ಪಾಟೀಲರ ಗುಣಗಾನ ಮಾಡಿದರು.

ಕನ್ನಡದ ಸಾಂಸ್ಕೃತಿಕ ನಾಯಕ :

ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಕಾಶಿನಾಥ ವಿಶ್ವಕರ್ಮ ಅವರ ಮನೆಗೆ ಹೋದೆನು. ಅವರ ಮನೆ ಬೀದರಿನ ಪ್ರತಾಪನಗರದಲ್ಲಿದೆ. ಎಂಬತ್ತು ವರ್ಷದ ವೃದ್ಧಾವಸ್ಥೆಯಲ್ಲಿ ಅವರು ಸಕ್ಕರೆ ಕಾಯಿಲೆ, ರಕ್ತದೊತ್ತಡ ಮುಂತಾದ ಕಾಯಿಲೆಗಳಿಂದ ನರಳುತ್ತಿದ್ದರು. ಹೊರಗೆ ಓಡಾಡುವಂತಿರಲಿಲ್ಲ. ಅವರ ಧರ್ಮಪತ್ನಿ ಪ್ರೇಮಾರವರು ಕೂಡಾ ಕಾಯಿಲೆಗಳಿಂದ ನರಳುತ್ತಿದ್ದರು.

ಕಾಶಿನಾಥ ವಿಶ್ವಕರ್ಮ ನನ್ನ ಸಹಪಾಠಿಗಳು ಹಾಗೂ ಸಹೋದ್ಯೋಗಿಗಳು. ವಿ.ಎನ್. ಪಾಟೀಲರ ಪರಿಚಯ ಅವರಿಗೆ ಚೆನ್ನಾಗಿತ್ತು. ಅವರು ಹೇಳಿದ್ದು ಹೀಗೆ "ಬೀದರ ಜಿಲ್ಲೆಯು ಕನ್ನಡ ಪ್ರದೇಶವಾಗಿದ್ದರೂ ಕೂಡ ಕನ್ನಡಕ್ಕೆ ಎಷ್ಟೂ ಮನ್ನಣೆ ಇರಲಿಲ್ಲ. ಮರಾಠಿ ಮತ್ತು ಉರ್ದು ಭಾಷೆಗಳ ಪ್ರಭಾವದಿಂದ ಕನ್ನಡ ನರಳುತ್ತಿತ್ತು. ವಿ.ಎನ್. ಪಾಟೀಲರು ಕನ್ನಡದ ಏಳಿಗೆಗಾಗಿ ತಮ್ಮ ಜೀವನವನ್ನೇ ಸಮರ್ಪಿಸಿದರು. ಕನ್ನಡ ಹೋರಾಟಗಾರರ ಪಡೆಯನ್ನು ಕಟ್ಟಿದರು. ಇವರ ಹೋರಾಟದ ಫಲವಾಗಿ ಅಂಗಡಿಗಳ ನಾಮಫಲಕಗಳು ಕನ್ನಡದಲ್ಲಿ ಕಾಣತೊಡಗಿದವು. ಶಾಲೆಗಳಲ್ಲಿ ಕನ್ನಡ ಕಲಿಸುವ ಶಿಕ್ಷಕರು ಇರಲಿಲ್ಲ. ಕನ್ನಡ ಕಲಿಸುವ ಶಿಕ್ಷಕರನ್ನು ನೇಮಕಗೊಳಿಸಲು ಹೋರಾಡಿದರು. ತಮ್ಮ ಹುಮನಾಬಾದ ಕ್ಷೇತ್ರದಲ್ಲಿ ಕನ್ನಡ ಮಾಧ್ಯಮ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಶ್ರಮಿಸಿದರು. ಅವರ ಪ್ರಯತ್ನದಿಂದಲೇ ಕನ್ನಡ ಮಾಧ್ಯಮ ಪ್ರೌಢಶಾಲೆಗಳು ಪ್ರಾರಂಭವಾದವು.

ಶಾಲಾ ಮೈದಾನದಲ್ಲಿ ವಿದ್ಯಾರ್ಥಿ ಸಮೂಹವನ್ನುದ್ದೇಶಿಸಿ ಭಾಷಣ ಮಾಡುತ್ತಿದ್ದರು. ಕನ್ನಡಕ್ಕೆ ಅನ್ಯಾಯವಾದಾಗಲೆಲ್ಲ ಹೋರಾಟಕ್ಕೆ ಇಳಿಯಬೇಕೆಂದು ಕರೆ ಕೊಡುತ್ತಿದ್ದರು. ಇದರಿಂದ ವಿದ್ಯಾರ್ಥಿಗಳಲ್ಲಿ ಹೋರಾಟದ ಮನೋಭಾವ ಬೆಳೆಯಿತು". ಹೀಗಾಗಿ ವಿ. ಎನ್. ಪಾಟೀಲರು ಕನ್ನಡದ ಸಾಂಸ್ಕೃತಿಕ ನಾಯಕರಾಗಿ ಬೆಳೆದರು.

ಕಾಶಿನಾಥ ವಿಶ್ವಕರ್ಮರವರು ಒಂಬತ್ತನೆ ತರಗತಿಯಲ್ಲಿ ಕನ್ನಡ ಮಾಧ್ಯಮದಲ್ಲಿ ಓದುತ್ತಿರುವಾಗ ನಡೆದ ಒಂದು ಘಟನೆಯನ್ನು ಹೇಳಿದರು. "ಸರ್ಕಾರಿ ಗಂಡು ಮಕ್ಕಳ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಆರ್.ಎಸ್. ಕುಲಕರ್ಣಿಯವರಾಗಿದ್ದರು. ಅವರು ಮರಾಠಿ ಭಾಷೆಯ ಪಕ್ಷಪಾತಿಗಳಾಗಿದ್ದರು. ಮರಾಠಿ ಮಾಧ್ಯಮದ ಹುಡುಗರಿಗೆ ಶಾಲಾ ಕಟ್ಟಡದ ಕೋಣೆಯಲ್ಲಿ ಅವಕಾಶ ಮಾಡಿಕೊಟ್ಟಿದ್ದರು. ಆದರೆ, ಕನ್ನಡ ವಿದ್ಯಾರ್ಥಿಗಳಿಗೆ ಅಂಥ ಅವಕಾಶವಿರಲಿಲ್ಲ. ಕನ್ನಡ ವಿದ್ಯಾರ್ಥಿಗಳು ಮುಖ್ಯೋಪಾಧ್ಯಾಯರಿಗೆ, "ನಮಗೂ ಮರಾಠಿ ವಿದ್ಯಾರ್ಥಿಗಳಂತೆ ಶಾಲಾ ಕಟ್ಟಡದಲ್ಲಿ ಸ್ಥಳಾವಕಾಶ ಮಾಡಿಕೊಡಬೇಕೆಂದು" ವಿನಂತಿಸಿದರು. ಆಗ ಮುಖ್ಯೋಪಾಧ್ಯಾಯರು "ಉಸ್ ಝಾಡ ಕೇ ನೀಚೆ ಬೈಠೊ" ಎಂದು ಕಠೋರವಾಗಿ ಹೇಳಿದರು. ಕನ್ನಡ ವಿದ್ಯಾರ್ಥಿಗಳು ಇವರಿಗೆ ತಕ್ಕಪಾಠ ಕಲಿಸಬೇಕೆಂದು ನಿಶ್ಚಯಿಸಿದರು.

ಮರುದಿನ ಆರ್.ಎಸ್. ಕುಲಕರ್ಣಿಯವರು ಶಾಲಾ ಮೈದಾನದಲ್ಲಿ ಓಡಾಡುತ್ತಿದ್ದಾಗ ಧಾನ್ಯದ ಚೀಲದಿಂದ ಮುಖಕ್ಕೆ ಮುಸುಕು ಹಾಕಿ ಚೆನ್ನಾಗಿ ಬಾರಿಸಿದರು. ಮೂರು ದಿನ ಹಡತಾಲ ಮಾಡಿದರು. ಬೀದರ ನಗರದ ಮುಖಂಡರು ಬಂದು ದಬಾಯಿಸಿದರು. 'ಕೆಟ್ಟ ಮೇಲೆ ಬುದ್ಧಿ ಬಂದಿತು' ಎಂಬಂತೆ ಮುಖ್ಯೋಪಾಧ್ಯಾಯರು ಕನ್ನಡ ಮಾಧ್ಯಮದವರಿಗೆ ಕಟ್ಟಡದ ಕೋಣೆಯಲ್ಲಿ ಕುಳಿತುಕೊಳ್ಳಲು ಅವಕಾಶ ಮಾಡಿಕೊಟ್ಟರು. ಆ ವಿದ್ಯಾರ್ಥಿ ಗುಂಪಿಗೆ ಮುತ್ತಂಗಿಯ ಚಂದ್ರಶೇಖರ ಪಾಟೀಲ, ಬೇಮಳಖೇಡದ ವೀರಪಾಕ್ಷಯ್ಯ ಸ್ವಾಮಿ ಮುಖಂಡರಾಗಿದ್ದರು". ಇವರು ಪಾಟೀಲರ ಕಟ್ಟಾ ಅನುಯಾಯಿಗಳು ಹಾಗೂ ಅವರಿಂದ ಕನ್ನಡ ದೀಕ್ಷೆ ಪಡೆದವರು ಎಂದು ಹೇಳಿದರು. ಅವರಿಂದ ಬೀಳ್ಕೊಡುವಾಗ ಮಧ್ಯಾಹ್ನ 2 ಗಂಟೆಯಾಗಿತ್ತು.

ನಾನು 1952-53ರಲ್ಲಿ ಇವರ ಸಹಪಾಠಿ (ಕ್ಲಾಸಮೇಟ್) ಆಗಿದ್ದೆನು. ಪಾಟೀಲರಿಗೆ ವಿದ್ಯಾರಣ್ಯರೆಂದು, ಚಂದ್ರಶೇಖರ ಪಾಟೀಲ ಮುತ್ತಂಗಿ

ಹಾಗೂ ವೀರಪಾಕ್ಷಯ್ಯ ಸ್ವಾಮಿ ಬೇಮಳಖೇಡ ಇವರಿಬ್ಬರಿಗೆ ಹಕ್ಕ-ಬುಕ್ಕರೆಂದು ಕಲ್ಪಿಸಿ ಅವರ ಬಗ್ಗೆ ಕವನ ರಚಿಸಿದೆನು. ಆಗ ನಾನು ಹತ್ತನೆಯ ವರ್ಗದ ವಿದ್ಯಾರ್ಥಿಯಾಗಿದ್ದೆನು.

ದಲಿತರಿಗೆ, ಬಡವರಿಗೆ ಭೂಮಿ :

ಕಮ್ಯುನಿಷ್ಟ ಪಕ್ಷದ (ಸಿ.ಪಿ.ಐ.) ಜಿಲ್ಲಾ ಕಾರ್ಯದರ್ಶಿಗಳಾದ ಬಾಬುರಾವ ಹೊನ್ನಾ ಹತ್ತಿರ ಹೋದೆ. ಅವರು ವಿ.ಎನ್. ಪಾಟೀಲರನ್ನು ಚೆನ್ನಾಗಿ ಬಲ್ಲವರು ಅವರ ಸಾಥಿಗಳು ಕೂಡ. ಪಾಟೀಲರಿಂದ ಪ್ರೇರಿತರಾಗಿ ದೀನ-ದಲಿತರ ಸೇವೆಯಲ್ಲಿ ತೊಡಗಿದ್ದಾರೆ.

ನಾನು ಹೋದಾಗ ಅವರು ಬೇರೊಂದು ಕಡೆಗೆ ಹೋಗುವ ತರಾತುರಿಯಲ್ಲಿದ್ದರು. ಆದರೂ ಕೂಡ ನನ್ನೊಡನೆ ಮಾತನಾಡಲು ಒಪ್ಪಿದರು. ಪಾಟೀಲರ ಬಗ್ಗೆ ನಿಮಗೆ ಪರಿಚಯವಿದ್ದ ವಿಷಯಗಳನ್ನು ದಯಮಾಡಿ ಹಂಚಿಕೊಳ್ಳಬೇಕೆಂದು ವಿನಂತಿಸಿದೆನು. ಅದಕ್ಕೆ ಅವರು, "ಬಡವರ, ದೀನ-ದಲಿತರ ಬಗ್ಗೆ ಅವರ ಸಂಕಟಗಳ ನಿವಾರಣೆಗಾಗಿ ಬಹಳ ಶ್ರಮಪಟ್ಟಿದ್ದಾರೆ. ಸರ್ಕಾರಿ ಭೂಮಿಯನ್ನು 1968ರಲ್ಲಿ ಬಡವರಿಗೆ 'ಕಬ್ಜಾ' ಮಾಡಿಸಿಕೊಟ್ಟರು. ಆ ಫಲಾನುಭವಿಗಳು ಈಗ ಭೂಮಿ ಸಾಗುವಳಿ ಮಾಡಿಕೊಂಡು ಸಂತೃಪ್ತ ಜೀವನವನ್ನು ಸಾಗಿಸುತ್ತಿದ್ದಾರೆ. ಬಸವಕಲ್ಯಾಣ, ಬೀದರ ಮತ್ತು ಹುಮನಾಬಾದ ತಾಲೂಕುಗಳಲ್ಲಿಯ ಸರ್ಕಾರಿ ಭೂಮಿ ಸಾವಿರಾರು ಎಕರೆ ಸಾಗುವಳಿ ಮಾಡದೆ ಖಾಲಿ ಉಳಿದಿತ್ತು. ಬಡವರಲ್ಲಿ ಹಂಚಿದ್ದು ಸಾಮಾನ್ಯ ಮಾತಲ್ಲ!" ಎಂದು ಹೇಳಿದರು.

ಮೀನಕೇರಿಯ ಹರಿಜನರಿಗೆ ಸರ್ಕಾರಿ ಜಮೀನನ್ನು ದೊರಕಿಸಿಕೊಟ್ಟು ಅವರ ಬದುಕನ್ನು ಬೆಳಗಿಸಿದರು. ಈ ಕಾರ್ಯದಲ್ಲಿ ಅವರಿಗೆ ಸಹಕರಿಸಿದವರೆಂದರೆ ರಂಗನಾಥರಾವ ಸಾಯಗಾಂವಕರ, ಸಂಗ್ರಾಮ ತಂದೆ ಪ್ರಭುರಾವ ವಕೀಲ (ಮೊದಲು ಸಿ.ಪಿ.ಐ. ಪಕ್ಷದವರಾಗಿದ್ದರು.), ಶಂಕರರಾವ ಕಮಠಾಣೆ, ಶಂಕರರಾವ ದೇಶಪಾಂಡೆ ಹಳ್ಳಿಖೇಡ ಅನೇಕ ಸದಸ್ಯರು.

ಅಸ್ಪೃಶ್ಯತಾ ನಿವಾರಣೆಗಾಗಿ ಪಾಟೀಲರು ಮಾಡಿದ ಪ್ರಯತ್ನ ವಿವರಿಸಿರಿ ಎಂದು ಕೇಳಿದೆ. "ಸಾಮಾಜಿಕ ನ್ಯಾಯಕ್ಕಾಗಿ ಮತ್ತು ಸಮಾನತೆಗಾಗಿ ಅವರು ಬಹಳಷ್ಟು ಶ್ರಮಪಟ್ಟಿದ್ದಾರೆ. ದಲಿತರ ಮನೆಗಳಿಗೆ ಹೋಗಿ ಅವರ ಸಮಸ್ಯೆಗಳನ್ನು ಕೇಳುತ್ತಿದ್ದರು. ಆದಷ್ಟು ಪರಿಹರಿಸುತ್ತಿದ್ದರು. ಗ್ರಾಮಗಳಲ್ಲಿ ಸವರ್ಣೀಯರ ಸಭೆಗಳನ್ನು ನಡೆಸಿ, ಅಸ್ಪೃಶ್ಯತೆಯಿಂದ ರಾಷ್ಟ್ರಕ್ಕಾದ ಹಾನಿಯನ್ನು ಹೇಳುತ್ತಿದ್ದರು. ಮನುಷ್ಯರಲ್ಲಿ ಭೇದಭಾವ ಮಾಡಕೂಡದು. ನಮ್ಮ ಪೂರ್ವಜರಲ್ಲಿ ಅನೇಕರು ಅಸ್ಪೃಶ್ಯ ಜನಾಂಗಕ್ಕೆ ಸೇರಿದವರಾಗಿದ್ದರು. ಅವರು ಮಹಾತ್ಮರೆಂದು ಪೂಜಿಸಲ್ಪಡುವರು. ಬಸವೇಶ್ವರರು ಮತ್ತು ಗಾಂಧೀಜಿಯವರು ಅಸ್ಪೃಶ್ಯತೆ ಆಚರಿಸುವುದು ಮೂರ್ಖತನವೆಂದು ಹೇಳಿದ್ದಾರೆ. ಅವರ ಭಾಷಣದ ಪ್ರಭಾವದಿಂದ ಬಸವಕಲ್ಯಾಣ, ಹುಮನಾಬಾದ ತಾಲೂಕುಗಳಲ್ಲಿ ಅಸ್ಪೃಶ್ಯತೆ ಬಹಳಷ್ಟು ಕಡಿಮೆಯಾಗಿದೆ" ಎಂದು ಹೊನ್ನಾರವರು ಹೇಳಿದರು. ವಿ.ಎನ್. ಪಾಟೀಲರು ಮಾಡಿದ ಸುಧಾರಣೆಗಳನ್ನು ಈ ರೀತಿ ಹೇಳಿದರು "ಇಂದಿರಾಗಾಂಧಿಯವರು ಬಡವರಿಗಾಗಿ 20 ಅಂಶಗಳ ಕಾರ್ಯಕ್ರಮ ಜಾರಿಗೆ ತಂದಾಗ ಪಾಟೀಲರು ಸಹಕರಿಸಿದರು. ಹಾಗೂ ಯಶಸ್ವಿಗೊಳಿಸಿದರು. ಜಮೀನ್ದಾರರು, ಶ್ರೀಮಂತರು ಬಡ್ಡಿ ವ್ಯವಹಾರ ಮಾಡಿ ಬಡವರನ್ನು ಶೋಷಿಸುತ್ತಿದ್ದರು. ಇದರಿಂದ ಬಡವರ ಬದುಕು ದುರ್ಭರವಾಗಿತ್ತು. ಹಳ್ಳಿಗಳಲ್ಲಿ ನಡೆಯುತ್ತಿರುವ ಈ ಶೋಷಣೆಯನ್ನು ತಪ್ಪಿಸಲು ಬಡ್ಡಿ ವ್ಯವಹಾರ ಮಾಡುವವರಿಗೆ ಕಠಿಣ ಶಿಕ್ಷೆ ಕೊಡಬೇಕೆಂದು ಸರ್ಕಾರಕ್ಕೆ ಸಲಹೆಯನ್ನಿತ್ತರು. ಬಡವರು ಅಡವಿಟ್ಟ ಆಭರಣಗಳನ್ನು ಹಿಂತಿರುಗಿಸಿ ಕೊಡಿಸಿದರು. ಇದರಿಂದ ಶ್ರೀಮಂತರಿಗೆ ಭಯ ಹುಟ್ಟಿತು. ಆಗ ಬ್ರಹ್ಮದತ್ತ ಎಂಬುವರು ಅಸಿಸ್ಟೆಂಟ್ ಕಮಿಷನರ್ ಆಗಿದ್ದರು. ಕಟ್ಟುನಿಟ್ಟಿನ ಕಾನೂನು ಪಾಲಕರಾದ ಇವರಿಗೆ ಜಮೀನ್ದಾರರು, ಶ್ರೀಮಂತರು ಹೆದರುತ್ತಿದ್ದರು. ವಿ.ಎನ್. ಪಾಟೀಲರೊಡನೆ ಬ್ರಹ್ಮದತ್ತರ ಸ್ನೇಹವಿತ್ತು. ಸಂಜಯ ಗಾಂಧಿಯವರ ಕಡ್ಡಾಯವಾಗಿ ಕುಟುಂಬ ಯೋಜನಾ ಶಸ್ತ್ರ

ಚಿಕಿತ್ಸೆ ಮಾಡುವುದರ ವಿರುದ್ಧ ಪಾಟೀಲರು ಜನರನ್ನು ಬೆಂಬಲಿಸಿದರು. ಪಾಟೀಲರ ಈ ವಿರೋಧದಿಂದ ಕುಟುಂಬ ಯೋಜನೆ ಒತ್ತಾಯ ಪೂರ್ವಕ ಮಾಡುವುದು ತಡೆಹಿಡಿಯಲಾಯಿತು.

ಭೂ ನ್ಯಾಯ ಮಂಡಳಿಯಲ್ಲಿ ಪಾಟೀಲರು ಮಾಡಿದ ಪಾತ್ರವನ್ನು ಕುರಿತು ಹೊನ್ನಾ ಅವರು ಹೇಳಿದ್ದು "ಪಾಟೀಲರು ಎರಡನೆ ಸಲ ಶಾಸಕರಾದಾಗ ಹುಮನಾಬಾದ ಮತ್ತು ಬೀದರ ತಾಲೂಕಿನ ಭೂ ನ್ಯಾಯ ಮಂಡಳಿಯ ಸದಸ್ಯರನ್ನಾಗಿ ಸರ್ಕಾರ ಇವರನ್ನು ನೇಮಿಸಿತು. ಆ ಅವಧಿಯಲ್ಲಿ ಪಾಟೀಲರು ಭೂ ಸಾಗುವಳಿ ಮಾಡುತ್ತಿದ್ದ ಗೇಣಿದಾರರಿಗೆ ಭೂಮಿಯನ್ನು ಜಮೀನ್ದಾರರಿಂದ ದೊರಕಿಸಿಕೊಟ್ಟರು. ಅಕ್ರಮವಾಗಿ ಭೂಮಿ ಸಾಗುವಳಿ ಮಾಡುತ್ತಿದ್ದವರಿಗೆ ಅವರ ಹೆಸರಿಗೆ ಪಟ್ಟಾ ಮಾಡಿಸಿದರು.

ಭೂ ನ್ಯಾಯ ಮಂಡಳಿಯ ಸದಸ್ಯರೆಂದರೆ ಎಂ.ಎಲ್.ಎ.ಗಳು ಕಾಂಗ್ರೆಸ್ ಮುಖಂಡರುಗಳು ಮತ್ತು ತಹಸೀಲ್ದಾರರು ಇರುತ್ತಿದ್ದರು. ಈ ಮಂಡಳಿಗೆ ಚೇರಮನ್ ಅಸಿಸ್ಟೆಂಟ್ ಕಮಿಷನರ್ ಇರುತ್ತಿದ್ದರು.

ಕೋಮು ಸೌಹಾರ್ದತೆ ಬಗ್ಗೆ ಪಾಟೀಲರು ಬೀದರ ಜಿಲ್ಲಾದ್ಯಂತ ಸಂಚರಿಸಿ ಜನರಿಗೆ ತಿಳುವಳಿಕೆ ಕೊಟ್ಟರು. ಎಲ್ಲ ಧರ್ಮಿಯರು ಸೌಹಾರ್ದತೆಯಿಂದ ಬಾಳಿ ದೇಶದ ಉನ್ನತಿಗೆ ಕಾರಣರಾಗಬೇಕೆಂಬುದೇ ಅವರ ಉದ್ದೇಶವಾಗಿತ್ತು. ಇದರಿಂದ ಜನರಲ್ಲಿ ಸದ್ಭಾವನೆ ಮೂಡಿತು.

ಪಾಟೀಲರು ಮಾರ್ಕ್ಸ್‌ವಾದವನ್ನು ಅಧ್ಯಯನ ಮಾಡಿದವರು. ಉರ್ದು ಭಾಷೆಯ ಮೇಲೆ ಅವರಿಗೆ ಹಿಡಿತವಿತ್ತು. ಹಳೆ ಮೈಸೂರು ಹಾಗೂ ಬಾಂಬೆ ಕರ್ನಾಟಕದ ಜನರು ಇವರ ಉರ್ದು ಭಾಷಣವನ್ನು ಕೇಳಿ ಮುಸಲ್ಮಾನರೆಂದೇ ತಿಳಿಯುತ್ತಿದ್ದರು. ಉರ್ದು, ಕನ್ನಡ, ಹಿಂದಿ, ಮರಾಠಿ, ಇಂಗ್ಲಿಷ್ ಮುಂತಾದ ಭಾಷೆಗಳು ಅವರಿಗೆ ಕರತಲಾಮಲಕವಾಗಿದ್ದವು.

ಸುಮಾರು ಒಂದು ತಾಸು ಹೊನ್ನಾರವರೊಡನೆ ಸಂದರ್ಶಿಸಿದೆನು.

ಅವಸರದಿಂದ ಅವರು ಬೇರೆ ಕಾರ್ಯಕ್ರಮಕ್ಕೆ ಹೋದರು. ನಾನು ಮನೆಗೆ ಮರಳಿದೆನು.

ಮುಸ್ಲಿಮ್ ಹಿರಿಯ ಜೀವಿ :

ಮನ್ನಾಎಖೇಳ್ಳಿಯಿಂದ ಬೀದರಕ್ಕೆ ಬರುವಾಗ ಒಬ್ಬ ಮುಸಲ್ಮಾನ ಹಿರಿಯರು ನನ್ನ ಪಕ್ಕದಲ್ಲಿಯೇ ಕುಳಿತಿದ್ದರು. ಅವರನ್ನು ವಿ.ಎನ್. ಪಾಟೀಲರ ಬಗ್ಗೆ ನಿಮಗೆ ಗೊತ್ತಿದ್ದನ್ನು ಹೇಳಿರಿ ಎಂದು ಕೇಳಿದೆನು. ಅದಕ್ಕೆ ಅವರು, "ವಿ.ಎನ್. ಪಾಟೀಲರು ಮನ್ನಾಎಖೇಳ್ಳಿಯ ಸರ್ಕಾರಿ ಜಾಗದಲ್ಲಿ ಊರು ತುಂಬಿಸಬೇಕೆಂದಿದ್ದರು. ಆ ಸಂದರ್ಭದಲ್ಲಿ ಮನ್ನಾಎಖೇಳ್ಳಿಗೆ ರಾಜ್ಯದ ಕಂದಾಯ ಮಂತ್ರಿಗಳು ಆಗಮಿಸಿದ್ದರು. ಪಾಟೀಲರು ಜನರಿಗೆ ಮನೆ ಕಟ್ಟಿಕೊಳ್ಳಲು ಕಂದಾಯ ಮಂತ್ರಿಗಳಿಗೆ ಅರ್ಜಿ ಕೊಡಲು ಹೇಳಿದರು. ಆಗ ಜನರು ಪಾಟೀಲರ ಮಾತಿಗೆ ಮಹತ್ವ ಕೊಡಲಿಲ್ಲ. ಸ್ಥಳದ ಮಹತ್ವ ಜನರಿಗೆ ಆಗ ಗೊತ್ತಿರಲಿಲ್ಲ. ಮುಂದಾಲೋಚನೆ ಅರಿಯದ ಜನರು ಸ್ಥಳದ ಅಭಾವದಿಂದ ಈಗ ಪರಿತಪಿಸುತ್ತಿದ್ದಾರೆ. ನಿವೇಶನಗಳ ಬೆಲೆ ಗಗನಕ್ಕೇರಿವೆ ಎಂದು ಹಿರಿಯ ಜೀವಿ ಪಶ್ಚಾತಾಪ ಪಟ್ಟರು.

ಸತ್ಸಂಗದ ಪರಿಣಾಮ :

ಬೀದರ ಜಿಲ್ಲೆ ಶಿವಶರಣರಿಗೆ, ಸಂತರಿಗೆ ಜನ್ಮಕೊಟ್ಟ ಪವಿತ್ರ ಭೂಮಿಯಾಗಿದೆ. ಇಲ್ಲಿ ನಾವದಗಿ ರೇವಪ್ಪಯ್ಯನವರು, ಕರಕನಳ್ಳಿ ಬಕ್ಕಪ್ರಭುಗಳು, ಮರಕುಂದಿ ಬಸ್ವಣಪ್ಪನವರು, ಧುಮ್ಮನಸೂರಿನ ಸಿದ್ಧಪ್ರಭುಗಳು, ಹಳೆಂಬರ ವೀರಭದ್ರಪ್ಪನವರು, ಮಾಣಿಕನಗರದ ಮಾಣಿಕಪ್ರಭುಗಳು, ಹಾರಕೂಡ ಚನ್ನಬಸವೇಶ್ವರರು ಮತ್ತು ಭಾಲ್ಕಿ ಹಿರೇಮಠದ ಚನ್ನಬಸವ ಪಟ್ಟದ್ದೇವರು, ಚಾಳಕಾಪುರದ ಸಿದ್ಧಾರೂಢರು, ಹುಡುಗಿ ಕರಬಸಪ್ಪನವರು ಇನ್ನೂ ಅನೇಕರು ಜನ್ಮವೆತ್ತಿ ಈ ಭೂಮಿಯನ್ನು ಪಾವನಗೊಳಿಸಿದ್ದಾರೆ.

ಮೀನಕೇರಿಯು ಗವಿ ವೀರಭದ್ರೇಶ್ವರ ಪವಿತ್ರ ಸ್ಥಳದಲ್ಲಿ ಶಂಭುಲಿಂಗೇಶ್ವರರೆಂಬ ಯತಿಗಳು ಇರುತ್ತಿದ್ದರು. ಅವರ ಜನ್ಮಸ್ಥಳ ಹಾಗೂ ಎಲ್ಲಿಂದ ಬಂದಿದ್ದರೆಂಬುದು ಇನ್ನೂ ಯಾರಿಗೂ ತಿಳಿದು ಬಂದಿಲ್ಲ. ಮೀನಕೇರಿಯ ಭಕ್ತರು ಅವರ ಮೇಲೆ ಅಗಾಧವಾದ ನಿಷ್ಠೆಯನ್ನಿಟ್ಟಿದ್ದರು. ಒಂದು ಸಲ ಸ್ವಾಮಿಗಳು ಊರೊಳಗೆ ಬಂದಾಗ ಭಕ್ತರೆಲ್ಲರು ಅವರ ಸುತ್ತ ನೆರೆದರು. ಸ್ವಾಮಿಗಳ ದರ್ಶನ ಪಡೆದರು. ವಾಲಿ ಮನೆತನದ ಬಸ್ಸಮ್ಮನವರು ಕೂಡ ಆಗಮಿಸಿದ್ದರು. ಅವರು ಎದೆ ಕ್ಯಾನ್ಸರ್‌ನಂದ ನರಳುತ್ತಿದ್ದರು. ಅವರ ನರಳಾಟವನ್ನು ಸ್ವಾಮಿಗಳು ಕಂಡರು. ಬಸ್ಸಮ್ಮನವರಿಗೆ ನರಳುವ ಕಾರಣವನ್ನು ಕೇಳಿದರು. ಸ್ವಾಮಿಗಳು ಸ್ತನ ಕ್ಯಾನ್ಸರ್‌ನಂದ ಬಳಲುತ್ತಿದ್ದಾರೆಂದು ಅರಿತರು. ಅವಳ ಎದೆಯಲ್ಲಿನ ವಿಷವನ್ನು ಬಾಯಿಂದ ಹೀರಿ ಹೊರ ಚೆಲ್ಲಿದರು. ಕೂಡಲೇ ಬಸ್ಸಮ್ಮನ ನೋವು ನಿವಾರಣೆಯಾಯಿತು! ಶಿವನು ವಿಷವನ್ನು ಸೇವಿಸಿ ಜಗತ್ತನ್ನು ಕಾಪಾಡಿದಂತೆ ಶ್ರೀ ಶಂಭುಲಿಂಗೇಶ್ವರರು ಬಸ್ಸವ್ವಳ ಸಂಕಟ ದೂರಗೊಳಿಸಿದರು.

ಬಸ್ಸಮ್ಮ ತಾಯಿಯವರು ಶಂಭುಲಿಂಗೇಶ್ವರರಿಗೆ ತನ್ನ ಬಂಧನವನ್ನು ಕಳೆದ ಗುರುಗಳೆಂದು ಭಾವಿಸಿ ತಮ್ಮನ್ನೆ ಸಮರ್ಪಿಸಿಕೊಂಡರು. ಅವರಿಗೆ ಸಂಸಾರದಲ್ಲಿ ವಿರಕ್ತಿ ಹುಟ್ಟಿತು. ಪರುಷ ಮುಟ್ಟಿದ ಬಳಿಕ ಕಬ್ಬಿಣವು ಕಬ್ಬಿಣವಾಗಿ ಉಳಿಯದೇ ಅದು ಬಂಗಾರವಾಗುತ್ತದೆಯೆಂದು ಹೇಳುತ್ತಾರೆ. ಶಂಭುಲಿಂಗೇಶ್ವರ ಸತ್ಸಂಗದಿಂದ ಬಸ್ಸಮ್ಮ ತಾಯಿಯವರು ಮಹಾನ ಶಿವಶರಣೆಯಾದರು. ಶಂಭುಲಿಂಗೇಶ್ವರರು ಮೀನಕೇರಿಯನ್ನು ಬಿಟ್ಟು ರೇಕುಳಗಿಗೆ ಆಗಮಿಸಿದರು. ಬಸ್ಸಮ್ಮ ತಾಯಿಯವರ ತವರು ಮನೆ ರೇಕುಳಗಿ. ಇವರು ಹಚ್ಚೆ ಮನೆತನದವರು. ಈ ಮನೆತನದವರು ಶಂಭುಲಿಂಗೇಶ್ವರರಿಗೆ ಆಶ್ರಮ ಕಟ್ಟಲು ಸ್ಥಳ ಕೊಟ್ಟರು. ಅಲ್ಲಿ ಇವರಿಬ್ಬರು ಪವಾಡ ಪುರುಷರಾಗಿ ಪ್ರಸಿದ್ಧಿಯನ್ನು ಪಡೆದರು. ಇವರಿಬ್ಬರೂ ಒಂದೇ ದಿನ, ಒಂದೇ ಸಮಯದಲ್ಲಿ ಲಿಂಗೈಕ್ಯರಾದರು.

ರೇಕುಳಗಿಯಲ್ಲಿ ಪ್ರತಿ ವರ್ಷ ಸಂಕ್ರಾಂತಿ ದಿನದಂದು ಶಂಭುಲಿಂಗೇಶ್ವರ ಮತ್ತು ಬಸ್ಸಮ್ಮ ತಾಯಿಯ ಸ್ಮರಣಾರ್ಥ ಜಾತ್ರೆ ಜರುಗುತ್ತದೆ. ಈ ಗ್ರಾಮವು ಯಾತ್ರಾ ಸ್ಥಳವಾಗಿದೆ. ದೇಶದ ಅನೇಕ ನಾಯಕರು ದರ್ಶನಾರ್ಥವಾಗಿ ಆಗಮಿಸುತ್ತಾರೆ. ರಾಷ್ಟ್ರಪತಿಗಳಾದ ಪ್ರಣಬ್ ಮುಖರ್ಜಿಯವರು ಇಲ್ಲಿಗೆ ಬಂದು ಹೋಗಿದ್ದಾರೆ ಎಂದು ಹಿರಿಯ ಸಾಹಿತಿಗಳಾದ ಎಂ.ಜಿ. ದೇಶಪಾಂಡೆ ಅವರು ಹೇಳುತ್ತಾರೆ. ಇಂತಹ ಮೀನಕೇರಿ ಪಾವನಭೂಮಿ ಪಾಟೀಲರಿಗೆ ಜನ್ಮಕೊಟ್ಟಿದೆ.

ಪ್ರಗತಿಪರ ವಿಚಾರವಾದಿ :

ನನ್ನ ಸ್ವಗ್ರಾಮವಾದ ಐನೂಲಿಯು ಚಿಂಚೋಳಿ ತಾಲೂಕಿನಲ್ಲಿದೆ. ವಿ.ಎನ್. ಪಾಟೀಲರು ತಮ್ಮ ಅಕ್ಕ ಸರಸ್ವತಿ ಬಂಡೆಪ್ಪ ಪಾಟೀಲ ಅವರ ಮನೆಗೆ ಬರುತ್ತಿದ್ದರು. ನಮ್ಮೂರಿನ ಭೀಮಷಾ ಅವರು ಶತಾಯುಷಿಗಳಾಗಿದ್ದಾರೆ. ಅವರಿಂದ ಪಾಟೀಲರ ಬಗ್ಗೆ ಮಾಹಿತಿ ಪಡೆಯಬೇಕೆಂದು ಅವರ ಮನೆಗೆ ಹೋದೆನು. ಪ್ರಾತಃಕಾಲದ ಸಮಯ ಬಿಸಿಲಿನ ಬೇಗೆ ಇರಲಿಲ್ಲ. ಭೀಮಷಾ ಅವರು ಹೊರಸಿನ ಮೇಲೆ ಮಲಗಿದ್ದರು. ಆ ಚಿಕ್ಕ ಕೋಣೆಯಲ್ಲಿಯೇ ಮತ್ತೊಂದು ಹಾಸಿಗೆ ಅವರ ಧರ್ಮಪತ್ನಿಯವರದ್ದಾಗಿತ್ತು. ಅವರ ಹೆಸರು ಸಿದ್ದಮ್ಮಾ ಅತಿ ದೀರ್ಘಾಯುಷಿಗಳಾದ ಇವರಿಬ್ಬರು ಮಾಗಿದ ಮಾವಿನ ಹಣ್ಣಿನಂತೆ ನನಗೆ ಕಂಡರು. ನಾನು ಅವರಿಗೆ ಪಾಟೀಲರ ಬಗ್ಗೆ ನಿಮಗೆ ಗೊತ್ತಿದ್ದಷ್ಟು ತಿಳಿಸಿರಿ ಎಂದು ಕೇಳಿದೆನು. ಅವರು ಕ್ಷೀಣಸ್ವರದಲ್ಲಿ "ಬಾಲ್ಯದಿಂದಲೂ ಅವರನ್ನು ನಾನು ಬಲ್ಲೆನು. ಚುರುಕು ಸ್ವಭಾವದವರು, ಸ್ಪಷ್ಟವಾದಿಗಳು, ಪ್ರಗತಿಪರ ವಿಚಾರದವರಾಗಿದ್ದರು ಎಂದು ಹೇಳಿದರು.

1952ರ ಸುಮಾರಿಗೆ ಹಣಮಂತ ದೇವರ ಗುಡಿಯಲ್ಲಿ ಹರಿಜನರಿಗೆ ಪ್ರವೇಶ ದೊರಕಿಸಿದರು. ಬೇಮಳಖೇಡದ ಉರಿಲಿಂಗಪೆದ್ದಿ ಮಠದ ಸಿ.ಜಿ. ಸ್ವಾಮಿಗಳು ಹಾಗೂ ನಮ್ಮೂರಿನ ಅನೇಕ ಹರಿಜನರು ಪ್ರವೇಶ

ಪಡೆದರು. ಆ ಸಂದರ್ಭದಲ್ಲಿ ವಿ.ಎನ್. ಪಾಟೀಲರು ಜನರನ್ನುದ್ದೇಶಿಸಿ ಮಾಡಿದ ಭಾಷಣ ಜನರ ಮೇಲೆ ಅಗಾಧ ಪರಿಣಾಮ ಬೀರಿತು. ಮಹಾತ್ಮಗಾಂಧಿ, ಬಸವೇಶ್ವರರು, ಪುರಂದರದಾಸರ ವಚನಗಳನ್ನು ಪಾಟೀಲರು ಉದ್ಧರಿಸುತ್ತ ಊರ ಹೊರಗಿರುವವರು ಹೊಲೆಯರಲ್ಲ. ನೀತಿಮಾರ್ಗ ಬಿಟ್ಟು ನಡೆಯುವವನೇ ಹೊಲೆಯ. ತಾಯಿತಂದೆ, ಗುರುಹಿರಿಯರನ್ನು ಗೌರವಿಸದವನೇ ಹೊಲೆಯ ಇಂಥವರು ಊರೊಳಗಿಲ್ಲವೆ ? ಎಂದು ಪ್ರಶ್ನಿಸಿದರು. ಸಂಪ್ರದಾಯವಾದಿಗಳು ಇವರ ಪ್ರಶ್ನೆಗಳಿಗೆ ನಿರುತ್ತರರಾದರು. ಇವರ ಮಾತುಗಳಿಗೆ ಯಾರೂ ಎದುರಾಡಲಿಲ್ಲ. ನನಗೆ ಮಾತ್ರ ಅವರ ಮಾತುಗಳು ಹಿಡಿಸಿದವು. ಅವರ ಮಾತುಗಳು ಕೇಳಿ ಬಹಳಷ್ಟು ಜನರು ತಲೆ ದೂಗಿದರು" ಎಂದು ಹೇಳಿದರು. ಸಿ.ಜಿ. ಸ್ವಾಮಿಗಳು ಕೂಡ ಮಾತಾಡಿದರು. "ನಾವೆಲ್ಲರೂ ದೇವರ ಮಕ್ಕಳೆಂದು ಹೇಳುತ್ತೇವೆ. ಅಂದ ಬಳಿಕ ದೇವರ ಮಕ್ಕಳಲ್ಲಿ ತಾರತಮ್ಯವೇಕೆ ಮಾಡುವಿರಿ ? ಪ್ರಾಣಿ ಪಕ್ಷಿಗಳಿಗೂ ಮುಟ್ಟುವಿರಿ. ಆದರೆ ಮನುಷ್ಯರಿಗೆ ಮುಟ್ಟಿಸಿಕೊಳ್ಳಲು ಹಿಂಜರಿದು ಜಿಗುಪ್ಸೆ ಪಡುವಿರೇಕೆ ? ಹೀಗಾದರೆ ನಾವು ಹಿಂದುಗಳೆಂದು ಹೇಳುವದು ಹೇಗೆ ? ಬೇರೆ ಧರ್ಮದಲ್ಲಿ ಹೋದರೆ ನಮಗೆ ಗೌರವಿಸುತ್ತೀರಿ. ಈ ರೀತಿ ನೀವು ಭಾವಿಸಿದರೆ ಹಿಂದೂ ಧರ್ಮವೇ ನಾಶವಾಗುವುದು. ಅಸ್ಪೃಶ್ಯತೆ ಅಳಿದರೆ ಹಿಂದೂ ಧರ್ಮ ಉಳಿಯುವದೆಂದು ಹೇಳಿದರು. ಬಂದವರೆಲ್ಲರೂ ಪಾಟೀಲರಿಗೂ, ಸ್ವಾಮಿಗಳಿಗೂ ಜಯಘೋಷ ಮಾಡಿದರು." ಎಂದು ಹೇಳಿದರು. (ಆ ಸಂದರ್ಭದಲ್ಲಿ ನಾನು ಕೂಡ ಸಭೆಯಲ್ಲಿದ್ದೆನು.)

ಭೀಮಷಾ ಕನ್ನಾ ಅವರ ಸೊಸೆ ವಿಮಲಾಬಾಯಿ ಅತ್ತೆಮಾವರ ಸೇವೆ ಮಾಡುತ್ತಲಿದ್ದಾಳೆ. ಇವಳು ಬಸ್ವಣಪ್ಪ ಕಲ್ಯಾಣಿ ಶಿಕ್ಷಕರ ಮಗಳು. ಹೆತ್ತ ತಾಯಿಯಂತೆ ಈ ಇಬ್ಬರನ್ನು ಶಿಶುವಿನೋಪಾದಿ ಸಂರಕ್ಷಣೆ ಮಾಡುತ್ತಿರುವುದನ್ನು ನೋಡಿ ದಂಗಾದೆನು! ಸಾಕ್ಷಾತ್ ಇವಳು ಹೇಮರೆಡ್ಡಿ ಮಲ್ಲಮ್ಮನ ಪರಮಾವತಾರಿ ಎಂದೇ ಹೇಳಬೇಕಾಗಿದೆ. ಆಕೆಯ ಪತಿ

ಚಂದ್ರಶೆಟ್ಟಿ ಭಕ್ತ ಪುಂಡಲಿಕನಂತೆ ಕಂಡನು. ಅವರಿಬ್ಬರೂ ಇಂದಿನ ಯುವಕ-ಯುವತಿಯರಿಗೆ ಮಾದರಿಯಾಗಿದ್ದಾರೆ. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ವೃದ್ಧರ ಸ್ಥಿತಿ ಅಧೋಗತಿಯಾಗಿದೆ. ಅಪರೂಪಕ್ಕೊಬ್ಬರು ಇಂಥ ದಂಪತಿಗಳು ಸಿಗುತ್ತಾರೆ!

ಚುನಾವಣಾ ಕಣ :

"ಹೊತ್ತಾರೆ ಎದ್ದು ಕಣ್ ಹೊಸೆಯುತ್ತ ಎನ್ನ ಒಡಲಿಗೆ ಎನ್ನ ಒಡವೆಗೆ ಎನ್ನ ಮಡದಿ ಮಕ್ಕಳಿಗೆಂದು ಕುದಿದೆನಾದಡೆ ಎನ್ನ ಮನಕ್ಕೆ ಮನವೇ ಸಾಕ್ಷಿ..." ಎಂಬ ಬಸವಣ್ಣನವರ ಈ ನುಡಿಗಳು ರಾಜಕಾರಣಿಗಳಿಗೆ ಮಾರ್ಗದರ್ಶಕವಾಗಿವೆಯೆಂದು ಬಿಜಾಪುರದ ಜ್ಞಾನಯೋಗಾಶ್ರಮದ ಪೂಜ್ಯ ಮಲ್ಲಿಕಾರ್ಜುನ ಸ್ವಾಮಿಗಳು ಹೇಳುತ್ತಿದ್ದರು. ದೇಶ ಸೇವೆ ಮಾಡುವವನು ನಿಸ್ವಾರ್ಥಿಯಾಗಿರಬೇಕು. ದೀನ-ದಲಿತರ ಬಡವರ ಸೇವಕನಾಗಿರಬೇಕು. ತನ್ನ ಸರ್ವಸ್ವವನ್ನು ದೇಶಕ್ಕಾಗಿ ಮುಡುಪಾಗಿಡಬೇಕು ಎಂದು ಬಸವಣ್ಣನವರು ಹೇಳಿದ್ದಾರೆ.

ಆದರೆ ಇಂದಿನ ಚುನಾವಣೆಗಳು ಅಪವೌಲ್ಯಗೊಂಡಿವೆ. ಸ್ವಾರ್ಥಿಗಳು ಧನ ಸಂಪಾದನೆಯ ಉದ್ದೇಶವಿಟ್ಟುಕೊಂಡು ಚುನಾವಣೆ ಕಣದಲ್ಲಿ ನಿಲ್ಲುತ್ತಾರೆ. ಮತದಾರರಿಗೆ ಹಣದ ಆಸೆ ತೋರಿಸಿ ಆರಿಸಿ ಬರುತ್ತಾರೆ. ಓಟಿನ ಬೆಲೆ ಅರಿಯದ ಜನರು ಇಂಥ ಮೋಸಗಾರರಿಗೆ ಮತ ಕೊಟ್ಟು ಗೆಲ್ಲಿಸುತ್ತಾರೆ. ಇಂಥವರಿಂದ ನಮ್ಮ ಸಿರಿಸಂಪತ್ತುಳ್ಳ ದೇಶ ಇಂದು ಬಡರಾಷ್ಟ್ರವಾಗಿದೆ.

ವಿ.ಎನ್. ಪಾಟೀಲರ ಹಿರಿಯ ಮಗ ವಿಜಯಕುಮಾರರು ಐನೂಲಿಯಲ್ಲಿ ಇರುತ್ತಾರೆ. ಅವರನ್ನು ಕಾಣಲು ನಾನು ಹೋದೆನು. ತಂದೆಯವರ ಚುನಾವಣೆಗಳ ವಿಷಯವಾಗಿ ತಿಳಿಸಲು ಕೇಳಿದೆ. ಅವರು ಹೇಳಿದ ಸಾರಾಂಶ ಹೀಗಿದೆ ಬೆಂಗಳೂರಿನಲ್ಲಿ ಅವರ ತಂದೆಯವರು ವಕೀಲಿ ವೃತ್ತಿ ಕೈಗೊಂಡಿದ್ದರು. ಪಾಟೀಲರ ಚಿಕ್ಕಪ್ಪನವರಾದ

ಗಿರಿಯಪ್ಪಗೌಡರು ಪಾಟೀಲರನ್ನು ಮೀನಕೇರಿಗೆ ಬರಲು ತಿಳಿಸಿದರು. ಪಾಟೀಲರಿಗೆ ರಾಜಕೀಯದಲ್ಲಿ ಹೆಚ್ಚು ಆಸಕ್ತಿಯಿದ್ದ ಕಾರಣ 1957ರ ಸಾರ್ವತ್ರಿಕ ಚುನಾವಣೆಯಲ್ಲಿ ಸ್ಪರ್ಧಿಸಲು ಹೇಳಿದರು. ಗಿರಿಯಪ್ಪಗೌಡರ ಉದ್ದೇಶವು ತಮ್ಮ ಅಣ್ಣನ ಮಗ ಜನಸೇವಕನಾಗಬೇಕೆಂಬುದೇ ಆಗಿತ್ತು. ಹುಮನಾಬಾದ ಕ್ಷೇತ್ರದಿಂದ ಕಮ್ಯುನಿಷ್ಟ ಪಕ್ಷದ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸಿದರು. ನೂರಾರು ಜನ ಅವರನ್ನು ಚುನಾವಣೆಯಲ್ಲಿ ಗೆಲ್ಲಿಸಲು ಶ್ರಮಿಸಿದರು. ಹುಮನಾಬಾದ ಹತ್ತಿರ ಪಾಟೀಲರ ವಾಹನವು ಅಪಘಾತಕ್ಕೀಡಾಗಿ ಕಾಲಿನ ಮೂಳೆ ಮುರಿಯಿತು. ಬಹಳ ದಿನ ಆಸ್ಪತ್ರೆಯಲ್ಲಿ ಇದ್ದು ಶುಶ್ರೂಷೆ ಪಡೆದರು. ಇದರಿಂದಾಗಿ ಚುನಾವಣಾ ಪ್ರಚಾರಕ್ಕೆ ಅಡೆತಡೆಯಾಗಿ ಸೋಲುಂಟಾಯಿತು. ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಗೋಪಾಲರಾವ ಮುಡಬಿಯವರು ಆರಿಸಿ ಬಂದರು.

ಎರಡನೇ ಸಾರ್ವತ್ರಿಕ ಚುನಾವಣೆ 1962ರಲ್ಲಿ ನಡೆಯಿತು. ಮತ್ತೆ ಕಮ್ಯುನಿಷ್ಟ ಸಿ.ಪಿ.ಐ. ಪಕ್ಷದ ಅಭ್ಯರ್ಥಿಯಾಗಿ ಪಾಟೀಲರು ನಿಂತರು. ಗಿಡದ ಹೆಸರಿನ ಮೇಲೆ ಹಣ್ಣು ಮಾರುವಂತೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಯಾರೇ ನಿಂತರೂ ಆಗ ಆರಿಸಿ ಬರುತ್ತಿದ್ದರು. ಕಮ್ಯುನಿಷ್ಟ ಪಕ್ಷ ಈ ಭಾಗದಲ್ಲಿ ತೀರ ಹೊಸದಾಗಿತ್ತು. ಮತ್ತೆ ಪಾಟೀಲರು ಸೋತರು. ಕಾಂಗ್ರೆಸ್ ಅಭ್ಯರ್ಥಿಯಾದ ಅನ್ನಪೂರ್ಣಬಾಯಿ ಆಯ್ಕೆಯಾದರು.

'ಸೋಲು ಗೆಲುವಿಗೆ ಸೋಪಾನ'ವೆಂಬ ಮಾತನ್ನರಿತ ಪಾಟೀಲರು ಪುನಃ ಚುನಾವಣೆಯಲ್ಲಿ ನಿಂತರು. ಏಕಾಂಗಿವೀರರಾದ ಪಾಟೀಲರು ಸ್ವಸಾಮರ್ಥ್ಯದಿಂದ ಮೂರನೇ ಸಲ ಸ್ಪರ್ಧಿಸಿದರು. ಇವರ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ನರೇಂದ್ರ ಖೇಣಿಯವರನ್ನು ಸೋಲಿಸಿ ಬೀದರ ಜಿಲ್ಲೆಯಲ್ಲಿ ಪ್ರಪ್ರಥಮ ಸಲ ಕಮ್ಯುನಿಷ್ಟ ಪಕ್ಷದ ಶಾಸಕರಾದರು. ಈ ಐದು ವರ್ಷದ ಅವಧಿಯಲ್ಲಿ ಅನೇಕ ಜನಹಿತದ ಕಾರ್ಯಗಳನ್ನು ಮಾಡಿ ಜನರ ಮನಸ್ಸನ್ನು ಗೆದ್ದರು. ಈ ಕಾರಣಗಳಿಂದ ಮತ್ತೆ 1967ರ ಚುನಾವಣೆಯಲ್ಲಿ ಹುಮನಾಬಾದ ಕ್ಷೇತ್ರದ ಶಾಸಕರಾಗಿ, ಕಾಂಗ್ರೆಸ್ ಅಭ್ಯರ್ಥಿ ಬಸವರಾಜ

ಪಾಟೀಲ ಹುಮನಾಬಾದ ಇವರನ್ನು ಸೋಲಿಸಿ ಪುನಃ ಗೆದ್ದು ಬಂದರು. ಹೀಗೆ ಸತತ 10 ವರ್ಷ ಇವರು ವಿಧಾನಸಭೆಯಲ್ಲಿ ಮಾಡಿದ ಭಾಷಣಗಳು ವಿಧಾನಸಭೆಯ ಗ್ರಂಥಾಲಯದಲ್ಲಿ ಸಂಗ್ರಹಿಸಲಾಗಿದೆ. (ಈ ಭಾಷಣಗಳ ಕೆಲವು ತುಣುಕುಗಳು ಪುಸ್ತಕದ ಕೊನೆಯ ಪುಟಗಳಲ್ಲಿ ಕಾಣಬಹುದು).

ಪಾರಮಾರ್ಥದೆಡೆಗೆ :

ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು
ದೊರೆತುದು ಹಸಾದವೆಂದುಣ್ಣು ಗೊಣಗಿಡದೆ
ಧರಿಸು ಲೋಕದಭರವ ಪರಮಾರ್ಥವನು ಬಿಡದೆ
ಹೊರಡು ಕರೆಬರಲ್ ಅಳದೆ ಮಂಕುತಿಮ್ಮ. –

ಡಿ.ವಿ.ಜಿ.

ಲೌಕಿಕ ಹಾಗೂ ಪಾರಮಾರ್ಥ ಇವೆರಡು ಒಂದೇ ನಾಣ್ಯದ ಎರಡು ಮುಖವಿದ್ದಂತೆ. ಒಂದು ಬಿಟ್ಟು ಇನ್ನೊಂದಿಲ್ಲ. ಸಮಾಜದ ಹಿತಚಿಂತನೆಯೊಂದಿಗೆ ಆತ್ಮಚಿಂತನೆ ಕೂಡ ಮುಖ್ಯ. ಶರೀರಕ್ಕಾಗಿ ಆಹಾರ–ನೀರು ಎಷ್ಟು ಅವಶ್ಯಕತೆಯಿದೆಯೋ ಅಷ್ಟೇ ಆತ್ಮಕ್ಕೆ ಧ್ಯಾನ, ಮೌನಗಳ ಅವಶ್ಯಕತೆಯಿದೆ ಎಂದು ಡಿ.ವಿ.ಜಿ. ಅಭಿಪ್ರಾಯಪಡುತ್ತಾರೆ.

ಆದರೆ, ನಾಸ್ತಿಕರು ಶರೀರ ಭೋಗಕ್ಕಷ್ಟೇ ಮಹತ್ವ ಕೊಡುತ್ತಾರೆ. ಆತ್ಮದ ಚಿಂತನೆ ಅವರಿಗೆ ಗೊತ್ತಿಲ್ಲ! ಇದರಿಂದ ಅವರು ಮಾನಸಿಕ ರೋಗಿಗಳಾಗುತ್ತಾರೆ.

ದಿನಾಂಕ : 09–12–2015ರಂದು ವಿ.ಎನ್. ಪಾಟೀಲರ ಮಗಳು ಸುಜಾತಾ ಅವರನ್ನು ಕಾಣಲು ಹೋದೆವು. ರಾತ್ರಿ 8 ಗಂಟೆಯಾಗಿತ್ತು. ನನ್ನ ಮೊಮ್ಮಗ ಸಂಗಮೇಶನು ಗಾಡಿಯ ಮೇಲೆ ಕೂಡಿಸಿಕೊಂಡು ಹೊರಟನು. ಅವರ ಮನೆಯು ಬೀದರ ನಗರದ ನ್ಯೂ ಆದರ್ಶ ಕಾಲೋನಿಯಲ್ಲಿದೆ ಎಂದು ಸುಜಾತಾರವರ ಪತಿ ಡಾ. ಕಾಶಿನಾಥ ಗುಮ್ಮಾ

ಅವರು ಫೋನಿನ ಮೂಲಕ ಮೊದಲೇ ತಿಳಿಸಿದ್ದರು. ರಾತ್ರಿಯ ಸಮಯ ಅವರ ಮನೆಯು ಬೇಗ ಸಿಗಲಿಲ್ಲ. ಕಾಶಿನಾಥ ಗುಮ್ಮಾ ನಮ್ಮನ್ನು ಕರೆದೊಯ್ಯಲು ಅಡ್ಡದಾರಿಯಲ್ಲಿ ಬಂದು ನಿಂತಿದ್ದರು. ಅವರು ನಮ್ಮನ್ನು ಮನೆಗೆ ಕರೆದೊಯ್ದರು! ನಾವು ಹೋದ ಕೂಡಲೇ ಸುಜಾತಾರವರು ಹೊರಗೆ ಬಂದು ನನ್ನ ಯೋಗಕ್ಷೇಮವನ್ನು ವಿಚಾರಿಸಿದರು. ನಂತರ ನಾನು ಅವರ ತಂದೆಯ ವಿಷಯವಾಗಿ ತಿಳಿಸಲು ವಿನಂತಿಸಿಕೊಂಡೆ. ಆಗ ಅವರು ಹೀಗೆ ಹೇಳಿದರು "ನಮ್ಮ ತಂದೆ ನಮಗೆ ಹೆಣ್ಣೆಂದು ಪರಿಗಣಿಸದೆ ಗಂಡು ಮಕ್ಕಳಂತೆ ಬೆಳೆಸಿದರು. ನಮ್ಮ ಜೊತೆ ತಮ್ಮ ಸ್ನೇಹಿತರಂತೆ ವರ್ತಿಸುತ್ತಿದ್ದರು. ನಮ್ಮ ತಾಯಿ ಚಂಗಳಮ್ಮನವರು. ಇವರಿಬ್ಬರೂ ಅನ್ಯೋನ್ಯವಾಗಿದ್ದರು. ಎಲ್ಲಿಗೆ ಹೋದರು ಇಬ್ಬರೂ ಕೂಡಿಯೇ ಹೋಗುತ್ತಿದ್ದರು. ನಮ್ಮ ತಂದೆ ಬಹಳ ಕಟ್ಟುನಿಟ್ಟಿನ ಸ್ವಭಾವದ ವ್ಯಕ್ತಿಗಳಾಗಿದ್ದರು. ಮೂಢನಂಬಿಕೆಯ ಕಡು ವಿರೋಧಿಗಳಾಗಿದ್ದರು. ದೇವರ ಅಸ್ತಿತ್ವದಲ್ಲಿ ಅವರಿಗೆ ನಂಬಿಕೆ ಇರಲಿಲ್ಲ".

ಡಾ. ಕಾಶಿನಾಥ ಗುಮ್ಮಾರವರಿಗೆ ಅವರ ಮಾವನವರಾದ ವಿ.ಎನ್. ಪಾಟೀಲರ ಬಗ್ಗೆ ನೀವು ಅರಿತಷ್ಟು ತಿಳಿಸಿರಿ ಎಂದು ಕೇಳಿದೆನು. ಆಗ ಅವರು ತಮ್ಮ ಮಾವನವರ ಪರಿಚಯ ಮಾಡಿಕೊಟ್ಟರು.

"ನಮ್ಮ ಮಾವನವರು ಹೋರಾಟಗಾರರಾಗಿದ್ದರು. ದೀನ-ದಲಿತರ ಬಗ್ಗೆ ಕಾಳಜಿ ಉಳ್ಳವರಾಗಿದ್ದರು. ಜಾತಿಭೇದ ಅವರಲ್ಲಿ ಎಳ್ಳಷ್ಟು ಇರಲಿಲ್ಲ. ಭ್ರಷ್ಟಾಚಾರದ ವಿರೋಧಿಗಳಾಗಿದ್ದರು. ಅನ್ಯಾಯ, ಅಸತ್ಯ ಕಂಡರೆ ಸಹಿಸುತ್ತಿರಲಿಲ್ಲ. ಧೈರ್ಯಶಾಲಿಗಳಾಗಿದ್ದರು. ಆತ್ಮವಿಶ್ವಾಸ ಉಳ್ಳವರಾಗಿದ್ದರು. ನ್ಯಾಯಪಕ್ಷಪಾತಿಗಳಾಗಿದ್ದರು. ಅವರ ಆರ್ಥಿಕ ಪರಿಸ್ಥಿತಿ ಕೆಟ್ಟು ಹೋಗಿದ್ದರೂ ಕೂಡ ಧನಗಳಿಸುವ ಆಸೆ ಪಡಲಿಲ್ಲ. ಅವರ ಇಬ್ಬರು ಮಕ್ಕಳು ದೊಡ್ಡ ಹುದ್ದೆಯಲ್ಲಿದ್ದರು. ಅಕಾಲ ಮರಣಕ್ಕೆ ತುತ್ತಾದ್ದರು. ಕುಟುಂಬದೊಳಗೆ ಬಿರುಕು ಬಿಟ್ಟಿತು. ಇದರಿಂದ ಅವರಿಗೆ ಮಾನಸಿಕ ಚಿಂತೆ ಹೆಚ್ಚಿತು. ರಕ್ತದೊತ್ತಡ, ಸಕ್ಕರೆ ಕಾಯಿಲೆ ಕಾಣಿಸಿಕೊಂಡವು.

ಅವರ ಆತ್ಮಕ್ಕೆ ಶಾಂತಿಯಿರಲಿಲ್ಲ. ಹೀಗೆಂದು ಡಾ. ಕಾಶಿನಾಥ ಗುಮ್ಮಾ ತಿಳಿಸಿದರು.

ಕಲಬುರಗಿಯಲ್ಲಿ ನೆಲೆಸಿದ ಮಗಳು ರೇಣುಕಾರವರ ಮನೆಯಲ್ಲಿ ಹೆಚ್ಚಾಗಿರುತ್ತಿದ್ದರು. ಅವರ ಅಳಿಯ ಎಸ್.ಎಸ್. ಪಾಟೀಲ ಇವರು ಸಹಜ ಮಾರ್ಗದ ಅನುಯಾಯಿಗಳಾಗಿದ್ದರು. ವಿ.ಎನ್. ಪಾಟೀಲರ ಮನಕ್ಕೆ ಶಾಂತಿ–ಸಮಾಧಾನ ಉಂಟಾಗಲು ಪಾರಮಾರ್ಥ ಮಾರ್ಗದೆಡೆಗೆ ಕರೆದೊಯ್ಯಬೇಕೆಂದು ಮಗಳು ಮತ್ತು ಅಳಿಯರಿಬ್ಬರು ನಿಶ್ಚಯಿಸಿದರೆಂದು ಡಾ. ಗುಮ್ಮಾರವರು ತಮ್ಮ ಹೇಳಿಕೆಯಲ್ಲಿ ತಿಳಿಸಿದರು. ಅಳಿಯ ಮತ್ತು ಮಗಳು ಪಾಟೀಲರಿಗೆ ಸಹಜ ಮಾರ್ಗದ ಪರಿಚಯ ಮಾಡಿಕೊಟ್ಟು ಅಲ್ಲಿ ಶಾಂತಿ ಮತ್ತು ಸಮಾಧಾನ ಸಿಗುತ್ತದೆ ಎಂದು ಹೇಳಿ ಅವರನ್ನು ಸಹಜ ಮಾರ್ಗಕ್ಕೆ ಕರೆದೊಯ್ದರು. ಪಾಟೀಲರು ಸಹಜ ಮಾರ್ಗದ ಅನುಯಾಯಿಗಳಾಗಿ ರಾಯಚೂರಿನ ರಾಘವೇಂದ್ರರಾವ ಅವರಿಂದ ದೀಕ್ಷೆ ಪಡೆದರು. ಆಗ ಅವರ ಚಿತ್ತ ಸಮಾಧಾನಗೊಂಡಿತು ಎಂದು ಗುಮ್ಮಾ ಅವರು ತಮ್ಮ ಮಾವನವರ ಪರಿಚಯ ಮಾಡಿಕೊಟ್ಟರು. ಸುಮಾರು ಒಂದು ತಾಸು ಅವರ ಮನೆಯಲ್ಲಿ ಕಳೆದೆವು.

ಸಹಜ ಮಾರ್ಗ ಹಾಗೂ ಲಿಂಗವಂತರ ಮಾರ್ಗ ಎರಡೂ ಒಂದಕ್ಕೊಂದು ಹೋಲುತ್ತವೆ. ಲಿಂಗವಂತರು ಇಷ್ಟಲಿಂಗದಲ್ಲಿ ತೃಪ್ತಿಯನ್ನು ಕಂಡರೆ ಸಹಜ ಮಾರ್ಗಿಗಳು ಪ್ರಾಣಲಿಂಗದಲ್ಲಿ ಆನಂದವನ್ನು ಪಡೆಯುತ್ತಾರೆ.

ಪಾಟೀಲರ ಕುಟುಂಬ :

ಸಂಸಾರದಲ್ಲಿ ಹುಟ್ಟಿದ ಬಳಿಕ ಸುಖ–ದುಃಖಗಳು ಬಂದೇ ಬರುತ್ತವೆ. ಸುಖ ಬಂದಾಗ ಹಿಗ್ಗದೆ ದುಃಖ ಬಂದಾಗ ಕುಗ್ಗದೆ ಸಮಚಿತ್ತದಿಂದ ನಡೆದುಕೊಳ್ಳಬೇಕು. ಇವುಗಳಿಂದ ತಪ್ಪಿಸಿಕೊಳ್ಳುವುದು ಯಾರಿಂದಲೂ ಸಾಧ್ಯವಿಲ್ಲ.

ಪಾಟೀಲರ ಜೀವನದಲ್ಲಿ ಸುಖಕ್ಕಿಂತಲೂ ದುಃಖಗಳೇ ಹೆಚ್ಚು ಘಟಿಸಿವೆ. ವಿ.ಎನ್. ಪಾಟೀಲರಿಗೆ ಮೂವರು ಗಂಡು ಮಕ್ಕಳು ಹಾಗೂ ಮೂವರು ಹೆಣ್ಣು ಮಕ್ಕಳು. ಮೊದಲನೆಯ ಮಗ ವಿಜಯಕುಮಾರ ಐನೂಲಿಯಲ್ಲಿ ಆದರ್ಶ ಕೃಷಿಕರಾಗಿದ್ದಾರೆ. ಎರಡನೆ ಮಗ ಕಾಶಿನಾಥ ಸಿವಿಲ್ ಇಂಜಿನಿಯರ್ ಆಗಿ ಕಾರಂಜಾ ನೀರಾವರಿ ಯೋಜನೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ದುರ್ದೈವ ಎನ್ನುವಂತೆ ಅಕಾಲ ಮರಣಕ್ಕೆ ತುತ್ತಾದರು! ಮೂರನೆ ಮಗ ಅಶೋಕ ಪಾಟೀಲ ಬಿ.ಎಸ್ಸಿ. (ಅಗ್ರಿ) ಪದವೀಧರ. ಕೃಷಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಇವರು ಕೂಡ ಅಕಾಲ ಮರಣಕ್ಕೆ ಶರಣಾದರು.

ವಿ.ಎನ್. ಪಾಟೀಲರಿಗೆ ಮೂವರು ಹೆಣ್ಣು ಮಕ್ಕಳಲ್ಲಿ ಮೊದಲನೆಯವಳು ರೇಣುಕಾ. ಇವರ ಪತಿ ಕಮಾಲಪುರದ ಶಾಂತಕುಮಾರ ಪಾಟೀಲ, ಸಿವಿಲ್ ಇಂಜಿನಿಯರ್. ಎರಡನೆ ಮಗಳು ಕಾವೇರಿ. ಇವರ ಪತಿ ವೇದಪ್ರಕಾಶ ಮುನಗಿಲ್, ಹೈದ್ರಾಬಾದಿನ ದಾಲಮಿಲ್ ಮಾಲೀಕರು. ಮೂರನೆ ಮಗಳು ಸುಜಾತಾ. ಇವರ ಪತಿ ಡಾ. ಕಾಶಿನಾಥ ಗುಮ್ಮಾ, ಔಷಧ ಶಾಸ್ತ್ರದ ಪ್ರಾಧ್ಯಾಪಕರು. ಬೀದರ ಮೆಡಿಕಲ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಪಾಟೀಲರಿಗೆ ತಮ್ಮ ಕಣ್ಣೆದುರೇ ಇಬ್ಬರು ಮಕ್ಕಳ ಸಾವನ್ನು ಕಾಣುವ ದೌರ್ಭಾಗ್ಯ ಸಂಭವಿಸಿದ್ದು ದೈವಿ ಪ್ರಕೋಪವೆನ್ನಬಹುದು.

ಸಾಯಬಣ್ಣ ಹಸರಗುಂಡಗಿ :

ದಿನಾಂಕ : 04-05-2016ರಂದು ವಿ.ಎನ್. ಪಾಟೀಲರ ಬಲಗೈಯಂತಿರುವ ಮನ್ನಾಯಖ್ಖೇಳ್ಳಿಯ ಸಾಯಬಣ್ಣ ಹಸರಗುಂಡಗಿಯವರ ಸಂದರ್ಶನಕ್ಕಾಗಿ ಹೋದೆನು. ನನ್ನೊಡನೆ ಮಿತ್ರರಾದ ಮಲ್ಲಿಕಾರ್ಜುನ ಮುಂಡಾಸೆಯವರು ಬಂದಿದ್ದರು. ನಮ್ಮನ್ನು

ಎದುರುಗೊಳ್ಳಲು ಸಾಯಬಣ್ಣನವರು ಬಸ್ಸು ನಿಲ್ದಾಣದಲ್ಲಿ ನಿಂತಿದ್ದರು.

ಸಾಯಬಣ್ಣನವರನ್ನು ನಾನು ಕಂಡದ್ದು ಇದೇ ಮೊದಲು. ಅವರನ್ನು ಕಂಡು ಸಂತಸಪಟ್ಟೆನು. ಮುಪ್ಪಿನಿಂದ ದುಡಿದುಡಿದು ಹಣ್ಣಾದ ಶರೀರ, ಅವರ ಸರಳ ವೇಷಭೂಷಣ ನನ್ನ ಮೇಲೆ ಪ್ರಭಾವ ಬೀರಿತು. ಮುಂಜಾನೆ 11 ಗಂಟೆ ಸುಮಾರಿಗೆ ಅವರ ಮನೆಗೆ ತಲುಪಿದೆವು. ಬಸವಣ್ಣನವರ ಭಾವಚಿತ್ರದಿಂದ ಅಲಂಕರಿಸಲ್ಪಟ್ಟ ಮನೆ ನೋಡಿ ನನಗೆ ಖುಷಿಯಾಯಿತು. ಇತ್ತೀಚೆಗೆ ಸುಸಜ್ಜಿತವಾಗಿ ಕಟ್ಟಿದ ಮನೆ. ನನ್ನ ಸ್ನೇಹಿತರಾದ ಮಲ್ಲಿಕಾರ್ಜುನ ಮುಂಡಾಸೆಯವರಿಗೆ ಮೊದಲಿನಿಂದಲೇ ಅವರ ಪರಿಚಯವಿತ್ತು. ಅವರು ನನಗೆ ಹೇಳಿದ್ದೇನೆಂದರೆ "ಈ ಮನೆ ಇತ್ತೀಚೆಗೆ ಕಟ್ಟಲಾಗಿದೆ. ಐವತ್ತು ವರ್ಷಗಳಿಂದ ರಾಜಕೀಯದಲ್ಲಿದ್ದರೂ ಕೂಡ ಇವರ ಮನೆಯ ಮಾಳಿಗೆ ತಗಡದಾಗಿತ್ತು. ಆದರೆ, ಇಂದು ಮಕ್ಕಳ ಗಳಿಕೆಯ ಹಣದಿಂದ ಈ ಹೊಸ ಮನೆ ಕಟ್ಟಿಸಿದ್ದಾರೆ ಎಂದು ಹೇಳಿದರು. ಸಂದರ್ಶನಕ್ಕಾಗಿ ಬಂದ ನಾನು ಅವರಿಂದ ಕೆಲವು ಮಾಹಿತಿಯನ್ನು ಪಡೆದೆನು.

ಪ್ರಶ್ನೆ : ನಿಮ್ಮ ಮನೆತನದ ಹೆಸರು ಹಸರಗುಂಡಿಗೆ ಹೇಗೆ ಬಂತು ?

ಉತ್ತರ : ಚಿಂಚೋಳಿ ತಾಲೂಕಿನಲ್ಲಿ ಹಸರಗುಂಡಿಗೆಯೆಂಬ ಗ್ರಾಮವಿದೆ. ನಮ್ಮ ಹಿರಿಯರು ಅಲ್ಲಿಂದ ಇಲ್ಲಿಗೆ ವಲಸೆ ಬಂದರಂತೆ. ಆದ್ದರಿಂದ ಆ ಊರಿನ ಹೆಸರೇ ನಮ್ಮ ಮನೆತನಕ್ಕೆ ಬಂದಿದೆ.

ಪ್ರಶ್ನೆ : ನಿವೇನಾದರೂ ಆಸ್ತಿ ಸಂಪಾದಿಸಿದ್ದೀರಾ ?

ಉತ್ತರ : ನನ್ನ ಕೈಯಿಂದ ನಾನೇನು ಸಂಪಾದಿಸಿ ಆಸ್ತಿ ಮಾಡಿಲ್ಲ. ದೀನ-ದಲಿತ, ಬಡವರ ಸೇವೆಯಲ್ಲಿಯೇ ಕಾಲ ಕಳೆದಿದ್ದೇನೆ. ಹಿರಿಯರು ಗಳಿಸಿದ ಜಮೀನಿನಲ್ಲಿಯ ಸ್ವಲ್ಪ ಭಾಗ ಮಾರಾಟ ಮಾಡಿದ್ದೇನೆ.

ಪ್ರಶ್ನೆ : ಕಮ್ಯುನಿಷ್ಟ ಪಕ್ಷದಲ್ಲಿ ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದೀರಿ ?

ಉತ್ತರ : ಸುಮಾರು 50 ವರ್ಷಗಳಿಂದ ಕಮ್ಯುನಿಷ್ಟ ಪಕ್ಷದ ಉಪಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೇನೆ. ವಿ.ಎನ್. ಪಾಟೀಲರ ಪ್ರೇರಣೆಯಿಂದ ಪಾರ್ಟಿ ಕೆಲಸದಲ್ಲಿ ತೊಡಗಿದ್ದೇನೆ. ಯಾವ ಆಸೆ, ಆಮಿಷಗಳಿಗೂ ಒಳಗಾಗದೇ ನಾನು ಒಂದೇ ಪಕ್ಷದಲ್ಲಿ ಇದ್ದು ಬಡ ಕಾರ್ಮಿಕರ ಸೇವೆ ಮಾಡುತ್ತಿದ್ದೇನೆ.

ಪ್ರಶ್ನೆ : ವಿ.ಎನ್. ಪಾಟೀಲರ ಹೋರಾಟದ ವಿಷಯ ತಿಳಿಸಿರಿ?

ಉತ್ತರ : ವಿ.ಎನ್. ಪಾಟೀಲರು 1957ರಲ್ಲಿ ಭಾರತೀಯ ಕಮ್ಯುನಿಷ್ಟ ಪಕ್ಷದ ಬೀದರ ಜಿಲ್ಲೆಯ ಕಾರ್ಯದರ್ಶಿಯಾಗಿದ್ದರು. 1957ರಲ್ಲಿ ಸಾರ್ವತ್ರಿಕ ಚುನಾವಣೆ ಘೋಷಣೆಯಾಯಿತು. ಆಗ ವಿ.ಎನ್. ಪಾಟೀಲರು ಬೆಂಗಳೂರಿನ ಉಚ್ಚ ನ್ಯಾಯಾಲಯದಲ್ಲಿ ವಕೀಲರಾಗಿದ್ದರು. ಇವರು ಚುನಾವಣೆಯಲ್ಲಿ ಶಾಸಕ ಸ್ಥಾನಕ್ಕೆ ಹುಮನಾಬಾದ ಚುನಾವಣಾ ಕ್ಷೇತ್ರದಿಂದ ಕಮ್ಯುನಿಷ್ಟ ಪಕ್ಷ ಸಿ.ಪಿ.ಆಯ್.ದಿಂದ ಸ್ಪರ್ಧಿಸಿದರು. ಕಾಂಗ್ರೆಸ್ ಪಕ್ಷದಿಂದ ಗೋಪಾಲರಾವ ಮುಡಬಿಯವರು ಸ್ಪರ್ಧಿಸಿದ್ದರು. ಆವಾಗ ಕಾಂಗ್ರೆಸ್ ಪಕ್ಷದ ಚುನಾವಣೆ ಚಿನ್ಹೆ ಎರಡೆತ್ತಿನ ಜೋಡಿಯಾಗಿತ್ತು. ಗೋಪಾಲರಾವ ಮುಡಬಿಯವರು ಚುನಾವಣೆಯಲ್ಲಿ ಗೆದ್ದರು. ವಿ.ಎನ್. ಪಾಟೀಲರಿಗೆ ಸೋಲುಂಟಾಯಿತು.

'ಸೋಲು ಗೆಲುವಿನ ಸೋಪಾನ'ವೆನ್ನುವಂತೆ 1962ರ ಮಹಾಚುನಾವಣೆಯಲ್ಲಿ ಮತ್ತೆ ಸ್ಪರ್ಧಿಸಿದರು. ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಾಗಿ ಬಸವಕಲ್ಯಾಣದ ಅನ್ನಪೂರ್ಣಬಾಯಿ ಸ್ಪರ್ಧಿಸಿದರು.

ಆಗ ಬಸವಕಲ್ಯಾಣ ತಾಲೂಕು ಆಗಿರಲಿಲ್ಲ. ಅದು ಹುಮನಾಬಾದ ಚುನಾವಣಾ ಕ್ಷೇತ್ರದಲ್ಲಿಯೇ ಬರುತ್ತಿತ್ತು. ಎರಡನೇ ಸಲವೂ ಮತ್ತೇ ಅವರಿಗೆ ಸೋಲಾಯಿತು. ಕಾಂಗ್ರೆಸ್ ಗೆಲುವು ಸಾಧಿಸಿತು. ಎಡಬಿಡದೆ ಮತ್ತೇ ಮೂರನೆ ಸಲ 1967ರ ಚುನಾವಣೆಗೆ ನಿಂತರು. ಆಗ ಕಾಂಗ್ರೆಸ್ ಅಭ್ಯರ್ಥಿಯಾಗಿ ನರೇಂದ್ರ ಖೇಣಿ ಸ್ಪರ್ಧಿಸಿದರೆ, ಸ್ವತಂತ್ರ ಅಭ್ಯರ್ಥಿಯಾಗಿ ಬಸವರಾಜ ಪಾಟೀಲ ಹುಮನಾಬಾದ ಸ್ಪರ್ಧಿಸಿದರು. ಇವರಿಬ್ಬರನ್ನು ಸೋಲಿಸಿ ವಿ.ಎನ್. ಪಾಟೀಲರು ಗೆದ್ದರು. ಆವಾಗ ಕಾಂಗ್ರೆಸ್ ಪಾರ್ಟಿಯ ಚುನಾವಣೆ ಚಿನ್ಹೆ ಆಕಳು ಮತ್ತು ಅದರ ಕರು ಆಗಿತ್ತು.

1972ರ ಮಹಾಚುನಾವಣೆಯಲ್ಲಿ ಮತ್ತೇ ಪಾಟೀಲರೇ ಆರಿಸಿ ಬಂದರು. 1978ರ ಮಹಾಚುನಾವಣೆಯಲ್ಲಿ ಜನತಾ ಪಾರ್ಟಿಯಿಂದ ಬಸವರಾಜ ಪಾಟೀಲ ಸ್ಪರ್ಧಿಸಿದರು. ವಿ.ಎನ್. ಪಾಟೀಲರು ಕೇವಲ 116 ಮತಗಳ ಅಂತರದಿಂದ ಸೋತರು. ಪಾಟೀಲರ ಪರವಾಗಿ ನಾವು ಚುನಾವಣೆ ಪ್ರಚಾರ ಮಾಡಲು ಸೈಕಲ್ ಮೇಲೆ ಸುತ್ತಾಡಿ ಮತದಾರರ ಮನ ಒಲಿಸಿಕೊಳ್ಳುತ್ತಿದ್ದೇವು. ಮನೆಯಿಂದಲೇ ರೊಟ್ಟಿ ಬುತ್ತಿ ಕಟ್ಟಿಕೊಂಡು ಹೋಗುತ್ತಿದ್ದೇವು. ಆಗ ಚುನಾವಣೆಗಳು ಈಗಿನಂತೆ ಕಲುಷಿತವಾಗಿರಲಿಲ್ಲ. ಕಮ್ಯುನಿಷ್ಟ ಪಕ್ಷದ ಪರವಾಗಿ ಪ್ರಚಾರ ಮಾಡಿದ ಕಾಮ್ರೇಡ್‌ಗಳೆಂದರೆ :

1. ಶರಣಪ್ಪ ಜುನ್ನಾ ಮೀನಕೇರಿ.
2. ವಿಠಲರಾವ ಬಡಗೇರ ಮೀನಕೇರಿ.
3. ನಾಗಶೆಟ್ಟಿ ಬಾಬಣ್ಣನವರು.
4. ಸಾಯಬಣ್ಣಾ ಹಸರಗುಂಡಗಿ.
5. ಭದ್ರಶೆಟ್ಟಿ ಪಾಟೀಲ ಬೇಮಳಖೇಡ.
6. ಶಿವಯ್ಯ ಸ್ವಾಮಿ ಬೇಮಳಖೇಡ.
7. ಜಲಾಲುದ್ದಿನ್‌ಮಿಯ್ಯಾ ಬೇಮಳಖೇಡ.
8. ಬಾಬುಮಿಯ್ಯಾ ಹವಾಲ್ದಾರ ಬೇಮಳಖೇಡ.
9. ಶಂಕರ ಘಂಟಿ, ಬೀದರ.

10. ಇನಾಯತ ಹುಸೇನ, ಬೀದರ.
11. ಅಂಬಾದಾಸ, ಬಟ್ಟೆ ಅಂಗಡಿ ಮಾಲಿಕರು, ಬೀದರ.
12. ಸುಂದರರಾಜ ಮಂಗಲಪೇಟ, ಬೀದರ.
13. ಸಂಗ್ರಾಮಪ್ಪ ಉದಗೀರ ವಕೀಲರು.
14. ಶಂಕರ ಕಮಠಾಣೆ.
15. ಈಶ್ವರ ಅಮಲಾಪೂರ.
16. ಘಾಳೆಪ್ಪಾ ಕುಂಬಾರ, ಕಮಠಾಣ.
17. ಮೆಹತಾಬಸಾಬ ಮನ್ನಾಎಖೇಳ್ಳಿ.
18. ಬಾಬುರಾವ ಹೊನ್ನಾ.
19. ರಂಗನಾಥ ಸಾಯಗಾಂವಕರ್.
20. ಝುರೆಪ್ಪಾ ಹಳ್ಳಿಖೇಡ.
21. ರಾಮಚಂದ್ರ ಉಪ್ಪಾರ.
22. ಬಸಯ್ಯಾ ಸ್ವಾಮಿ.
23. ಕಾಶಿನಾಥಸ್ವಾಮಿ ಬಸವಕಲ್ಯಾಣ.
24. ಗಣಪತಿ ಘಂಟಿ, ಬಸವಕಲ್ಯಾಣ.
25. ಶಂಕರ ದೇಶಪಾಂಡೆ ಹಳ್ಳಿಖೇಡ.
26. ಹಾವಗಿರಾವ ತಮಸಂಗೆ ದಾಡಗಿ.
27. ಕಲ್ಯಾಣರಾವ ಪಾಟೀಲ ತಳವಾಡ ಬಸವಕಲ್ಯಾಣ.
28. ದೇವೇಂದ್ರ ಪ್ರಭಾ ವಕೀಲರು ಮೊದಲಾದವರು.

ಇವರಲ್ಲದೆ ಇನ್ನೂ ಅನೇಕ ಹೋರಾಟಗಾರರು ಪಾಟೀಲರ ಎಲ್ಲ ಚುನಾವಣೆಗಳಲ್ಲಿ ಹಾಗೂ ಹೋರಾಟಗಳಲ್ಲಿ, ಚಳುವಳಿಗಳಲ್ಲಿ, ಮುಷ್ಕರಗಳಲ್ಲಿ ಜನಹಿತ ಕಾರ್ಯಗಳಲ್ಲಿ ಶ್ರಮಿಸಿದ್ದಾರೆ. ಇವರೆಲ್ಲರ ಸಂಪೂರ್ಣ ಸಹಕಾರ ಪಾಟೀಲರಿಗೆ ಇತ್ತೆಂದು ವಯೋವೃದ್ಧರಾದ ಸಾಯಬಣ್ಣ ಹಸರಗುಂಡಗಿಯವರು ತಮ್ಮ ಸ್ನೇಹಿತರನ್ನು ಸ್ಮರಿಸಿದರು.

ಪ್ರಶ್ನೆ : ಬರಗಾಲ ಸಂಭವಿಸಿದಾಗ ನಿಮ್ಮ ಪಕ್ಷದ ಪರಿಹಾರ ಕಾರ್ಯಕ್ರಮಗಳೇನಿದ್ದವು?

ಉತ್ತರ : 1972–73ರಲ್ಲಿ ಈ ಭಾಗದಲ್ಲಿ ಭಯಂಕರ ಬರಗಾಲ ಸಂಭವಿಸಿತ್ತು. ನಾವು ಸರ್ಕಾರದ ಬೆನ್ನು ಹತ್ತಿ ಹಳ್ಳಿಗಳಲ್ಲಿ ಬಾವಿ ತೋಡಿಸುವ ಕೆಲಸ ಹಾಗೂ ಹೊಲಗಳಿಗೆ ಒಡ್ಡು ಹಾಕಿಸುವುದು, ರಸ್ತೆ ನಿರ್ಮಾಣ, ಗಂಜಿಕೇಂದ್ರ ಮುಂತಾದ ಕೆಲಸಗಳು ಮಾಡಿಸಿದೆವು. ಮತ್ತೆ ಅಮೇರಿಕದ ಗೋಧಿ ಬಡಜನರಲ್ಲಿ ಹಂಚಿದೇವು. ಈ ಎಲ್ಲ ಕೆಲಸ ಪಾಟೀಲರ ನೇತೃತ್ವದಲ್ಲಿ ಮಾಡಿದೆವು.

ಪ್ರಶ್ನೆ : ತುರ್ತು ಪರಿಸ್ಥಿತಿಯ ಇಪ್ಪತ್ತು ಅಂಶ ಕಾರ್ಯಕ್ರಮದಲ್ಲಿ ನಿಮ್ಮ ಕಾಣಿಕೆ ಏನಾದರು ಇತ್ತೆ?

ಉತ್ತರ : ಸಾಕಷ್ಟು ಇತ್ತು. ಆಗ ನಮ್ಮ ನಾಯಕರಾದ ವಿ.ಎನ್. ಪಾಟೀಲರು ಹುಮನಾಬಾದ ಕ್ಷೇತ್ರದ ಶಾಸಕರಾಗಿದ್ದರು. ಇಪ್ಪತ್ತು ಅಂಶದ ಕಾರ್ಯಕ್ರಮದಂತೆ ಹೊಲ ಇಲ್ಲದವರಿಗೆ ಹೊಲ ಹಾಗೂ ಮನೆ ಇಲ್ಲದವರಿಗೆ ಮನೆ ಕೊಡಿಸುವ ಕಾರ್ಯಗಳಲ್ಲಿ ನಾವು ನೆರವಾದೆವು.

ಶ್ರೀಮಂತರು ಅಕ್ರಮವಾಗಿ ಬಡವರ ಒಡವೆ, ವಸ್ತುಗಳನ್ನು ಗಿರವಿ ಇಟ್ಟುಕೊಳ್ಳುತ್ತಿದ್ದರು. ಅಸಲಿಗೆ ಚಕ್ರಬಡ್ಡಿ ಇರುತ್ತಿತ್ತು. ಈ ಸುಲಿಗೆಯನ್ನು ತಪ್ಪಿಸಲು ಗಿರವಿಯಿಟ್ಟ ಆಸ್ತಿಯನ್ನು ಅವರವರಿಗೆ ಹಿಂತಿರುಗಿಸುವಂತೆ ಮಾಡಿದೆವು.

ಇನಾಮಿ ಜಮೀನನ್ನು 'ಊಳುವವನೇ ಭೂಮಿಯ ಒಡೆಯ' ಎನ್ನುವ ಕಾಯ್ದೆಯಂತೆ 'ಟೆನೆಂಟ'ದಾರರಿಗೆ ಭೂಮಿಯ ಹಕ್ಕು ದೊರಕಿಸಿಕೊಟ್ಟೆವು.

ಭೀಮಯ್ಯಾ ತಹಸೀಲ್ದಾರವರ ನೇತೃತ್ವದಲ್ಲಿ ಸಾವಿರಾರು ಎಕರೆ ಜಮೀನು ಕಾಸ್ತು ಮಾಡಿದವರಿಗೆ ಕೊಡಿಸಿದೆವು. ಹಾಗೂ ಅವರಿಗೆ ಸಾಗುವಳಿ

ಪತ್ರ ಕೊಡಲಾಯಿತು. ಆಗ ಬೀದರನಲ್ಲಿ ಕೋಟಿಲಿಂಗನಗೌಡ ಸಹಾಯಕ ಜಿಲ್ಲಾಧಿಕಾರಿಯಾಗಿದ್ದರು. ಅವರಿಗೂ ವಿ.ಎನ್. ಪಾಟೀಲರಿಗೂ ಸ್ನೇಹ ಸಂಬಂಧವಿತ್ತು. ಬ್ರಹ್ಮದತ್ತ ಎನ್ನುವ ಎ.ಸಿ. ಕಟ್ಟುನಿಟ್ಟಿನ ಕಾನೂನು ಪಾಲಕರಾಗಿದ್ದರು. ಬಂಡವಾಳಶಾಹಿಗಳೂ, ಶೋಷಕರು ಇವರ ಹೆಸರು ಕೇಳಿದರೆ ಭಯಭೀತರಾಗುತ್ತಿದ್ದರು. ಇದೇ ಸಂದರ್ಭದಲ್ಲಿ ವಿರೋಧ ಪಕ್ಷದವರ ಹೇಳಿಕೆಯಿಂದ ತುರ್ತು ಪರಿಸ್ಥಿತಿಯ ಕಾಯ್ದೆಯಂತೆ ಸರ್ಕಾರ ನನಗೆ ಕೆಲವು ದಿನ ಜೈಲಿಗೆ ಹಾಕಿತು. ಆದರೆ, ನ್ಯಾಯಧೀಶರಾದ ಕುಂಬಾರಗೌಡರು ಎಲ್ಲವನ್ನು ಪರಿಶೀಲಿಸಿ ನನ್ನನ್ನು ಸಾರ್ವಜನಿಕ ಸೇವಕನೆಂದು ಬಿಡುಗಡೆಗೊಳಿಸಿದರು ಎಂದು ಸಾಯಬಣ್ಣ ಹೇಳಿದರು.

ಪ್ರಶ್ನೆ : ನಿಮ್ಮ ಪಕ್ಷದ ಹೋರಾಟಗಳಾವವು ?

ಉತ್ತರ : ಬೆಲೆ ಏರಿಕೆಯಿಂದ ಜನರು ತತ್ತರಿಸಿದ್ದರು. ಅವರ ಕಷ್ಟದಲ್ಲಿ ನಾವು ಭಾಗಿಯಾಗಿ ಅನೇಕ ಚಳುವಳಿಗಳನ್ನು ಮಾಡಿದೆವು. ಇದರಿಂದ ಧಾನ್ಯಗಳ ಬೆಲೆ ಏರಲಿಲ್ಲ.

ರೈತರ ಅನೇಕ ಸಮಸ್ಯೆಗಳ ಬಗ್ಗೆ ಸರ್ಕಾರ ಮೂಕಪ್ರೇಕ್ಷಕನಂತೆ ಇತ್ತು. ನಮ್ಮ ಪಕ್ಷದವರು ರೈತರ ಪರವಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಹೋರಾಟ ಮಾಡಿದರು. ರೈತರ ಮತ್ತು ಕೂಲಿ ಕಾರ್ಮಿಕರ ಹಿತರಕ್ಷಣೆ ನಾವು ಮಾಡಿದಷ್ಟು ಬೇರೆ ಯಾವುದೇ ರಾಜಕೀಯ ಪಕ್ಷ ಮಾಡಿಲ್ಲ.

ಮೊದಲು ಬಂಡವಾಳಶಾಹಿಗಳ ಸರ್ವಿಸ್‌ಗಳೇ (ಬಸ್‌ಗಳು) ಎಲ್ಲೆಡೆ ಸಂಚರಿಸುತ್ತಿದ್ದವು. ಇದರಿಂದ ಸರ್ಕಾರಕ್ಕೆ ನಷ್ಟವಾಗತೊಡಗಿತು. ಶ್ರೀಮಂತರು ಶ್ರೀಮಂತರಾಗತೊಡಗಿದರು. ಸರ್ಕಾರಿ ಬಸ್ಸುಗಳೇ ಸಂಚರಿಸಬೇಕೆಂದು ನಾವು ಮುಷ್ಕರ ಹೂಡಿದೆವು. ಇದರ ಪರಿಣಾಮದಿಂದ ಖಾಸಗಿ ಬಸ್ಸುಗಳು ಓಡುವುದು ನಿಂತು ಹೋಯಿತು.

ಕೋಮು ಸೌಹಾರ್ದ ಜನರಲ್ಲಿ ತರಲು ನಾವು ಪ್ರಯತ್ನಿಸಿದೆವು. ಊರೂರು ತಿರುಗಿ ಭಾಷಣ ಕಾರ್ಯಕ್ರಮ ಏರ್ಪಡಿಸಿದೆವು. ನಿರುದ್ಯೋಗಿ

ಪದವೀಧರರಿಗೆ ಉದ್ಯೋಗ ಭತ್ಯೆ ಕೊಡಿಸುವುದರಲ್ಲಿ ನಮ್ಮ ಪಾತ್ರ ಹೆಚ್ಚಿನದಾಗಿದೆ. ವಿಧವಾ ವೇತನ ಜಾರಿ ಮಾಡಲು ಮತ್ತು ಅವುಗಳನ್ನು ಸೂಕ್ತ ವ್ಯಕ್ತಿಗೆ ತಲುಪಿಸಲು ನಮ್ಮ ಪಕ್ಷವು ಕೆಲಸ ಮಾಡಿದೆ.

ನಾವುಗಳು ಬಿಸಿಲು, ಮಳೆ, ಚಳಿ ಗಾಳಿಗೆ ಬೆದರದೆ ಬೆಚ್ಚದೇ ಜನ ಸೇವೆ ಮಾಡಿದ್ದೇವೆ. ನಿಸ್ವಾರ್ಥದಿಂದ ದುಡಿದಿದ್ದೇವೆ. ಒಂದು ನಯಾ ಪೈಸೆ ಕೂಡ ಜನರಿಂದ ನಾವು ಪಡೆದಿಲ್ಲ ಎಂದು ಹಸರಗುಂಡಗಿಯವರು ಹೇಳಿದರು.

ಇಂದಿನ ರಾಜಕೀಯ ಪಕ್ಷದವರಲ್ಲಿ ಹಾಗೂ ಹಿಂದಿನ ರಾಜಕೀಯ ಪಕ್ಷದವರಲ್ಲಿ ಭೂಮಿ ಆಕಾಶದಷ್ಟು ಅಂತರವಿದೆ. ಸ್ವಾರ್ಥಕ್ಕಾಗಿ ರಾಜಕೀಯಕ್ಕೆ ಬಂದು ಕೋಟ್ಯಾಧೀಶರಾಗುತ್ತಿರುವುದನ್ನು ನಾವು ಇಂದು ನೋಡುತ್ತಿದ್ದೇವೆ. ರಾಜಕೀಯ ಇದೊಂದು ಹಣ ಗಳಿಸುವ ವ್ಯವಹಾರವಾಗಿದೆ. ಲಂಚ ಕೊಡುವ ತನಕ ಯಾವ ಬಡವನ ಕೆಲಸ ಆಗುವುದಿಲ್ಲವೆಂದು ಎಲ್ಲರಿಗೂ ಇದು ತಿಳಿದ ವಿಷಯವಾಗಿದೆ.

ಪ್ರಶ್ನೆ : ನಿಮ್ಮಿಂದ ಜನರಿಗೆ ಸಾಕಷ್ಟು ಸೇವೆಯಾಗಿದೆ. ಆದರೂ ನಿಮ್ಮ ಪಕ್ಷ ಚುನಾವಣೆಯಲ್ಲಿ ಏಕೆ ಗೆದ್ದು ಬರುವುದಿಲ್ಲ?

ಉತ್ತರ : ಈಗ ಜಾತಿವಾದ ಹೆಚ್ಚಾಗಿದೆ. ತಮ್ಮ ತಮ್ಮ ಜಾತಿಯವರನ್ನೇ ಆಯ್ಕೆ ಮಾಡುತ್ತಾರೆ. ಎರಡನೆಯದಾಗಿ ಚುನಾವಣೆಯಲ್ಲಿ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ಮತದಾರರನ್ನು ಹಣದ ಆಮಿಷ ತೋರಿಸಿ ಗೆದ್ದು ಬರುತ್ತಾರೆ. ಗುತ್ತೇದಾರಿ ಪದ್ಧತಿ ಕೂಡ ನಮಗೆ ಮಾರಕವಾಗಿದೆ. ನಾಲ್ಕನೆಯದಾಗಿ ಕೌಟುಂಬಿಕ ರಾಜಕಾರಣ ಹಿಂದಿನ ಕಾಲದಂತೆ ರಾಜನ ಮಕ್ಕಳೇ ರಾಜರಾಗುವಂತೆ ರಾಜಕಾರಣಿಗಳ ಮಕ್ಕಳೆ ರಾಜಕಾರಣಿಗಳಾಗುತ್ತಲಿದ್ದಾರೆ. ಬೇರೆಯುವರಿಗೆ ಆಸ್ಪದವೆಲ್ಲಿಯದು? ಬದ್ಧತೆಯಿಲ್ಲದ ಅವಸರವಾದಿಗಳು

ನಮ್ಮ ಪಕ್ಷದಲ್ಲಿ ಸೇರುವುದರಿಂದಲೂ ಪಕ್ಷಕ್ಕೆ ಹಾನಿಯಾಗುತ್ತಲಿದೆ. ಇವೆಲ್ಲ ಕಾರಣಗಳಿಂದ ನಮ್ಮ ಪಕ್ಷ ಬೆಳೆಯುತ್ತಿಲ್ಲ.

ಪ್ರಶ್ನೆ : ನಿಮ್ಮ ಪಕ್ಷದ ಧೋರಣೆಗಳಾವವು ?

ಉತ್ತರ : ಕಾರ್ಮಿಕರ ಹಿತ, ರೈತರ ಹಿತ, ಬಡಜನರ ಹಿತ ಹಾಗೂ ಬುದ್ಧಿಜೀವಿಗಳ ಹಿತ.. ನಮ್ಮ ಪಾರ್ಟಿ ಗೆದ್ದು ಬರಲಿಕ್ಕಿಲ್ಲ. ಆದರೆ, ನಮ್ಮ ಸಿದ್ಧಾಂತದಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಜನರು ನಮ್ಮ ಸಿದ್ಧಾಂತ ತಿಳಿದುಕೊಳ್ಳುವ ಕಾಲ ಮುಂದೆ ಬಂದೇ ಬರುತ್ತದೆ. ನಾವು ಜಿಲ್ಲೆಯಲ್ಲಿ ಮಾಡಿದ ಹೋರಾಟ ದೊಡ್ಡದು. ಬರೆದರೆ ಒಂದು ಬೃಹತ್ ಗ್ರಂಥವಾಗುತ್ತದೆ. ಸಂಕ್ಷಿಪ್ತವಾಗಿ ನಿಮಗೆ ನಾನು ತಿಳಿಸಿದ್ದೇನೆ ಎಂದು ಸಾಯಬಣ್ಣ ಹಸರಗುಂಡಗಿಯವರು ಹೇಳಿದರು.

ಪ್ರಶ್ನೆ : ಪಾಟೀಲರ ಬಗ್ಗೆ ನಿಮ್ಮ ಅಭಿಪ್ರಾಯವೇನು ?

ಉತ್ತರ : ಪಾಟೀಲರಲ್ಲಿ ಪ್ರತಿಕಾರ ಭಾವನೆ ಇದ್ದಿಲ್ಲ. ದಲಿತ ಮತ್ತು ಬಡವರ ಮೇಲೆ ಸಹಾನುಭೂತಿ ಇತ್ತು. ತಮ್ಮಲ್ಲಿ ಒಂದು ರೊಟ್ಟಿ ಇದ್ದರೆ ಅರ್ಧರೊಟ್ಟಿ ಇನ್ನೊಬ್ಬರಿಗೆ ಕೊಟ್ಟು ಸಂತಸ ಪಡುತ್ತಿದ್ದರು. ಶುದ್ಧ ಸಸ್ಯಹಾರಿ, ಡ್ರಿಂಕ್ಸ್ ಮಾಡುತ್ತಿರಲಿಲ್ಲ, ಏಕಪತ್ನಿ ವ್ರತಸ್ಥರು.

ಪ್ರಶ್ನೆ : ಮೀನಕೇರಿ ಜನರಿಗೆ ಪಾಟೀಲರ ಬಗ್ಗೆ ಅಸಮಾಧಾನವಿದೆ ಎಂದು ಹೇಳುತ್ತಾರೆ ಏಕೆ ?

ಉತ್ತರ : ದೀಪದ ಕೆಳಗೆ ಕತ್ತಲೆ ಇದ್ದಂತೆ ಜನ್ಮವೆತ್ತಿದ ಗ್ರಾಮದ ಜನರ ಮೇಲೆ ಅದೇ ಊರಿನ ವ್ಯಕ್ತಿಯ ಪ್ರಭಾವವಿರುವುದಿಲ್ಲ. ವಿರೋಧ ಪಕ್ಷದ ಶಾಸಕರಾಗಿದ್ದ ಕಾರಣ ಜನರಿಗೆ ಉದ್ಯೋಗ ದೊರಕಿಸಿಕೊಡುವ ಕೆಲಸ, ವರ್ಗ

ಮಾಡಿಸಿಕೊಡುವ ಕೆಲಸ, ದಲ್ಲಾಳಿ ಮಾಡುವ ಕೆಲಸ ಅವರಿಂದ ಆಗುತ್ತಿರಲಿಲ್ಲ. ಇದರಿಂದ ಜನರು ಅಸಮಾಧಾನ ಪಟ್ಟಿರಬಹುದು. ಆದರೆ, ಶಾಸಕರಾಗಿ ಮಾಡಿದ ಸಾರ್ವತ್ರಿಕ ಕೆಲಸಗಳು ಬಹಳ. ಈ ರೀತಿ ಪಾಟೀಲರ ವಿಷಯುವಾಗಿ ಸಾಯುಬಣ್ಣ ಹಸರಗುಂಡಗಿಯುವರು ತಮ್ಮ ಮೆಚ್ಚುಗೆಯುಲ್ಲಿ ವ್ಯಕ್ತಪಡಿಸಿದರು. (ಇಷ್ಟರಲ್ಲಿಯೇ ಅವರು ತೀರಿಕೊಂಡರು)

ಕಾಮ್ರೇಡ್ ಮೆಹತಾಬ ಸಾಬರ ಭೇಟಿ :

ಸಾಯಬಣ್ಣನವರೊಡನೆ ಸಂದರ್ಶನ ಮುಗಿದ ನಂತರ ಅದೇ ಊರಿನಲ್ಲಿರುವ ಮೆಹತಾಬಸಾಬರೊಡನೆ ಮಾತಾಡಬೇಕೆಂದು ನಾನು ಮತ್ತು ಮಲ್ಲಿಕಾರ್ಜುನ ಮುಂಡಾಸೆಯವರು ಕೂಡಿ ಹೊರಟೆವು. ಬಿಸಿಲಿನ ತಾಪ ಹೆಚ್ಚಿತ್ತು. ಅವರ ಮನೆ ಬೇಗ ಸಿಗಲಿಲ್ಲ. ಕೊನೆಗೆ ಒಬ್ಬರು ಅವರ ಮನೆ ತೋರಿಸಿದರು.

ಮನೆ ಬಹಳ ಚಿಕ್ಕದು. ಅವರ ಮಗ ಮನೆಯೊಳಗೆ ಬರಲು ಒತ್ತಾಯಿಸಿದ. ಆದರೆ, ನಾವು ಹೊಸ್ತಿಲ ಹೊರಗೆ ನಿಂತು ಅವರ ತಂದೆಯ ಬಗ್ಗೆ ವಿಚಾರಿಸಿದೆವು. ಚಾಂಗಲೇರಿಗೆ ಹೋಗಿದ್ದಾರೆಂದು ಹೇಳಿದನು. 'ಬಂದ ದಾರಿಗೆ ಸುಂಕವಿಲ್ಲ'ವೆಂದು ನಿರಾಶರಾಗಿ ಬೀದರಗೆ ಬಂದೆವು. ದಿನಾಂಕ : 12-05-2016ರಂದು ನಮಗೆ ಮೆಹತಾಬ ಸಾಬರ ನೆನಪು ಬಂತು. ಮುಂಡಾಸೆಯವರು ನನಗೆ ಅವರ ಫೋನಿನ ಸಂಪರ್ಕ ಮಾಡಿಕೊಟ್ಟರು.

ಪ್ರಶ್ನೆ : ಪಾಟೀಲರ ವ್ಯಕ್ತಿತ್ವದ ಬಗ್ಗೆ ವಿವರಿಸಿರಿ ?

ಉತ್ತರ : ಪಾಟೀಲರು ಸೆಕ್ಯುಲರ್ ವ್ಯಕ್ತಿಗಳಾಗಿದ್ದರು. ಜಾತಿಯ ಸೊಂಕು ಅವರಿಗೆ ತಗಲಿರಲಿಲ್ಲ. ಅವರು ನನ್ನನ್ನು ತನ್ನ ಮಗನಂತೆ ನೋಡಿಕೊಂಡರು. ನಾನು ಶಾಲೆ

ಕಲಿತಿಲ್ಲ. ಅವರ ಸಂಪರ್ಕದಿಂದ ಕನ್ನಡ ಭಾಷೆ ಓದುವುದನ್ನು, ಭಾಷಣ ಮಾಡುವುದನ್ನು ಕಲಿತೆ. ಅವರು ಎಲ್ಲಿಗೆ ಹೋದರು ನನಗೆ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ದೂರದೂರದ ಪ್ರವಾಸ ಮಾಡಿದೆನು. ದೇಶ ನೋಡು, ಕೋಶ ಓದು ಎನ್ನುವಂತೆ ನನ್ನ ಸಾಮಾನ್ಯ ಜ್ಞಾನವನ್ನು ಹೆಚ್ಚಿಸಿಕೊಂಡೆ. ಕಲ್ಕತ್ತಾ, ಬಾಂಬೆ ಮತ್ತು ಬೆಂಗಳೂರು ಮುಂತಾದ ರಾಜಧಾನಿಗಳಿಗೆ ಹೋಗುವ ಅವಕಾಶ ದೊರೆಯಿತು.

ಪ್ರಶ್ನೆ : ಇಂದಿನ ರಾಜಕಾರಣದ ಬಗ್ಗೆ ನಿಮ್ಮ ಅನಿಸಿಕೆ ತಿಳಿಸಿರಿ.

ಉತ್ತರ : ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಮಾಯವಾಗಿದೆ. ಅದರ ಬದಲಾಗಿ ಮಜಾ ಪ್ರಭುತ್ವ ಬಂದು ಬಿಟ್ಟಿದೆ. ಚುನಾವಣಾ ಪದ್ಧತಿ ಸರಿಯಿಲ್ಲ. ಧಾಬಾ, ಸಂಸ್ಕೃತಿ ಬಂದು ಬಿಟ್ಟಿದೆ, ಮದ್ಯ, ಮಾಂಸದ ಜೋರಿನಿಂದ ಅಭ್ಯರ್ಥಿಗಳ ಆಯ್ಕೆ ನಡೆದಿದೆ. ಆಯ್ಕೆಗೊಂಡು ಹೋದವರು ರಾಜ್ಯದ ಬೊಕ್ಕಸವನ್ನು ಲೂಟ್-ಖಸೋಟ್ ಮಾಡುತ್ತಿದ್ದಾರೆ. ಭ್ರಷ್ಟಾಚಾರ ಹೆಚ್ಚಾಗಿದೆ. ನಮ್ಮ ಪಕ್ಷ ಬಡವರ ಪಕ್ಷವಾಗಿದೆ. ಕೋಟ್ಯಾಂತರ ರೂಪಾಯಿ ಖರ್ಚು ಮಾಡುವ ಶಕ್ತಿ ನಮ್ಮ ಪಕ್ಷಕ್ಕಿಲ್ಲ.

ಪ್ರಶ್ನೆ : ನೀವು ಇತ್ತೀಚಿನ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದೀರಾ ?

ಉತ್ತರ : ತಾಲೂಕಾ ಪಂಚಾಯತನಲ್ಲಿ ನಾನು ಸ್ಪರ್ಧಿಸಿದ್ದೆ. ಇಡೀ ಜೀವಮಾನ ಬಡವರ ಸೇವೆಯಲ್ಲಿ ಕಳೆದೆನು. ನನಗೆ ಕೇವಲ 150 ಮತಗಳು ಬಂದವು. ನನ್ನ ಪ್ರತಿಸ್ಪರ್ಧಿಗಳು ಒಂದೊಂದು ಮತಕ್ಕೆ 500 ರೂಪಾಯಿ ಕೊಟ್ಟು ಮತ ಖರೀದಿ ಮಾಡಿದ್ದಾರೆ. ಇದರಿಂದ ಸೋತೆನು.

ಪ್ರಶ್ನೆ : ಮತದಾರರು ಹೀಗೇಕೆ ವರ್ತಿಸುತ್ತಾರೆ ?

ಉತ್ತರ : ಬಸವಣ್ಣನವರ ನಾಡಿನಲ್ಲಿ ಕೋಮುವಾದ ಬೆಳೆಯುತ್ತಿದೆ. ಕುಲಕ್ಕೊಂದು ಸಂಘಗಳು ತಲೆಯೆತ್ತುತ್ತಿವೆ. ಇದರಿಂದ ದೇಶಕ್ಕೆ ಅಪಾಯವಿದೆ. ದೇಶದ ಚಿಂತೆಯನ್ನು ಬಿಟ್ಟು ತಮ್ಮ ತಮ್ಮ ಕೋಮುಗಳ ಸಂಘಟನೆಯಲ್ಲಿ ಜನರು ತೊಡಗಿದ್ದಾರೆ. ಸತ್ಯವಂತರಿಗೆ, ದೇಶಭಕ್ತರಿಗೆ ಶಾಸನ ಸಭೆಗಳಲ್ಲಿ ಸ್ಥಾನವಿಲ್ಲದಂತೆ ಆಗಿದೆ. ಬಂಡವಾಳಶಾಹಿಗಳೇ ಆರಿಸಿ ಬರುತ್ತಾರೆ.

ಪ್ರಶ್ನೆ : ನಿಮ್ಮ ಉಪಜೀವನ ಹೇಗೆ ನಡೆದಿದೆ ?

ಉತ್ತರ : ಕಟ್ಟಿಗೆ ಅಡ್ಡಾ ಇದೆ. ಇದರ ಮೇಲೆಯೇ ನನ್ನ ಉಪಜೀವನ ನಡೆದಿದೆ. ಈವಾಗ ನನ್ನ ಆರೋಗ್ಯ ಚೆನ್ನಾಗಿಲ್ಲ. ನನ್ನ ಮಕ್ಕಳೇ ವ್ಯವಹಾರ ನಡೆಸುತ್ತಿದ್ದಾರೆ. ಮಕ್ಕಳೆಲ್ಲರೂ ನನ್ನ ಸುದೈವಕ್ಕೆ ಒಳ್ಳೆಯವರೇ ಇದ್ದಾರೆ. ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ನಾನು ಹೇಳಿದ ಮಾತು ಮೀರುವುದಿಲ್ಲ.

ಪ್ರಶ್ನೆ : ನೀವು ಪಕ್ಷಾಂತರ ಮಾಡಿದ್ದೀರಾ ?

ಉತ್ತರ : ನಾನು ಕಮ್ಯುನಿಷ್ಟ ಪಕ್ಷ ಬಿಟ್ಟು ಇನ್ನೊಂದು ಪಕ್ಷಕ್ಕೆ ಹೋಗಿಲ್ಲ. ಆದರೆ ನಾನು ಕೆಲವು ಕಾರಣಗಳಿಂದ ಸಿ.ಪಿ.ಎಂ. ಪಕ್ಷದಲ್ಲಿ ಸೇರಿದ್ದೆ. ಮತ್ತೆ ಪುನಃ ನನ್ನ ಮಾತೃಪಕ್ಷವಾದ ಸಿ.ಪಿ.ಐ.ಗೆ ಬಂದಿದ್ದೇನೆ. ನಾನು ಸಾಯುವವರೆಗೂ ಇದೇ ಪಕ್ಷದಲ್ಲಿ ದುಡಿಯುತ್ತೇನೆ ಎಂದು ಹೇಳಿದರು.

ಮೆಹತಾಬಸಾಬರ ಮಾತು ಕಠೋರವೆನಿಸಿದರೂ ಸತ್ಯದಿಂದ ಕೂಡಿದ್ದವು. ದೇಶದ ಹಿತಕ್ಕಾಗಿ ಇವರ ಮಾತುಗಳು ಸಂಜೀವಿನಿಯಂತೆ ನಮಗೆ ಕಂಡು ಬಂದವು. (ಇಷ್ಟರಲ್ಲಿಯೇ ಇವರು ಕೂಡ ತೀರಿಕೊಂಡರು)

ಕಾಮ್ರೇಡ್ ರಂಗನಾಥರಾವ ಸಾಯಗಾಂವಕರ್ :

ಕನ್ನಡಿಯ ನೋಡುವ ಅಣ್ಣಗಳಿರಾ, ಜಂಗಮವ ನೋಡಿರೆ;
ಜಂಗಮದೊಳಗೆ ಲಿಂಗಯ್ಯ ಸನ್ನಹಿತವಾಗಿಪ್ಪ;
'ಸ್ಥಾವರ ಜಂಗಮ ಒಂದೇ' ಎಂದುದು ಕೂಡಲಸಂಗನ ವಚನ.

ಬಸವಣ್ಣನವರು ಈ ವಚನದಲ್ಲಿ ಕನ್ನಡಿಯನ್ನು ಇಷ್ಟಲಿಂಗಕ್ಕೆ ಹೋಲಿಸಿದ್ದಾರೆ. ಜಂಗಮವೆಂದರೆ ಸಮಾಜ. ಇವೆರಡರಲ್ಲಿ ಯಾವ ವ್ಯತ್ಯಾಸವಿಲ್ಲವೆಂದು ಸಮಾಜದಲ್ಲಿಯೆ ದೇವರಿದ್ದಾನೆ ಎಂದು ಬಸವಣ್ಣನವರ ವಿಚಾರವಾಗಿದೆ. ಜಂಗಮ ಸೇವೆ ಮಾಡಿದರೆ ಲಿಂಗಯ್ಯನ ಸೇವೆ ಮಾಡಿದಂತೆ. ಇದು ಜನಸೇವೆಯೆ ಜನಾರ್ಧನನ ಸೇವೆಯೆಂಬ ಅರ್ಥಕೊಡುತ್ತದೆ. ಕಾಣದ ದೇವರನ್ನು ಪೂಜಿಸುವುದಕ್ಕಿಂತ ಕಣ್ಣಿಗೆ ಕಾಣುತ್ತಿರುವ ಜೀವಿಗಳ ಸೇವೆ ಮಾಡುವುದು ಶ್ರೇಯಸ್ಕರವೆಂದು ಸ್ವಾಮಿ ವಿವೇಕಾನಂದರು ಕೂಡಾ ಹೇಳಿದ್ದಾರೆ.

ಬಡವರ ಸೇವೆ ಮಾಡುವ ನೆಪದಲ್ಲಿ ನಮ್ಮ ದೇಶದ ಬಹುಪಾಲು ಮುಖಂಡರು ಕುಬೇರರಾಗಿದ್ದಾರೆ. ಆದರೆ, ಕೆಲವೇ ಜನ ದೇಶಭಕ್ತರು ಮೇಣದ ಬತ್ತಿಯಂತೆ ತಮ್ಮ ಮೈ ಸುಟ್ಟುಕೊಂಡು ಇತರರಿಗೆ ಬೆಳಕಾಗಿದ್ದಾರೆ. ಲಾಲ ಬಹಾದ್ದೂರ ಶಾಸ್ತ್ರೀ, ಎಸ್. ನಿಜಲಿಂಗಪ್ಪ ಮುಂತಾದವರು. ಇಂಥವರ ಸಾಲಿನಲ್ಲಿ ರಂಗನಾಥರಾವ ಸಾಯಗಾಂವಕರ್ ಬರುತ್ತಾರೆ. ಅವರ ಬಗ್ಗೆ ಅದೇ ಊರಿನ ಯಶವಂತರಾವ ಸಾಯಗಾಂವಕರ್ ಬರೆದ ಹಿಂದಿ ಲೇಖನದ ಸಾರಾಂಶ ಹೀಗಿದೆ :

ಅವರು ಜನಿಸಿದ್ದು ಭಾಲ್ಕಿ ತಾಲೂಕಿನ ಸಾಯಗಾಂವ ಎಂಬ ಗ್ರಾಮದಲ್ಲಿ. ತಂದೆ ಕಿಶನರಾವ. ಕುಲಕರ್ಣಿ ಮನೆತನದವರು. ರಂಗನಾಥರಾವ ಚಿಕ್ಕವರಿದ್ದಾಗಲೇ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದರು. ಮುಂದೆ ಮಾಣಿಕ ನಗರದ ಮಾಣಿಕಪ್ರಭುಗಳ ಹತ್ತಿರ ಬಾಲಕನನ್ನು ಕರೆದುಕೊಂಡು ಹೋದಾಗ ತಾಯಿಯಿಲ್ಲದ ತಬ್ಬಲಿ ಮಗುವನ್ನು ಕಂಡು ಕಣ್ಣೀರು ಸುರಿಸಿದರು. ಮಗುವಿನ ಯೋಗಕ್ಷೇಮ

ತಾವೇ ನೋಡಿಕೊಳ್ಳುವೆವೆಂದು ಹೇಳಿದರು. ಆಗ ತಂದೆ ಕಿಶನರಾವ ಅವರಿಗೆ ಮಹದಾನಂದವಾಯಿತು. ನಾಲ್ಕಾರು ವರ್ಷ ಮಾಣಿಕನಗರದಲ್ಲಿ ಪ್ರಾಥಮಿಕ ಅಭ್ಯಾಸ ಮುಗಿಸಿದ ನಂತರ ತುಳಜಾಪುರ ಹತ್ತಿರವಿರುವ ಹಿಪ್ಪರಗಾಕ್ಕೆ ಹೋದರು. ಹಿಪ್ಪರಗಾದಲ್ಲಿ ಸ್ವಾಮಿ ರಮಾನಂದ ತೀರ್ಥರು ರಾಷ್ಟ್ರೀಯ ವಿದ್ಯಾಲಯ ನಡೆಸುತ್ತಿದ್ದರು. ಅವರಿಗೆ ಅಲ್ಲಿ ಪ್ರವೇಶ ದೊರೆಯಿತು. ಮುಂದೆ ಅಂಬಾಜೊಗಯ್‌ಯುಲ್ಲಿ ಅಭ್ಯಾಸ ಮುಂದುವರೆಸಿದರು. ಕಲಬುರಗಿಗೆ ರಮಾನಂದ ತೀರ್ಥರ ಸಂಗಡ ಸಾಯುಗಾಂವಕರ್ ಹೋದರು. ಆಗ ಮದನಮೋಹನ ಮಾಳವೀಯಾರವರು ಕಲಬುರಗಿಗೆ ಭೇಟಿ ಕೊಟ್ಟಿದ್ದರು. ರಮಾನಂದತೀರ್ಥರ ಶಿಫಾರಸ್ಸಿನ ಮೇರೆಗೆ ಸಾಯಗಾಂವಕರ್‌ರವರಿಗೆ ಬನಾರಸ್ ಹಿಂದು ವಿಶ್ವವಿದ್ಯಾಲಯದಲ್ಲಿ ಪ್ರವೇಶ ದೊರಕಿತು. ಅಲ್ಲಿಯೇ ಬಿ.ಎ. ಮುಗಿಸಿ, ಎಲ್.ಎಲ್.ಬಿ. ಓದಲು ಪ್ರಾರಂಭಿಸಿದರು.

ಮುಂಬಯಿಯಲ್ಲಿ ಕಾಂಗ್ರೆಸ್ ಅಧಿವೇಶನವಿತ್ತು. ರಮಾನಂದ ತೀರ್ಥರೊಂದಿಗೆ ಮುಂಬಯಿಗೆ ಬಂದರು. ಪುಣೆಯಲ್ಲಿ ಎಂ.ಎನ್. ರಾಯರವರ ಭಾಷಣ ಕೇಳಿ ಪ್ರಭಾವಿತರಾದರು. ಎಂ.ಎನ್. ರಾಯ್‌ರವರ ಗ್ರಂಥಗಳ ಅಧ್ಯಯನ ಮಾಡತೊಡಗಿದರು. ಹೈದ್ರಾಬಾದಿಗೆ ಬಂದ ನಂತರ ಸ್ವಾಮಿ ರಮಾನಂದ ತೀರ್ಥರೊಡನೆ "ಭಾರತ ಛೋಡೋ" ಚಳುವಳಿಯಲ್ಲಿ ಭಾಗವಹಿಸಿದರು. ಈ ರೀತಿ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ ನಂತರ ಎಲ್.ಎಲ್.ಬಿ. ಅಭ್ಯಾಸಕ್ಕೆ ತಿಲಾಂಜಲಿಯನ್ನಿತ್ತರು. ಭೂಗತರಾಗಿ ಕೆಲಸ ಮಾಡುತ್ತಿರುವ ಕಾರಣ ಅವರನ್ನು ಹೈದ್ರಾಬಾದ ಚಂಚಲಗೂಡಾ ಜೈಲಿನಲ್ಲಿ ಬಂಧಿಸಿದರು.

ಜೈಲಿನಿಂದ ಹೊರಬಂದ ಬಳಿಕ ಅವರನ್ನು ಸ್ವಾಮಿ ರಮಾನಂದತೀರ್ಥರ ಆದೇಶಾನುಸಾರ ಬೀದರ ಜಿಲ್ಲೆಯ ಕಾಂಗ್ರೆಸ್ ಪಕ್ಷದ ಕಾರ್ಯದಲ್ಲಿ ತೊಡಗಿದರು. ಅಷ್ಟರಲ್ಲಿ ಭಾರತ ಸ್ವತಂತ್ರವಾಯಿತು. ಆದರೆ, ನಿಜಾಮನು ಮಾತ್ರ ತಾನು ಸ್ವತಂತ್ರನೆಂದು ಘೋಷಿಸಿಕೊಂಡನು.

ಮತ್ತೆ ನಿಜಾಮನ ವಿರುದ್ಧ ಚಳುವಳಿಗಳು ಪ್ರಾರಂಭವಾದವು. ಸಶಸ್ತ್ರ ಕ್ರಾಂತಿ ನಿಜಾಮನ ವಿರುದ್ಧ ಮಾಡಬೇಕೆಂದು ನಿಶ್ಚಯಿಸಲಾಯಿತು. ಈ ಸುದ್ದಿ ನಿಜಾಮನಿಗೆ ಮುಟ್ಟಿತು. ಸಾಯಗಾಂವಕರ್‌ರವರ ಸುಳಿವು ನೀಡಿದವರಿಗೆ ಆ ಕಾಲಕ್ಕೆ ಒಂದು ಲಕ್ಷ ರೂಪಾಯಿ ಬಹುಮಾನ ಕೊಡುವುದಾಗಿ ನಿಜಾಮನು ಸಾರಿದನು. ಅವರನ್ನು ನೋಡಿದ ಕೂಡಲೇ ಗುಂಡು ಹಾರಿಸಬೇಕೆಂದು ಪೋಲಿಸರಿಗೆ ತಾಕೀತು ಕೊಡಲಾಯಿತು. ಪೋಲಿಸರ ಕಣ್ಣಿಗೆ ಮಣ್ಣೆರಚಿ ಸೋಲಾಪುರಕ್ಕೆ ಹೋದರು. ಗಡಿಭಾಗದ ಶಿಬಿರಗಳಲ್ಲಿದ್ದ ಹೋರಾಟಗಾರರಿಗೆ ಯುದ್ಧ ಕಲೆಯನ್ನು ಕಲಿಸಲು ಪ್ರಾರಂಭಿಸಿದರು.

17 ಸೆಪ್ಟೆಂಬರ್ 1948ಕ್ಕೆ ಹೈದ್ರಾಬಾದ ಸ್ವತಂತ್ರವಾಯಿತು. ಸಾಯಗಾಂವಕರ್‌ರವರು ಬೀದರ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸರ್ವಾಧಿಕಾರಿಯಾದರು. ಮುಂದೆ ಸಾಮ್ಯವಾದದ ಪ್ರಭಾವದಿಂದ ಕಾಂಗ್ರೆಸ್ ಬಿಟ್ಟು ಕಮ್ಯುನಿಷ್ಟ ಪಕ್ಷ ಸೇರಿದರು.

ಬೀದರ ಕ್ಷೇತ್ರದಿಂದ ಚುನಾವಣೆಯಲ್ಲಿ ಸ್ಪರ್ಧಿಸಿದರು. ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಮಖ್ಸೂದ ಅಲಿಖಾನ್, ಕಮ್ಯುನಿಷ್ಟ ಪಕ್ಷದ ಅಭ್ಯರ್ಥಿಯಾದ ಸಾಯಗಾಂವಕರ್‌ರವರಿಗೆ ಕೆಲವೇ ಮತಗಳ ಅಂತರದಿಂದ ಸೋಲಿಸಿದರು. ರಷ್ಯಾ ದೇಶದ ಆಮಂತ್ರಣದ ಮೇರೆಗೆ ರಷ್ಯಾಕ್ಕೆ ಹೋಗಿ ಬಂದರು. ವಿಷಮ ದಾಂಪತ್ಯದ ಕಾರಣ ದಾಂಪತ್ಯ ಸುಖದಿಂದ ವಂಚಿತರಾದರು. ಇದ್ದ ಒಬ್ಬ ಮಗ ಆತ್ಮಹತ್ಯ ಮಾಡಿಕೊಂಡನು!

ಈ ರೀತಿ ಅವರ ಬದುಕಿನ ದುರಂತ ಕಥೆ ಯಶವಂತರಾವ ಸಾಯಗಾಂವಕರ್ ತಮ್ಮ ಪುಸ್ತಕದಲ್ಲಿ ಚಿತ್ರಿಸಿದ್ದಾರೆ.

ಕಾಮ್ರೇಡ್ ಸಂಗಶೆಟ್ಟಿ ಪಾಟೀಲ ಪಾಶಾಪೂರ :

ರಂಗನಾಥ ಸಾಯಗಾಂವಕರ್ ನಿಕಟ ಸಂಗಡಿಗರಾದ ಸಂಗಶೆಟ್ಟಿ ಪಾಟೀಲ ಪಾಶಾಪೂರ ಇವರೂ ಕಮ್ಯುನಿಷ್ಟ ಪಕ್ಷದ ಕಟ್ಟರ್

ಅಭಿಮಾನಿಗಳು. ಅವರ ಸಂಗಡ ಹೋರಾಟಕ್ಕಿಳಿದವರು. ಅವರಿಂದ ಇನ್ನಿಷ್ಟು ಮಾಹಿತಿ ಸಂಗ್ರಹಿಸಬೇಕೆಂದು ಮಲ್ಲಿಕಾರ್ಜುನ ಮುಂಡಾಸೆಯವರು ನನಗೆ ಮಾರ್ಗದರ್ಶನ ಮಾಡಿದರು. ನಾವಿಬ್ಬರೂ ಕೂಡಿ ಅವರ ಹತ್ತಿರ ಹೋದೆವು. ಸಂಜೆ ನಾಲ್ಕರ ಸಮಯವಾಗಿದ್ದರೂ ಬಿಸಿಲಿನ ಝಳ ತನ್ನ ಪ್ರತಾಪವನ್ನು ತೋರಿಸುತ್ತಿತ್ತು. ಬೀದರಿನ ಹಳೆಯ ಬಸ್ ನಿಲ್ದಾಣದಲ್ಲಿ ಅವರು ನಮ್ಮ ದಾರಿಯನ್ನು ಕಾಯುತ್ತಿದ್ದರು. ನಗರದಿಂದ ಬಹುದೂರವಿರುವ ಅವರ ಮನೆಗೆ ಹೋಗಲು ನಮಗೆ ಕಷ್ಟವಾಗಬಹುದೆಂದು ತಿಳಿದು ಅವರೇ ಬೀದರನ ಹಳೆ ಬಸ್ ನಿಲ್ದಾಣಕ್ಕೆ ಬಂದಿದ್ದರು.

ಅವರೊಡನೆ ಸಾಯಗಾಂವಕರ್ ವಿಷಯದಲ್ಲಿ ಚರ್ಚಿಸಿದೆವು. ಅವರು ನಮ್ಮನ್ನು ಹೌಸಿಂಗ್ ಬೋರ್ಡ್ ಎಲ್.ಐ.ಜಿ. ಕಾಲೋನಿಗೆ ಕರೆದೊಯ್ದರು. ರಂಗನಾಥರಾವ ಸಾಯಗಾಂವಕರ್‌ರವರು ತಮ್ಮ ಅಂತ್ಯಕಾಲದಲ್ಲಿ ಮೈಗೆ ಬೆಂಕಿ ಹಚ್ಚಿಕೊಂಡು ಸತ್ತ ಬಾಡಿಗೆ ಮನೆಯನ್ನು ತೋರಿಸಿದರು. ಜೀವಮಾನವೆಲ್ಲ ಬಡರೈತರ ಮತ್ತು ಕಾರ್ಮಿಕರ ಹಿತಕ್ಕಾಗಿ ಶ್ರಮಿಸಿದವರ ಅಂತ್ಯ ಹೀಗಾಗಬೇಕೆ? ನನ್ನ ಮನಸ್ಸು ನೊಂದಿತು. ಅವರ ಮನೆಯ ಸುತ್ತಲಿನ ಜನರು ಅವರು ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ನಮ್ಮ ಮುಂದೆ ತಮ್ಮ ಸಹಾನುಭೂತಿ ವ್ಯಕ್ತಪಡಿಸಿದರು.

ರೈತ ಚಳುವಳಿ ಬಗ್ಗೆ ತಿಳಿಸಲು ನಾನು ಸಂಗಶೆಟ್ಟಿ ಪಾಟೀಲರಿಗೆ ವಿನಂತಿಸಿಕೊಂಡೆನು. ಅವರು ಹೀಗೆ ವಿವರಿಸಿದರು. “ಕಾಂಗ್ರೆಸ್ ಪಕ್ಷದ ಹೊರತಾಗಿ ಜಿಲ್ಲೆಯ ಎಲ್ಲಾ ಪ್ರಗತಿಪರ ವಿಚಾರದವರು ಒಂದುಗೂಡಿದೆವು. ಅದರ ನೇತೃತ್ವವನ್ನು ಸಾಯಗಾಂವಕರರೇ ವಹಿಸಿದ್ದರು. ನಮ್ಮ ಬೇಡಿಕೆಗಳೇನೆಂದರೆ :

ಕಬ್ಬು ಬೆಳೆಗಾರರಿಗೆ ವೈಜ್ಞಾನಿಕ ಬೆಲೆ ಕೊಡಬೇಕು.

2. ಸ್ವಯಂಚಾಲಿತ ಯಂತ್ರದ ಮೂಲಕ ಕಬ್ಬಿನ ತೂಕ ಮಾಡಬೇಕು.

3. ಕೂಲಿಕಾರರಿಗೆ ಸರ್ಕಾರವು ನಿಗದಿಪಡಿಸಿದ ಕನಿಷ್ಟ ಕೂಲಿಯನ್ನು

ಕೊಡಬೇಕು.

ಮುಂತಾದ ಬೇಡಿಕೆಗಳಿದ್ದವು. ಜಿಲ್ಲಾಧಿಕಾರಿ ಮುಂದೆ ಇಟ್ಟೆವು. ಪರಿಣಾಮವೇನು ಆಗಲಿಲ್ಲ. ಸ್ವತಃ ನಾವೇ ಕಬ್ಬಿನ ಕಾರ್ಖಾನೆ ಮಾಲಿಕರಿಗೆ ಬುದ್ಧಿ ಕಲಿಸಬೇಕೆಂದು ಕಾರ್ಖಾನೆಗೆ ಮುತ್ತಿಗೆ ಹಾಕಿದೆವು. ಆಗ ಜಿಲ್ಲಾಧಿಕಾರಿಗಳು ಬುಳ್ಳಾ ಸುಬ್ಬರಾಯುರಿದ್ದರು. ಖಾಂಡಸಾರಿ ಕಾರಖಾನೆಯ ಮಾಲಿಕರಿಗೆ ಸಾಯಗಾಂವಕರ್‌ರವರು ಹೊಡೆದು ಅವನಿಗೆ ಕಬ್ಬಿನ ಬಂಡಿ ಮೇಲೆ ಒಂಟಿಗಾಲಿನ ಮೇಲೆ ನಿಲ್ಲಿಸಿದರು. ಅವನು ಮೂರ್ಛೆ ಹೋಗಿ ಕೆಳಗೆ ಬಿದ್ದನು. ಆಗ ನಾವೆಲ್ಲರು ಅವನು ಸತ್ತನೆಂದು ಭಾವಿಸಿದೆವು. ಕೆಲವರು ಪಲಾಯನಗೊಂಡರು. ಅಷ್ಟರಲ್ಲಿ ಪೋಲಿಸ ಅಧಿಕಾರಿ ಬಂದರು. ಸಾಯಗಾಂವಕರರು ಅವರಿಗೆ ಕಾನೂನನ್ನು ನೀವು ಜಾರಿಗೆ ತರದಿದ್ದಕ್ಕಾಗಿ ನಾವು ಹೀಗೆ ಮಾಡಬೇಕಾಯಿತ್ತೆಂದು ಉತ್ತರಿಸಿದರು. ಆಗ ಅಧಿಕಾರಿ ನಿರುತ್ತರನಾದನು.

ಈ ಚಳುವಳಿಗಳು 1979ರಿಂದ 1982ರವರೆಗೆ ನಡೆದವು. ಕರ್ನಾಟಕಾದ್ಯಂತ ರೈತರೆಲ್ಲರೂ ಬೆಂಗಳೂರಿಗೆ ಬಂದು ವಿಧಾನಸೌಧಕ್ಕೆ ಮುತ್ತಿಗೆ ಹಾಕಿದರು. ಆಗ ರಾಜ್ಯದ ಮುಖ್ಯಮಂತ್ರಿಗಳು ಗುಂಡುರಾವ ಆಗಿದ್ದರು. ಸುಮಾರು 8 ಲಕ್ಷ ರೈತರು ಪ್ರತಿಭಟನೆಯಲ್ಲಿ ಭಾಗವಹಿಸಿದರು. ಸರ್ಕಾರವೇ ನಡುಗಿ ಹೋಯಿತು. ಗುಂಡುರಾವ ಸರ್ಕಾರ ಬಿದ್ದು ಹೋಯಿತು!

ಚಳುವಳಿಯಲ್ಲಿ ಭಾಗವಹಿಸಿದವರೆಂದರೆ :

1. ವಿಶ್ವನಾಥ ಪಾಟೀಲ ಮೀನಕೇರಿ.
2. ರಂಗನಾಥರಾವ ಸಾಯಗಾಂವಕರ್.
3. ಸಂಗಶೆಟ್ಟಿ ಪಾಟೀಲ ಪಾಶಾಪೂರ.
4. ಡಿ. ಕಿಷ್ಟಿ ಹಳ್ಳದಕೇರಿ.
5. ಕಲ್ಯಾಣರಾವ ಮೊಳಕೇರಿ.
6. ಬಾಬುರಾವ ಗೋರಚಿಂಚೋಳಿ.

7. ಎಂ.ಎನ್. ಸುಂದರರಾಜ.

8. ದಯಾನಂದರಾವ ವಕೀಲ.

9. ಶಿವರಾಜ ಕಾಡೊದೆ.

10. ಸಂಗ್ರಾಮಪ್ಪ ಉದಗೀರೆ ಮುಂತಾದವರು.

ಪ್ರಶ್ನೆ : ಸರ್ಕಾರ ಜಾತಿಗಣತಿ ಮಾಡುತ್ತಿರುವುದು ಸರಿಯೇ ?

ಉತ್ತರ : ಸರ್ಕಾರ ಓಟ್‌ಬ್ಯಾಂಕ್ ಉದ್ದೇಶವಿಟ್ಟುಕೊಂಡು ಜಾತಿ ಗಣತಿ ಮಾಡುತ್ತಿರುವುದು ಸರಿಯಲ್ಲ. ಇದರಿಂದ ಜನರಲ್ಲಿ ಒಡಕು ಹುಟ್ಟುತ್ತದೆ. ನಮ್ಮ ಸಾಮ್ಯವಾದದ ಸಿದ್ಧಾಂತದಲ್ಲಿ ಉಳ್ಳವರದೊಂದು ಮತ್ತು ಬಡವರದೊಂದು ಎರಡೇ ಜಾತಿ. ದೇಶ ಸ್ವತಂತ್ರವಾಗಿ 69 ವರ್ಷಗಳಾದರು ಜಾತಿಯ ಭಾವನೆ ಹೆಚ್ಚೆಚ್ಚು ಬೆಳೆಯುತ್ತಲಿದೆ!

ಪ್ರಶ್ನೆ : ಸಾಯಗಾಂವಕರ್ ಸ್ವಭಾವದ ಬಗ್ಗೆ ತಿಳಿಸಿರಿ.

ಉತ್ತರ : ಇವರು ಸಮಯ ಪಾಲಕರಾಗಿದ್ದರು. ವಿ.ಎನ್. ಪಾಟೀಲರು ತಡಮಾಡಿ ಬಂದರೆ ಅವರಿಗೂ ಕೂಡ ಪ್ರಶ್ನಿಸುತ್ತಿದ್ದರು. ಅವರಲ್ಲಿ ಪ್ರಮಾಣಿಕತನವಿತ್ತು. ಶಿಸ್ತಿನ ಸಿಪಾಯಿಗಳಾಗಿದ್ದರು. ಸ್ವಾರ್ಥವು ತಿಲಮಾತ್ರವೂ ಇರಲಿಲ್ಲ. ತ್ಯಾಗಮಯ ಜೀವನ ಅವರದಾಗಿತ್ತು. ಸಿಟ್ಟು ಬಂದರೆ ಜಮದಗ್ನಿ ಅವತಾರ! ಬ್ರಾಹ್ಮಣರಾದರೂ ಕ್ಷತ್ರೀಯ ತರಹ ಹೋರಾಟದಲ್ಲಿ ಆಸಕ್ತಿ!

ಪ್ರಶ್ನೆ : ಆತ್ಮಹತ್ಯೆ ಏಕೆ ಮಾಡಿಕೊಂಡರು ?

ಉತ್ತರ : ಒಂಟಿ ಬದುಕು ಅವರದು. ಬಾಡಿಗೆ ಮನೆಯಲ್ಲಿ ವಾಸ. ವಿಷಮ ಸಂಸಾರ ಅವರದು. ಅಲ್ಲದೇ ಕಾಯಿಲೆಗಳು ಬೇರೆ. ಒಮ್ಮೆ ಪಾರ್ಶ್ವವಾಯುವಾಗಿತ್ತು. ತಾವೇ ಹೊಟ್ಟೆಯ ಮೇಲೆ ಜರುಗುತ್ತ ಫೋನಿನ ಹತ್ತಿರ ಹೋಗಿ, ಡಾಕ್ಟರ ಎ.ಎಸ್. ಪಾಟೀಲರಿಗೆ ಫೋನ ಮಾಡಿದರು.

> ಡಾಕ್ಟರ್ ಸಾಹೇಬರು ಬಂದು ಉಪಚರಿಸಿದರು. ಇದಾದ ಬಳಿಕ ಮತ್ತೆ ಎರಡು ಸಲ ಪಾರ್ಶ್ವವಾಯು ಹೊಡೆಯಿತು. ತಡೆಂಯುದ ಭೇದಿ ಪ್ರಾರಂಭವಾಯಿತು. ಸ್ವಾಭಿಮಾನಿಗಳಾದ ಇವರು ಬೇರೆಯವರಿಂದ ಸೇವೆ ಮತ್ತು ಸಹಾಯ ಮಾಡಿಸಿಕೊಳ್ಳುತ್ತಿರಲಿಲ್ಲ. ಇಂತಹ ಹೊತ್ತಿನಲ್ಲಿ ಆತ್ಮಹತ್ಯೆ ಒಂದೇ ದಾರಿ ಎಂದು ಅವರಿಗೆ ಗೋಚರಿಸಿತು.

ಮೈಯೆಲ್ಲ ಬಟ್ಟೆ ಸುತ್ತಿಕೊಂಡರು. ಮೈ ಮೇಲೆ ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡರು. ಅವರ ಪ್ರಾಣಪಕ್ಷಿ ದೇಹದ ಗೂಡಿನಿಂದ ಹಾರಿಹೋಯಿತು. ಇವರ ದುರ್ಮರಣದಿಂದ ನಗರವೇ ತಲ್ಲಣಗೊಂಡಿತು!

ಸ್ವಾತಂತ್ರ್ಯ ಹೋರಾಟಗಾರರಾದ ಕಾರಣ ಸರ್ಕಾರಿ ಗೌರವದೊಂದಿಗೆ ಗುರುದ್ವಾರ ಹತ್ತಿರವಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು. ಪತ್ರಕರ್ತರು, ನಗರದ ಗಣ್ಯರು ಆಗಮಿಸಿ ಮೃತರಿಗೆ ಶೃದ್ಧಾಂಜಲಿ ಅರ್ಪಿಸಿದರು ಎಂದು ಸಂಗಶೆಟ್ಟಿ ಪಾಟೀಲ ಹೇಳಿದರು.

ನನಗೆ ಕಂಡು ಬಂದಂತೆ ನಮ್ಮ ಜಿಲ್ಲೆಯ ಕಮ್ಯುನಿಷ್ಟ ಮುಖಂಡರು ಹಾಗೂ ಕಾರ್ಯಕರ್ತರಾದವರು ಸೇವೆಯ ನೆಪದಲ್ಲಿ ಆಸ್ತಿ ಗಳಿಸಿಲ್ಲ. ತಮ್ಮ ಕಾಯಕದೊಂದಿಗೆ ಉಳಿದ ಸಮಯವನ್ನು ಜನರ ಕಷ್ಟದಲ್ಲಿ ಭಾಗಿಯಾಗಿ ಅವರ ಕಷ್ಟವನ್ನು ಪರಿಹರಿಸುತ್ತಲಿದ್ದಾರೆ. ಅವರಲ್ಲಿ ಜಾತಿಭೇದವಿಲ್ಲ.

ರಂಗನಾಥರಾವ ಸಾಯಗಾಂವಕರ್‌ರವರು ಕ್ಷತ್ರೀಯರಂತೆ ಹೋರಾಡಿದರು. ಮನುಷ್ಯರು ಹೇಗೆ ಸತ್ತರೆಂಬುದು ಮುಖ್ಯವಲ್ಲ. ಅವರು ಹೇಗೆ ಬದುಕಿದರು ಎಂಬುದೇ ಮುಖ್ಯ. ಇವರು 75 ವರ್ಷ ಸಾರ್ಥಕ ಜೀವನವನ್ನು ಸಾಗಿಸಿ ತಮ್ಮ ಹೆಸರನ್ನು ಸ್ವಾತಂತ್ರ್ಯ ಹೋರಾಟಗಾರರ ಇತಿಹಾಸದಲ್ಲಿ ಬಿಟ್ಟು ಹೋಗಿದ್ದಾರೆ!

ಬಡವರ ಬಂಧು :

ಕಲಬುರ್ಗಿಯಲ್ಲಿ ವಾಸ ಮಾಡಿದ ಕಮ್ಲಾಪುರದವರಾದ ಎಸ್.ಎಸ್. ಪಾಟೀಲರ ಮನೆಗೆ ಹೋಗಬೇಕಾಗಿತ್ತು. ಎಸ್.ಎಸ್. ಪಾಟೀಲರು ವಿಶ್ವನಾಥ ಪಾಟೀಲರ ಭಾವನಪರು ಮತ್ತು ಅಳಿಯಂದಿರು ಆಗಿರುತ್ತಾರೆ. ಎಸ್.ಎಸ್. ಪಾಟೀಲರ ಧರ್ಮಪತ್ನಿ ರೇಣುಕಾರವರು ವಿ.ಎನ್. ಪಾಟೀಲರ ಹಿರಿಯ ಮಗಳು. ಕಲಬುರ್ಗಿಯಲ್ಲಿ ಅವರ ಮನೆ ಹುಡುಕುವುದು ಸಾಧ್ಯವಾಗುತ್ತಿರಲಿಲ್ಲ. ನನ್ನ ಪರಮ ಮಿತ್ರರಾದ ಪ್ರಾಧ್ಯಾಪಕ ವಿಜಯಕುಮಾರ ಪರೂತೆಯವರಿಗೆ ದೂರವಾಣಿ ಮೂಲಕ ಸಂಪರ್ಕಿಸಿದೆನು. ಅವರು ನನ್ನನ್ನು ಪಾಟೀಲರ ಮನೆಗೆ ಕರೆದುಕೊಂಡು ಹೋದರು. ರೇಣುಕಾ ನಮ್ಮ ದಾರಿ ನೋಡುತ್ತಿದ್ದರು. ನಮ್ಮನ್ನು ಕಂಡೊಡನೆ ಹರ್ಷಚಿತ್ತರಾಗಿ ಸ್ವಾಗತಿಸಿದರು. ಅವರು ತಮ್ಮ ತಂದೆಯ ಬಗ್ಗೆ ಹೇಳಿದ ಅನಿಸಿಕೆಗಳು ಹೀಗಿವೆ :

"ನಮ್ಮ ತಂದೆಯವರು ಬೆಂಗಳೂರಿನ ಉಚ್ಚ ನ್ಯಾಯಾಲಯದಲ್ಲಿ ವಕೀಲಿ ವೃತ್ತಿಯಲ್ಲಿದ್ದರೂ ಹಣ ಸಂಪಾದಿಸಲಿಲ್ಲ. ಅದೇನು ಕಾರಣವೆಂದರೆ ಬಡವರ ವ್ಯಾಜ್ಯಗಳನ್ನು ಪುಕ್ಕಟ್ಟೆಯಾಗಿ ಪರಿಹರಿಸುತ್ತಿದ್ದರು. ಬಡವರ ಬಂಧುವಾಗಿದ್ದರು ಇಷ್ಟಲ್ಲದೆ ಫಿರ್ಯಾದುದಾರರಿಗೆ ಊಟೋಪಚಾರ ನಮ್ಮ ಮನೆಯಲ್ಲಿಯೇ ನಡೆಯುತ್ತಿತ್ತು. ನಮ್ಮ ತಾಯಿ ಚಂಗಳಮ್ಮ ಬೇಸರಪಡುತ್ತಿರಲಿಲ್ಲ" ಎಂದು ಹೇಳಿದಳು. ನಮ್ಮ ದೊಡ್ಡಪ್ಪ ವೀರಭದ್ರಪ್ಪನವರ ಎರಡುವರೆ ವರ್ಷದ ಮಗುವನ್ನು ಬೆಂಗಳೂರಿಗೆ ತಂದು ಇಟ್ಟುಕೊಂಡರು. ಚಿಕ್ಕ ಮಗುವಿದೆ ಈಗಲೇ ಬೇಡ ಎಂದು ಹೇಳಿದರೂ ಕೂಡ ನಮ್ಮ ತಂದೆ ಕೇಳಲಿಲ್ಲ. ಅಣ್ಣನ ಮಗನನ್ನು ಕಾನ್ವೆಂಟ್‌ನಲ್ಲಿ ಸೇರಿಸಿದರು. ಮುಂದೆ ಅವನು ಅಲ್ಲಿಯೇ ಶಿಕ್ಷಣ ಪಡೆದನು. ಚಿಕ್ಕಂದಿನಲ್ಲಿಯೇ ಒಳ್ಳೆಯ ಶಿಕ್ಷಣ ಕೊಡಿಸಿದ್ದಕ್ಕಾಗಿ ನಮ್ಮ ದೊಡ್ಡಪ್ಪನ ಮಗ ರಾಜಶೇಖರ ಪಾಟೀಲ ಹೃದಯರೋಗ ತಜ್ಞರಾದರು. ಸದ್ಯಕ್ಕೆ

ಬೀದರನಲ್ಲಿ ವೈದ್ಯ ವೃತ್ತಿ ಕೈಕೊಂಡಿದ್ದಾರೆ. ತಂದೆಯವರ ಹೃದಯ ವೈಶಾಲ್ಯವನ್ನು ಕುರಿತು ರೇಣುಕಾರವರು ಹೇಳಿದರು.

ನಮ್ಮ ತಂದೆಯವರ ಪ್ರಭಾವದಿಂದಲೇ ನಮ್ಮ ದೊಡ್ಡಪ್ಪನವರ ಹೆಣ್ಣು ಮಕ್ಕಳಿಗೆ ದೊಡ್ಡ ಮನೆತನದ ಸಂಬಂಧ ದೊರಕಿದೆ.

ಇಷ್ಟಾದ ನಂತರ ಅಣ್ಣ-ತಮ್ಮಂದಿರು ಬೇರೆಯಾದರು. ತಂದೆಯವರಿಗೆ ವ್ಯವಸಾಯದಲ್ಲಿ ಅನುಭವವಿರಲಿಲ್ಲ. ಆರ್ಥಿಕ ಪರಿಸ್ಥಿತಿ ಕೈಕೊಟ್ಟಿತು. ಅನೇಕ ರೋಗಗಳು ಮನೆ ಮಾಡಿದವು. ಮೀನಕೇರಿಗೆ ಬರಬೇಕಾಯಿತು. ಬೆಂಗಳೂರು ಬಿಟ್ಟು ಬರುವಾಗ ಅವರ ಸ್ನೇಹಿತರು "ನಿಮಗೆ ಮುಂದೆ ನ್ಯಾಯಾಧೀಶರಾಗುವ ಅವಕಾಶಗಳಿವೆ. ಬೆಂಗಳೂರು ಬಿಡಬೇಡಿ" ಎಂದರು. ಆದರೆ, ಅನಿವಾರ್ಯವಾಗಿ ಬೆಂಗಳೂರು ಬಿಡಬೇಕಾಯಿತು.

ಅವರ ಇಬ್ಬರು ಮಕ್ಕಳು ದೊಡ್ಡ ಹುದ್ದೆಯಲ್ಲಿದ್ದವರು ಅಕಾಲ ಮರಣಕ್ಕೀಡಾದರು. ಇದರಿಂದ ಮಾನಸಿಕವಾಗಿ ಕುಗ್ಗಿದರು. ಅವರನ್ನು ಪಾರಮಾರ್ಥದೆಡೆಗೆ ಸೆಳೆದೆವು. ಸಹಜ ಮಾರ್ಗದ ದೀಕ್ಷೆ ಕೊಡಿಸಿದೆವು. ಇದರಿಂದ ಅವರಿಗೆ ಮಾನಸಿಕ ಶಾಂತಿ ದೊರೆಯಿತು. ದಿನಾಂಕ 24 ಮಾರ್ಚ್ 1998ರಂದು ಹೃದಯಘಾತವಾಗಿ ಅಸುನೀಗಿದರು. 25 ಮಾರ್ಚ್‌ನಂದು ಅಂತ್ಯಕ್ರಿಯೆ ನೆರವೇರಿತು. ತಾಯಿ ಚಂಗಳಮ್ಮನವರು ಕೂಡ ತಂದೆಯವರಂತೆ ರೋಗಗಳಿಂದ ಬಳಲುತ್ತಿದ್ದರು. ತಂದೆ ತೀರಿಕೊಂಡ 8 ವರ್ಷದ ನಂತರ ಅವರೂ ಕೂಡ ಪ್ರಾಣ ಬಿಟ್ಟರು.

ತಾಯಿತಂದೆಯ ಸೇವೆ ಮಾಡಿದ ನನಗೆ ತೃಪ್ತಿ ಇದೆ. ಇದ್ದಾಗಲೇ ತಾಯಿತಂದೆ ಸೇವೆ ಮಾಡಬೇಕು. ಅವರು ಸತ್ತ ಮೇಲೆ ಅವರ ಫೋಟೊಗಳಿಗೆ ಪೂಜೆ ಮಾಡುವದು, ಪುಣ್ಯತಿಥಿ ಆಚರಿಸುವುದು ನನಗೆ ಸರಿಯೆನಿಸುವುದಿಲ್ಲ ಎಂದರು. ಆ ಸಂದರ್ಭದಲ್ಲಿ ನನಗೆ ಭಕ್ತ ಪುರಂದರದಾಸರ ಪದ್ಯ ನೆನಪಾಯಿತು.

ನಗೆಯು ಬರುತಿದೆ
ಎನಗೆ ನಗೆಯು ಬರುತಿದೆ
ಜಗದ ಜಾಣರೆಲ್ಲ ಹಗರಣವ ಮಾಡುವದು ಕಂಡು!
ನಗೆಯು ಬರುತಿದೆ.

ಡಂಭಾಚಾರಿಗಳನ್ನು ಕುರಿತು ಪುರಂದರದಾಸರು ಈ ಪದ್ಯದಲ್ಲಿ ವಿಡಂಬಿಸಿದ್ದಾರೆ.

ಹುಟ್ಟು ಹೋರಾಟಗಾರ :

ಗುರುಪಾದಪ್ಪ ಮಿರ್ಯಾಣ ಅವರನ್ನು ಕಾಣಬೇಕೆಂದು ಮನಸ್ಸು ಬಹುದಿವಸಗಳಿಂದ ಹಾತೊರೆಯುತ್ತಿತ್ತು. ಆ ಸುದಿನ ಬಂದೇ ಬಿಟ್ಟಿತ್ತು. ಕಲಬುರ್ಗಿಯ ಬಸವೇಶ್ವರ ನಗರದಲ್ಲಿರುವ ಅವರ ಮನೆಗೆ ನನ್ನ ತಂಗಿಯ ಮಗಳಾದ ಭಾರತಿ ಕರೆದುಕೊಂಡು ಹೋದಳು.

ಗುರುಪಾದಪ್ಪನವರು ಶರಶಯ್ಯದ ಮೇಲೆ ಮಲಗಿದ ಭೀಷ್ಮಾಚಾರ್ಯರಂತೆ ಮಂಚದ ಮೇಲೆ ಮಲಗಿರುವುನ್ನು ಕಂಡೆನು! ದುಃಖ ಉಮ್ಮಳಿಸಿ ಬಂದಿತು. ಬಾಲ್ಯದ ನೆನಪುಗಳು ಆಗ ಮರುಕಳಿಸಿದವು. ಅವರಿಂದ ನಾನು ಮಾರ್ಗದರ್ಶನ ಪಡೆದು ಈ ಸ್ಥಿತಿಗೆ ಬಂದವನು.

ತುರ್ತು ಪರಿಸ್ಥಿತಿಯ ಕಾಲದಲ್ಲಿ ಅವರು ಬೀದರ ಜಿಲ್ಲೆಯ ಯೋಜನಾ ಅಧಿಕಾರಿಗಳಾಗಿದ್ದರು. ವಿ.ಎನ್. ಪಾಟೀಲರು ಬೀದರ ಜಿಲ್ಲೆಯಲ್ಲಿ ಮಾಡಿದ ಹೋರಾಟಗಳು ಚಳುವಳಿಗಳ ಬಗ್ಗೆ ಅವರಿಗೆ ಗೊತ್ತಿತ್ತು. ಪಾಟೀಲರನ್ನು ಕುರಿತು ನಾಲ್ಕು ಮಾತು ಹೇಳಿರಿ ಅವರ ಬಗ್ಗೆ ಪುಸ್ತಕ ಬರೆಯುತ್ತಿದೇನೆ ಎಂದು ಕೇಳಿದೆನು. ಅವರು ಹೆಚ್ಚಿಗೆ ಮಾತಾಡುವ ಸ್ಥಿತಿಯಲ್ಲಿ ಇರಲಿಲ್ಲ. ಕಾರ್ಮಿಕರ ಪರವಾಗಿ, ಬಡ ರೈತರ ಪರವಾಗಿ ಶೋಷಿತರ ಪರವಾಗಿ ಹೋರಾಡಿದುದು ಹಾಗೂ ಭೂಹೀನರಿಗೆ ಭೂಮಿ ಒದಗಿಸಿಕೊಟ್ಟಿದ್ದನ್ನು ಸಂಕ್ಷಿಪ್ತವಾಗಿ ಹೇಳಿದರು. 20 ಅಂಶಗಳ ಕಾರ್ಯಕ್ರಮ

ದೇವರಾಜ ಅರಸರ ಸರ್ಕಾರ ಕೈಕೊಂಡ ಸಂದರ್ಭವನ್ನು ಇವರು ಸದುಪಯೋಗ ಪಡಿಸಿಕೊಂಡರು. ಸರ್ಕಾರಕ್ಕೆ ಬೆಂಬಲಿಸಿ ತಮ್ಮ ಉದ್ದೇಶವನ್ನು ಸಾಧಿಸಿಕೊಂಡರೆಂದು ಹೇಳಿದರು.

ಕೊನೆಗೆ ಅವರು ವಿ.ಎನ್. ಪಾಟೀಲರ ಬಗ್ಗೆ ಒಂದು ಮಾತು ಅವರ ಬಾಯಿಯಿಂದ ಹೊರಬಿತ್ತು. "ಹುಟ್ಟು ಹೋರಾಟಗಾರರು" ಎಂದು ಬಣ್ಣಿಸಿದರು. ಈ ವಾಕ್ಯ ನನಗೆ ಹಿಡಿಸಿತು. ಗುರುಪಾದಪ್ಪನವರಿಗೆ ತಮ್ಮ ಸರ್ಕಾರಿ ಸೇವೆಯಲ್ಲಿ ಯಾವುದೇ ಕಪ್ಪು ಚುಕ್ಕೆ ಅಂಟಿರಲಿಲ್ಲ. ಪರಿಶುದ್ಧ ಚಾರಿತ್ರ್ಯವುಳ್ಳವರಾಗಿದ್ದರು. "ಪ್ರಸಿದ್ಧರಾಗುವುದಕ್ಕಿಂತ ಪ್ರಾಮಾಣಿಕರಾಗುವುದೇ ಉತ್ತಮವೆಂಬ" ಮಾತು ಇವರಿಗೆ ಅಕ್ಷರಶಃ ಹೋಲುತ್ತದೆ. ಇಂದಿನ ಕಾಲದಲ್ಲಿ ಭ್ರಷ್ಟರೇ ಪ್ರಸಿದ್ಧಿ ಪಡೆಯುತ್ತಿದ್ದಾರೆ ಪ್ರಮಾಣಿಕರನ್ನು ಜನ ಗುರುತಿಸುತ್ತಿಲ್ಲ!

ಅವರಿಂದ ಬೀಳ್ಕೊಡುವಾಗ ನನ್ನ ಮನಸ್ಸಿನಲ್ಲಿ ಉದ್ಭವಿಸಿದ ವಿಚಾರಗಳೆಂದರೆ ಈ ಶರೀರವು ಬಹಳ ಹಿತಕಾರಿಯೆನ್ನುತ್ತೇವೆ ಆದರೆ ನಮಗೆ ವೃದ್ಧಾವಸ್ಥೆ ಬಂದಾಗ ಇದೇ ನಮಗೆ ಶನಿಯಾಗಿ ಕಾಡುತ್ತದೆ! ಈ ಶರೀರವು ನಮಗೆ ಮಿತ್ರನೂ ಹೌದು ಶತೃವೂ ಹೌದು, (ಅವರ ಸಂದರ್ಶನವಾದ ಕೆಲವು ದಿನಗಳ ನಂತರ ಅವರ ಜೀವವು ಕಾಯದ ಪಂಜರದಿಂದ ಹಾರಿಹೋಯಿತೆಂದು ತಿಳಿದು ಬಂತು!)

ಪಾಟೀಲರ ಅಂತಿಮ ದಿನಗಳು :

ಭರತ ಭೂಮಿ ನನ್ನ ತಾಯಿ
ನನ್ನ ಪೊರೆವ ತೊಟ್ಟಿಲು
ಜೀವನವನೆ ದೇವಿಗೆರೆವೆ
ನಿರುತೆ ಗುಡಿಯ ಕಟ್ಟಲು

ಕುವೆಂಪುರವರು ಈ ಪದ್ಯದಲ್ಲಿ ಭರತ ಭೂಮಿಯನ್ನು ತಾಯಿಗೆ ಹೋಲಿಸಿದ್ದಾರೆ. ಅದಕ್ಕಾಗಿ ತಮ್ಮ ಜೀವನವನ್ನು ಭಾರತ ಮಾತೆಯ ಸೇವೆಯಲ್ಲಿ ಸವೆಸುತ್ತೇನೆ ಎನ್ನುತ್ತಾರೆ.

ವಿ.ಎನ್. ಪಾಟೀಲರ ಅಂತಿಮ ದಿನಗಳ ಬಗ್ಗೆ ತಿಳಿದುಕೊಳ್ಳಲು ಸಾಯಬಣ್ಣ ಹಸರಗುಂಡಗಿಯವರಿಗೆ ನಾನು ಮತ್ತು ಮಲ್ಲಿಕಾರ್ಜುನ ಮುಂಡಾಸೆಯವರು ಫೋನಿನ ಮೂಲಕ ಸಂಪರ್ಕಿಸಿದೆವು. ಅವರು ಹೀಗೆ ಹೇಳಿದರು. "ವಿ.ಎನ್. ಪಾಟೀಲರ ಅಂತಿಮ ದಿನಗಳು ಅವರ ಸ್ವಗ್ರಾಮ ಮೀನಕೇರಿಯಲ್ಲಿ ಹಿರಿಯರು ಕಟ್ಟಿಸಿದ ಮನೆಯಲ್ಲೇ ಕಳೆಯಿತು. ದಿನಾಂಕ 24 ಮಾರ್ಚ್ 1998ರಲ್ಲಿ ಅವರಿಗೆ ಹೃದಯಾಘಾತವಾಗಿ ಅಸುನೀಗಿದರು. ದಿನಾಂಕ 25 ಮಾರ್ಚ 1998ರಂದು ಅವರ ಅಂತಿಮ ಯಾತ್ರೆಯಲ್ಲಿ ಬೀದರಿನ ಎಲ್ಲ ಪಕ್ಷದ ಮುಖಂಡರು ಭಾಗವಹಿಸಿದರು. ರಾಜ್ಯದ ಬೇರೆ ಬೇರೆ ಕಡೆಯಿಂದ ಶ್ರದ್ಧಾಂಜಲಿ ಸಂದೇಶಗಳು ತಲುಪಿದವು. ಅವರ ಅಂತಿಮ ಕ್ರಿಯೆ ಕಮ್ಯುನಿಷ್ಟ ಪದ್ಧತಿಯಂತೆ ಜರುಗಿತು."

ವಿ.ಎನ್. ಪಾಟೀಲರು ಕುವೆಂಪುರವರು ಹೇಳಿದಂತೆ ತಮ್ಮ ಜೀವನವನ್ನು ಭಾರತ ಮಾತೆಯ ಸೇವೆಯಲ್ಲಿಯೇ ಕಳೆದರು. ಇವರ ಸಾವು ಕೇವಲ ಕುಟುಂಬದವರಿಗಷ್ಟೇ ಅಲ್ಲ. ಇಡಿ ಕಮ್ಯುನಿಷ್ಟ ಚಳವಳಿಗೆ ಭಾರಿ ಆಘಾತ ಉಂಟಾಗಿದೆ ಎಂದು ಹೇಳಬಹುದು. 71 ವರ್ಷ ಸಾರ್ಥಕ ಜೀವನವನ್ನು ಸಾಗಿಸಿ ಇತಿಹಾಸವನ್ನು ನಿರ್ಮಿಸಿದರು. "ಜನರು ಇತಿಹಾಸವನ್ನು ಓದುತ್ತಾರೆ. ಆದರೆ, ಕೆಲವೇ ಜನರು ಮಾತ್ರ ಇತಿಹಾಸವನ್ನು ಸೃಷ್ಟಿಸುತ್ತಾರೆ". ಅಂಥವರಲ್ಲಿ ವಿ.ಎನ್. ಪಾಟೀಲರು ಒಬ್ಬರು.

ಅನುಬಂಧ :

ವಿ.ಎನ್. ಪಾಟೀಲರು ಶಾಸಕರಾಗಿ ವಿಧಾನಸಭೆಯಲ್ಲಿ ಮಾಡಿದ ಭಾಷಣಗಳು ಸವಿವರವಾಗಿ ಇಲ್ಲಿ ಕೊಡಲು ಆಗುವುದಿಲ್ಲ. ಸಂಕ್ಷಿಪ್ತವಾಗಿ ಕೊಡಲಾಗಿದೆ. ಪ್ರಮುಖ ಭಾಷಣಗಳ ವಿಷಯ

1. ಬೀದರ ಜಿಲ್ಲೆಗೆ ಹೊಸ ಕೈಗಾರಿಕೆಗಳು ತರುವ ಬಗ್ಗೆ (04–12–1972).
2. ಜೋಳದ ಬೆಳೆ ನಾಶಕ್ಕೆ ಪರಿಹಾರ.
3. ಗ್ರಾಮೀಣ ವಿದ್ಯುಚ್ಛಕ್ತಿ ಯೋಜನೆ.
4. ಪೋಲಿಸರ ಮಾಮೂಲು (16–09–1968).
5. ಎಸ್ಸೆಸ್ಸೆಲ್ಸಿ ಪರೀಕ್ಷಾ ಮೌಲ್ಯಮಾಪನ ಶಿಕ್ಷಕರ ಸಮಸ್ಯೆ (8–7–1967)
6. ಕುಡಿಯುವ ನೀರಿನ ಸಮಸ್ಯೆ.
7. ಭೂಕಂದಾಯ ಸಂಗ್ರಹ
8. ಸರ್ಕಾರಿ ಭೂಮಿ ಹಂಚಿಕೆ (29–11–1972)
9. ಮನ್ನಾಎಖೇಳ್ಳಿ ಸರ್ಕಾರಿ ಆಸ್ಪತ್ರೆ ಬೇಡಿಕೆ.
10. ಸರ್ಕಾರಿ ಆಸ್ಪತ್ರೆ, ಹುಮನಾಬಾದ.
11. ಇಲಾಖಾ ಪರೀಕ್ಷೆ ಬಡ್ತಿ.
12. ಮೈಸೂರು ವಿಶ್ವವಿದ್ಯಾಲಯ ಪ್ರಿಂಟಿಂಗ್ ಪ್ರೆಸ್ ನೌಕರ ಸಂಘದ ಪ್ರತಿನಿಧಿಗಳ ಬಗ್ಗೆ (7–12–1972)
13. ಬೀದರ ಜಿಲ್ಲೆಯ ಹರಿಜನರಿಗೆ ಭೂಮಿ ಹಂಚಿಕೆ.
14. ಬಡವರಿಗೆ ದುಡ್ಡಿಲ್ಲದೆ ನ್ಯಾಯ ದೊರಕಿಸುವ ಬಗ್ಗೆ.
15. ಸಹಕಾರಿ ಸಂಘಗಳು (15–4–1963)
16. ಲೋಕೋಪಯೋಗಿ ಇಲಾಖಾ ಬೇಡಿಕೆಗಳು (18–3–1968)
17. ಶಿಕ್ಷಣ ಇಲಾಖೆ (12–4–1973).
18. ರಾಜ್ಯದ ಆರ್ಥಿಕ ಭದ್ರತೆಗೆ ಸಲಹೆಗಳು (27–3–1972).

19. ಶಿಕ್ಷಣ ಶುಲ್ಕದಲ್ಲಿ ವಿನಾಯಿತಿ (16-12-1972).
20. ಬರ ಪರಿಹಾರ (15-12-1972)
21. ಸಾರಿಗೆ ಇಲಾಖಾ ಬೇಡಿಕೆಗಳು (28-3-1968)
22. ಸರ್ಕಾರಿ ಜಮೀನು ಹಂಚಿಕೆ ಮಸೂದೆ.
23. ಆಡಳಿತದಲ್ಲಿ ಸುಧಾರಣೆಗಳು (14-8-1972).
24. ಸರ್ಕಾರಿ ಬಜೆಟ್ ಪಟ್ಟಿಗೆ ವಿರೋಧ.
25. ದಲಿತ ಪರ ಮಸೂದೆ.
26. ಮಹಾಜನ ವರದಿ.
27. ಭೂ ಸುಧಾರಣಾ ಕಾನೂನು ತಿದ್ದುಪಡಿ.
28. ಹಿಂದುಳಿದ ಜನಗಳ ರಕ್ಷಣೆ.
29. ರೈತರಿಗೆ ಸಬ್ಸಿಡಿ ದರದಲ್ಲಿ ಕ್ರಿಮಿನಾಶಕ ಒದಗಿಸುವುದು.
30. ಅರಣ್ಯ ರಕ್ಷಣೆ.
31. ಆಹಾರ ಧಾನ್ಯದಲ್ಲಿ ಕಲಬೆರಕೆ.
32. ಏತ ನೀರಾವರಿ ಯೋಜನೆ.
33. ಬೆಳೆ ಹಾನಿಗೆ ಪರಿಹಾರ.
34. ಜೋಳದ ಬೆಳೆ ನಾಶಕ್ಕೆ ಪರಿಹಾರ (17-4-1967).
35. ಕುರಿ ಕಳ್ಳರ ಮೇಲೆ ಬಂದೋಬಸ್ತ್.
36. ಸಿಟಿ ಕಾರ್ಪೋರೇಷನ ಕಾರ್ಮಿಕರ ನೌಕರಿ ಖಾಯಂಗಾಗಿ ಆಗ್ರಹ.
37. ವಿದ್ಯುಚ್ಛಕ್ತಿ ವ್ಯವಸ್ಥೆ.
38. ಬಡವರಿಗೆ ದುಡ್ಡಿಲ್ಲದೆ ನ್ಯಾಯ ದೊರಕಿಸುವ ಬಗ್ಗೆ (29-11-1972).
39. ಇಲಾಖಾ ಪರೀಕ್ಷೆ ಮತ್ತು ವಾರ್ಷಿಕ ಬಡ್ತಿ ನೀಡುವ ಕುರಿತು (8-12-1972)

ಈ ಮೊದಲಾದ ಅನೇಕ ವಿಷಯಗಳ ಮೇಲೆ ವಿ.ಎಸ್.

ಪಾಟೀಲರು ಮಾಡಿದ ಭಾಷಣಗಳು, ಚರ್ಚೆಗಳು ಅವಲೋಕಿಸಿದರೆ ಅವರು ದೇಶದ ಬಡಜನರ ಬಗ್ಗೆ ದಲಿತರ ಬಗ್ಗೆ, ರೈತರ ಬಗ್ಗೆ, ವಿದ್ಯಾರ್ಥಿಗಳ, ಸರ್ಕಾರಿ ನೌಕರರ ಬಗ್ಗೆ, ಈ ಭಾಗದ ಅಭಿವೃದ್ಧಿಯ ಬಗ್ಗೆ, ಅವರಲ್ಲಿ ಎಂತಹ ಕಳಕಳಿ ಇತ್ತೆಂಬುದನ್ನು ತಿಳಿದುಕೊಳ್ಳಬಹುದಾಗಿದೆ.

ಅವರ ಸಲಹೆಗಳನ್ನು ಅಂದಿನ ಸರ್ಕಾರ ಅಂಗೀಕರಿಸಿದ್ದು ಇವರ ಕಾರಣದಿಂದಲೇ ಈ ಭಾಗದಲ್ಲಿ ಅನೇಕ ಜನಪರ ಕಾರ್ಯಗಳು ಜರುಗಿವೆ ಎಂದು ಹೇಳಬಹುದು. ಇವರಂಥ ಶಾಸಕರು ನಮ್ಮ ಜಿಲ್ಲೆಯಲ್ಲಿ ಮಾತ್ರವಲ್ಲ ನಮ್ಮ ರಾಜ್ಯದಲ್ಲಿ ಕಾಣುವುದು ಅಪರೂಪ. ಇವರು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಮಾಡಿದ ಉದ್ಬೋಧಕ ಭಾಷಣಗಳು ಇಂದಿನ ಶಾಸಕರಿಗೆ ಮಾದರಿಯಾಗಿವೆ. ಇವರ ಕೆಲವು ಭಾಷಣಗಳ ತುಣುಕುಗಳು ಮಾತ್ರ ಇಲ್ಲಿ ಕೊಡಲಾಗಿದೆ.

ಲೋಕೋಪಯೋಗಿ ಇಲಾಖಾ ಬೇಡಿಕೆಗಳು (18-03-1968) :

ಶ್ರೀ ವಿ.ಎಸ್. ಪಾಟೀಲ :

ಅಧ್ಯಕ್ಷ ಮಹೋದಯರೇ, ಲೋಕೋಪಯೋಗಿ ಇಲಾಖೆಗೆ ಮಂತ್ರಿಗಳು ಹೆಚ್ಚು ಹಣಬೇಕೆಂದು 92 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಬೇಡಿಕೆಯನ್ನಿಟ್ಟಿದ್ದಾರೆ. ಮೈಸೂರು ರಾಜ್ಯದಲ್ಲಿ ಆಗುವ ಇಷ್ಟು ಖರ್ಚಿನಲ್ಲಿ ಹೆಚ್ಚು ಹಣವನ್ನು ಲೋಕೋಪಯೋಗಿ ಇಲಾಖೆ ಮಂತ್ರಿಗಳೇ ನುಂಗುತ್ತಿದ್ದಾರೆ. ಇಷ್ಟು ಅವರಿಗೆ ಕೊಡುವಾಗ ಇದು ನ್ಯಾಯವಾಗಿ ಸರಿಯಾಗಿ ಖರ್ಚು ಆಗುತ್ತದೆಯೆ ? ಎಂಬುದನ್ನು ನೋಡಬೇಕು. ಈ ಇಲಾಖೆಯಿಂದ ಆಡಳಿತ ಪಕ್ಷದವರಿಗೆ ಬೇಕಾದವರಿಗೆ ಎಷ್ಟು ಅನುಕೂಲವಾಗುತ್ತಿದೆ ಎಂಬುದನ್ನು ಗಮನಿಸಬೇಕು. ಅನ್ಯಾಯ ದಬ್ಬಾಳಿಕೆ ನಡೆಯುವುದರಲ್ಲಿ ಪೋಲಿಸ್ ಇಲಾಖೆ ಖ್ಯಾತಿ ಪಡೆದರೆ ನಷ್ಟ ಮಾಡುವುದರಲ್ಲಿ ಲೋಕೋಪಯೋಗಿ ಇಲಾಖೆ ಖ್ಯಾತಿ ಪಡೆದಿದೆ ಎಂದು ಹೇಳಿದರೆ ಅತಿಶೋಕ್ತಿಯಾಗಲಾರದು. ಏಕೆಂದರೆ ಒಂದು ಕೋಟಿ

ರೂಪಾಯಿಗಳನ್ನು ಯಾವುದಾದರೂ ಒಂದು ಕೆಲಸಕ್ಕೆ 25 ಲಕ್ಷ ರೂ. ಗುತ್ತಿಗೆದಾರ, 25 ಲಕ್ಷ ಅಧಿಕಾರಿಗಳಿಗೆ ಲಂಚ ಕೊಡುವುದಕ್ಕೆ, 25 ಲಕ್ಷ ಖರ್ಚು ಮಾಡುತ್ತಾರೆ. ಈಗ 92 ಕೋಟಿ ರೂ. ಕೇಳುತ್ತಿದ್ದಾರೆ. ಇದರಲ್ಲಿ 20–30 ಕೋಟಿ ರೂಪಾಯಿ ಆದರೂ ಸದುಪಯೋಗ ಆಗುವುದೋ ಇಲ್ಲವೋ ಎಂಬ ಸಂಶಯವಿದೆ. ಈ ಇಲಾಖೆ ಮಾಡಿರುವ ರಸ್ತೆ ನಾವು ನೋಡಿದ್ದೇವೆ! ಈ ವರ್ಷ ಪ್ರಾರಂಭಿಸಿದರೆ ಅದರ ಕೆಲಸ ಎಂದೋ ಏನೋ ಮುಗಿಯುವುದು! ತಮಗೆ ಬೇಕಾದವರನ್ನು ಆರಿಸಿ ಇವರಲ್ಲಿ ವೈಯಕ್ತಿಕ ಬೀಗರು, ನೆಂಟರು ಹಾಗೂ ರಾಜಕೀಯ ಗುರು–ಶಿಷ್ಯರು ಮುಂತಾದವರುಗಳಿಗೆ ಗುತ್ತಿಗೆ ಕೊಡುತ್ತಾರೆ. ಈ ಸಂಖ್ಯೆ ಹೀಗೆ ಹೆಚ್ಚು ಬೆಳೆದು ನಿರಾಸೆ ಮೂಡದೆ ಇರದು. ಚುನಾವಣೆ ಕಾಲದಲ್ಲಿ ತಮಗೆ ಸಹಾಯ ಮಾಡಿದ ತಮ್ಮ ತಮ್ಮ ಸೋದರ ಮಾವಂದಿರು, ಸೋದರ ಅಳಿಯಂದಿರು ಮತ್ತಾರೂ ಇದ್ದರೆ ಅವರನ್ನು ಕಂಟ್ರ್ಯಾಕ್ಟರ್‌ದಾರರನ್ನಾಗಿ ಮಾಡುತ್ತಾರೆ. ಇವರೆಲ್ಲರೂ ಪಿ.ಡಬ್ಲ್ಯೂ.ಡಿ. ಮಿನಿಷ್ಟರ್ ಅವರ ಹತ್ತಿರದ ಜನರು ಇರುವುದರಿಂದ ಕಳಪೆ ಕಾಮಗಾರಿ ಆದರೂ ಕೂಡ ನಮ್ಮ ಮನುಷ್ಯನಿಂದಾಗಿದೆ ಅವನ ಮೇಲೆ ಕ್ರಮ ತೆಗೆದುಕೊಳ್ಳ ಬೇಡಿರಿ ಎಂದು ಹೇಳುತ್ತಾರೆ. ನಮ್ಮ ಮೈಸೂರು ರಾಜ್ಯದಲ್ಲಿ ಆದಂತಹ ಪ್ರೊಜೆಕ್ಟ್‌ಗಳು ಎಲ್ಲ ಕಳಪೆ ಕಾಮಗಾರಿ ಆಗಿವೆ. ಆದ್ದರಿಂದ ಸಾರ್ವಜನಿಕರ ಹಣ ನಷ್ಟವಾಗುತ್ತಿದೆ. ಇದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಹಳ್ಳಿಗಳಿಗೆ ಹಿತವಾಗುವುದಿಲ್ಲ. ಕೆಲವು ಭ್ರಷ್ಟ ಜನರ ಸುಖದ ಸಲುವಾಗಿ ದೇಶದ ದುಡ್ಡನ್ನು ನಷ್ಟ ಮಾಡಬೇಡಿರಿ ಎಂದು ಹೇಳುತ್ತಿದ್ದೇನೆ.(ವಿ.ಎನ್. ಪಾಟೀಲರು 48 ವರ್ಷಗಳ ಹಿಂದೆ ಆಡಿದ ನುಡಿಗಳು ಇಂದಿಗೂ ಕೂಡ ಅನ್ವಯಿಸುತ್ತವೆ).

ಬಡವರಿಗೆ ದುಡ್ಡಿಲ್ಲದೆ ನ್ಯಾಯ ದೊರಕಿಸುವ ವ್ಯವಸ್ಥೆ (29–11–1972):
ಶ್ರೀ ವಿ.ಎನ್. ಪಾಟೀಲ :

ಮಾನ್ಯ ಅಧ್ಯಕ್ಷರೆ, ಇದು ಕಾಂಟ್ರವರ್ಸಿಯಲ್ ಬಿಲ್ ಏನೂ ಅಲ್ಲ. ಅದಕ್ಕಾಗಿ ಎಲ್ಲರೂ ಬಹುಮಟ್ಟಿಗೆ ಒಪ್ಪುತ್ತಾರೆ. ಅನ್–ಅಪೋಜಡ್ ಆಗಿ ಅಡಾಪ್ಟ್ ಮಾಡುತ್ತಾರೆ ಎಂದು ಹೇಳಿದರೂ ಕೂಡ ಅದರಲ್ಲಿ ಕೆಲ ವಿಷಯ ಹೇಳಲಾರದೆ ಬಿಡುವುದಕ್ಕೆ ಆಗುವುದಿಲ್ಲ. ನಾನು ವಕೀಲನಾಗಿ ಕೆಲಸ ಮಾಡುವುದರಿಂದ ಈ ಕಾಯ್ದೆಯಿಂದ ಎಷ್ಟು ಜನರಿಗೆ ಲಾಭವಾಗುತ್ತದೆ ಎಂದು ಹೇಳಿದರೆ ಹೈಕೋರ್ಟಿಗೆ, ನ್ಯಾಯಾಧೀಶರಿಗೆ ಅವಮಾನ ಮಾಡುತ್ತಿದ್ದೇನೆ ಎಂದು ತಪ್ಪು ತಿಳಿದುಕೊಂಡರೂ ತಿಳಿದುಕೊಳ್ಳಬಹುದು. ದುಡ್ಡು ಇದ್ದವರಿಗೆ ಮಾತ್ರ ನ್ಯಾಯದ ಬಾಗಿಲು ತೆರೆದಿದೆ. ದುಡ್ಡಿಲ್ಲದವನಿಗೆ ನ್ಯಾಯಾಲಯಕ್ಕೆ ಹೋಗುವುದಕ್ಕೆ ಅವಕಾಶವಿಲ್ಲ ಎನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಬ್ರಿಟಿಷರ ಕಾಲದಲ್ಲಿ ನಮ್ಮ ದೇಶದಲ್ಲಿ ಬಡವರಿಗೆ ಒಂದು ರೀತಿಯ ಟ್ರೀಟಮೆಂಟ್, ಶ್ರೀಮಂತರಿಗೆ ಇನ್ನೊಂದು ರೀತಿಯ ಟ್ರೀಟಮೆಂಟ್ ಇತ್ತು. ವೈಟ್ ಕಾಲರ್ಸ್ ಕ್ಲಾಸ್, ಬ್ಯುರೋಕ್ರೆಟಿಕ್ಸ್ ಧನಿಕರು ಗುಂಪು ಕಟ್ಟುವುದಕ್ಕೆ ಅವಕಾಶವಿತ್ತು. ಸ್ವರಾಜ್ಯ ಕಟ್ಟಿದ್ದು ಬಿಳಿಯ ಕಾಲರಿನ ಜನರಲ್ಲ. ಬಡವರು ಕಟ್ಟಿದ್ದು ಅವರು ರಕ್ತ ಸುರಿಸಿದ್ದರಿಂದ ದೇಶಕ್ಕೆ ಸ್ವರಾಜ್ಯ ಬಂತು. ಸ್ವರಾಜ್ಯ ಬಂದು ಇವತ್ತಿಗೆ 25 ವರ್ಷಗಳಾದರೂ ನ್ಯಾಯ ಬಡವರಿಗೆ ಸಿಕ್ಕಿದೆಯೆ ? ಏನೂ ಇಲ್ಲ ಎಂದು ದುಃಖದಿಂದ ಹೇಳಬೇಕಾಗುತ್ತಿದೆ. ಒಬ್ಬರ ಬಾಯಲ್ಲಿ ಬೆಣ್ಣೆ ಮತ್ತೊಬ್ಬರ ಬಾಯಲ್ಲಿ ಸುಣ್ಣ ಇಡುವಂಥ ಕೆಲಸ ಮಾಡುತ್ತಿದ್ದಾರೆ ಎಂದು ನಾನು ಬೇರೆ ಪ್ಲಾಟ್‌ಫಾರ್ಮ್‌ನಲ್ಲಿ ಹೇಳಿದ್ದೇನೆ. ಸರ್ಕಾರದವರು ಇನ್ನಾದರೂ ಕಣ್ಣು ತೆರೆಯಿರಿ ಎಂದು ಹೇಳಬೇಕಾಗಿದೆ.

ಇಂದು ಆಯ್ಕೆಗೊಂಡ ಶಾಸಕರಿಗೆ ಹೀಗೆ ಮಾತಾಡುವ ಎದೆಗಾರಿಕೆ ಎಷ್ಟು ಜನರಿಗಿದೆ?

ಸಹಕಾರ ಸಂಘಗಳು (25–4–1963) :

ವಿ.ಎನ್. ಪಾಟೀಲರು ಸಹಕಾರ ಸಂಘಗಳ ಬಗ್ಗೆ ಕೇಳುತ್ತಾ, ಸದನದಲ್ಲಿ ಈ ರೀತಿ ಪ್ರಸ್ತಾಪಿಸಿದರು. ಸಹಕಾರವಿಲ್ಲದೆ ಸಂಘಗಳು ಯಶಸ್ವಿಯಾಗಿ ನಡೆಯುತ್ತಲಿಲ್ಲ. ಇದರಲ್ಲಿ ಭ್ರಷ್ಟಾಚಾರ ಹೊಕ್ಕಿರುವುದರಿಂದ ಸಂಘಗಳು ಅಸ್ತಿಪಂಜರದಂತಾಗಿವೆ. ಇಂತಹ ಸಂಘಗಳಿಂದ ಯಾರಿಗೆ ಲಾಭವಿದೆ ? ರೈತರಿಗೆ ಸಾಲದಿಂದ ಹೊಲ ಬಿಡಿಸಿಕೊಳ್ಳುವಷ್ಟು ಹಣ ಕೊಡುತ್ತಲಿಲ್ಲ. ಬಾವಿ ತೋಡಿಸಲು ಕಂತು ಹಣ ಬಿಡುಗಡೆ ಮಾಡುವಲ್ಲಿ ವಿಳಂಬವಾಗುವುದರಿಂದ ಬಾವಿಗಳು ಪೂರ್ತಿಯಾಗುವುದಿಲ್ಲ. ಒಂದು ವೇಳೆ ಪೂರ್ಣವಾದರೂ ಹಣ ಬಿಡುಗಡೆ ಮಾಡುವುದಿಲ್ಲ. ಬಾವಿ ಪೂರೈಸಿದ ನಂತರವು ಅಂತಿಮ ಪ್ರಮಾಣ ಪತ್ರ ಅವರಿಗೆ ಕೊಡುವುದಿಲ್ಲ. ಇದರಿಂದ ರೈತರಿಗೆ ಸಾಕಷ್ಟು ತೊಂದರೆಯಾಗುತ್ತಿದೆ.

ಬಡವರಿಗೆ ಭೂಮಿ ಹಂಚಿಕೆ (29–11–1972) :

ವಿ.ಎನ್. ಪಾಟೀಲರು ಭೂಮಿ ಹಂಚಿಕೆ ಬಗ್ಗೆ ಮಾತನಾಡುತ್ತಾ, ಎಷ್ಟೇಷ್ಟು ಜಮೀನನ್ನು ಹಂಚಿದ್ದಾರೆ ? ನಾನು ಸುಮ್ಮನೆ ಮಾತನಾಡುವುದಿಲ್ಲ. ಕಲ್ಲು ಎಸೆಯಬೇಕಾದರೆ ನಾನು ಗಾಜಿನ ಮನೆಯಲ್ಲಿ ಕುಳಿತುಕೊಳ್ಳುವುದಿಲ್ಲ. ಸರ್ಕಾರ ತನ್ನ ಹತ್ತಿರದಲ್ಲಿರುವ ಜಮೀನನ್ನು ರೈತರಿಗೆ ಹಂಚಿ ಬಿಡಿ. ಜಿಲ್ಲೆಯಲ್ಲಿ ಯಾವ ಜಮೀನು ಖಾಲಿಇದೆಯೋ ಆ ಜಮೀನಿನಲ್ಲಿ ಕೆಂಪು ಬಾವುಟ ಹಾರಿಸಿ ರೈತರಿಗೆ ಹಂಚಿ ಬಿಟ್ಟಿದ್ದೇವೆ. ಆದರೆ ಆ ಜಮೀನು ಅವರ ಹೆಸರಿನ ಮೇಲೆ ಮಂಜೂರಿ ಆಗಿಲ್ಲ. ಇಪ್ಪತ್ತು ವರ್ಷಗಳಿಂದ ಆ ಜಮೀನನಲ್ಲಿ ಕೆಂಪು ಬಾವುಟ ಹಾರುತ್ತಿದೆ. ಆ ಜಮೀನು ಅವರಿಗೆ ಕೊಟ್ಟು ಬಿಡಿ. ಎರಡು ಎಕರೆ ಆಗಲಿ ಅಥವಾ ಒಂದೇ ಎಕರೆಯಾಗಲಿ ಜಮೀನು ಅವರ ಹೆಸರಿಗೆ ಮಾಡಬೇಕು ಎಂದು ಪ್ರತಿಪಾದಿಸಿದರು.

ಬೀದರನಲ್ಲಿ ಕೈಗಾರಿಕೆಗಳ ಅವಶ್ಯಕತೆ :

ಶಾಸಕ ವಿ.ಎನ್. ಪಾಟೀಲರು : ಕೈಗಾರಿಕೆ ಸಚಿವರಾದ ಎಸ್.ಎಂ. ಕೃಷ್ಣರವರೆ, ಬೀದರನಲ್ಲಿ ಸಣ್ಣ ಕೈಗಾರಿಕಾ ಘಟಕಗಳು ಸ್ಥಾಪಿಸುವ ಸಾಧ್ಯತೆ ಇದೆಯೆ ? ಒಂದು ವೇಳೆ ಸಾಧ್ಯತೆ ಇದ್ದರೆ ಯಾವ ಪ್ರಕಾರದ ಕೈಗಾರಿಕೆಗಳನ್ನು ಇಲ್ಲಿ ಸ್ಥಾಪಿಸುವ ಸಾಧ್ಯತೆ ಇದೆ ? ಮುಂದಿನ ವರ್ಷ ಸ್ಥಾಪಿಸುವ ಕಾರ್ಯ ಪ್ರಾರಂಭವಾಗಲಿದೆಯೆ ? ತಾಲೂಕಾ ಸ್ಥಳಗಳಲ್ಲಿಯೂ ಕೂಡ ಈ ಘಟಕಗಳನ್ನು ಸ್ಥಾಪಿಸಲಾಗುತ್ತದೆಯೆ ? ಎಂದು ಪ್ರಶ್ನಿಸಿದರು.

(ಖಾಸಗಿ ಗುತ್ತಿಗೆಗೆ ಕಡಿವಾಣ)

ದೇಶದ ಉದ್ಧಾರಕ್ಕಾಗಿ ಮತ್ತು ಹಳ್ಳಿಗಳ ಏಳಿಗೆಗಾಗಿ ಖಾಸಗಿ ಗುತ್ತಿಗೆಗಳಿಗೆ ಕಡಿವಾಣ ಹಾಕಿ ಸರ್ಕಾರಿ ವರ್ಕರ್ಸ್‌ಗಳನ್ನು ನೇಮಕ ಮಾಡಿರಿ. ಅರಮನೆಗಳಂಥ ಮನೆಗಳನ್ನು ಕಟ್ಟಿಕೊಂಡು ವಿಶಾಲವಾದ ಜಾಗಾ ಹಿಡಿದುಕೊಂಡು ಗುತ್ತಿಗೆದಾರರು ಸರ್ಕಾರಿ ಹಣವನ್ನು ಪೋಲು ಮಾಡುತ್ತಿದ್ದಾರೆ. ಇಂಥವರನ್ನು ತೆಗೆದು ಹಾಕಿ ಸರ್ಕಾರಿ ನೌಕರರಿಗೆ ಕೆಲಸ ಕೊಟ್ಟರೆ ಒಳ್ಳೆಯ ರೀತಿಯ ಕೆಲಸವಾಗುವುದಲ್ಲದೆ ಸರ್ಕಾರಕ್ಕೂ ಹಣವೂ ಉಳಿತಾಯವಾಗುತ್ತದೆ. ಈ ರೀತಿ ದೇಶದ ದುಡ್ಡನ್ನು ಹಾಳು ಮಾಡುವುದಕ್ಕಿಂತ ನಿರುದ್ಯೋಗಿಗಳಾದ ಜನರಿಗೆ ಉದ್ಯೋಗವನ್ನು ಒದಗಿಸಿ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೇಳುತ್ತೇನೆ. ಇದರಿಂದ ಸರ್ಕಾರಕ್ಕೆ ಸಾಕಷ್ಟು ಲಾಭವಾಗುವುದಲ್ಲದೆ ಖಾಸಗಿ ಗುತ್ತಿಗೆದಾರರಿಂದಾಗುವ ಕಳಪೆ ಕೆಲಸಗಳ ಬದಲಾಗಿ ಒಳ್ಳೆಯ ಕೆಲಸಗಳಾಗುತ್ತವೆ. ಇದರಿಂದ ದೇಶಕ್ಕೆ ಲಾಭವಾಗುತ್ತದೆ.

ಪೋಲಿಸರು ಕೇಳಿದ ಮಾಮೂಲು :

ಮದ್ರಾಸಿನಲ್ಲಿ (ಈಗ ಚನ್ನೈ ಎಂದು ಬದಲಾಗಿದೆ) ಕೈಗಾರಿಕಾ ಜಾತ್ರೆ ನಡೆಯುತ್ತಿತ್ತು. ಅದನ್ನು ನೋಡುವುದಕ್ಕೆಂದು ಹೋಗಿದ್ದರು.

ರಾತ್ರಿ 3.30ಕ್ಕೆ ಹಿಂತಿರುಗಿ ಬರುತ್ತಿರುವಾಗ ನಾಗತಿಹಳ್ಳಿ ಹತ್ತಿರ ಬಂದಾಗ, ಪೋಲಿಸ್ ಹೆಡ್‌ಕಾನ್ಸಟೇಬಲ್ ಮತ್ತು ಪೋಲಿಸ್‌ರು ಮಾಮೂಲು ಕೇಳಿದರು. ಬಸ್ಸು ಅರ್ಧ ತಾಸು ಅಲ್ಲಿಯೆ ನಿಂತಿತು. ಒಳಗಿದ್ದ ಶಾಸಕರು ವಿಧಾನಸೌಧಕ್ಕೆ ಫೋನ್ ಮಾಡಿದರು. ಕೂಡಲೇ ಕ್ರಮ ಕೈಕೊಳ್ಳುವ ಮೂಲಕ ಬಸ್ಸು ಬಿಡಲಾಯಿತು. ಅಯೋಗ್ಯ ವರ್ತನೆ, ಲಂಚ ಕೇಳಿದ್ದಕ್ಕಾಗಿ ಆ ಪೋಲಿಸರ ಮೇಲೆ ಕ್ರಮ ಕೈಕೊಳ್ಳಲಾಯಿತು ಎಂದು ವಿ.ಎಸ್. ಪಾಟೀಲರು ಹೇಳಿದರು.

* * * * *

ಸದಭಿಪ್ರಾಯ

ಸಮತೆಯ ಸಂತ: ಕಾಮ್ರೇಡ್ ವಿ.ಎನ್. ಪಾಟೀಲ

– ರಂಜಾನ್ ದರ್ಗಾ

ಕಾಮ್ರೇಡ್ ವಿ.ಎನ್. ಪಾಟೀಲರ ನೆನಪು ಹೋರಾಟ ಮತ್ತು ತ್ಯಾಗದ ಸಂಗಮವಾಗಿ ನನ್ನ ಮನದಲ್ಲಿ ಉಳಿದುಕೊಂಡಿದೆ. ನೋವು ಮರೆತು ಸದಾ ಸಮಾಜದ ನೆಮ್ಮದಿಗಾಗಿ ಕ್ರಿಯಾಶೀಲರಾಗುತ್ತಿದ್ದ ಅವರು ನನಗೆ ಯಾವಾಗಲೂ ಕಮ್ಯೂನಿಸ್ಟ್ ಪಕ್ಷದ ಆದರ್ಶ ಪುರುಷರಾಗೇ ಕಾಣುತ್ತಿದ್ದರು. ಅವರ ನೆನೆಪೇ ಆಹ್ಲಾದಕರವಾದುದು. ಅವರಿಂದಾಗಿ ಮೀನಕೇರಾ ಗ್ರಾಮ ನನ್ನ ಮನದಲ್ಲಿ ಒಂದು ರೂಪಕದ ಹಾಗೆ ನಿಂತಿದೆ. ಭಾರತ ಕಮ್ಯೂನಿಸ್ಟ್ ಪಕ್ಷದ ಸಭೆ ಸಮಾರಂಭಗಳಲ್ಲಿ ಅವರ ಕ್ರಾಂತಿಕಾರಿ ಶೈಲಿಯ ಉರ್ದು ಭಾಷಣ ಕೇಳುವುದೇ ಒಂದು ಸೊಬಗು. ಅವರ ಎತ್ತರದ ನಿಲುವಿನ ಕಪ್ಪುದೇಹ ಬಿಳಿಬಟ್ಟೆಯಲ್ಲಿ ಆಕರ್ಷಕವಾಗಿ ಕಾಣುತ್ತಿತ್ತು. ನಾವೆಲ್ಲ ಯುವಕರು ಅವರ ಮಾತಿಗೆ ರೋಮಾಂಚನಗೊಳ್ಳುತ್ತಿದ್ದೆವು. ಅವರ ಮಾತು ಕೇಳುವಾಗ ಕಮ್ಯೂನಿಜಂ ಒಂದು ಮಹಾಕಾವ್ಯದ ಹಾಗೆ ನನ್ನ ಮನದಾಳದಲ್ಲಿ ಮೂಡುತ್ತಿತ್ತು. ಆ ತಾರುಣ್ಯದಲ್ಲಿ ನನ್ನಂಥ ಅನೇಕರಿಗೆ ಕಮ್ಯೂನಿಜಂ ಒಂದು ನಿರಂತರ ನಶೆಯಾಗಿತ್ತು. ನನ್ನ ಸುತ್ತೆಲ್ಲ ಕಮ್ಯೂನಿಜಂನ ಪ್ರಭಾವಳಿ ಇದ್ದ ಹಾಗೆ ಅನಿಸುತ್ತಿತ್ತು. ಆ ಗುಂಗು ನನ್ನ ಜೀವನದ ಅತ್ಯಂತ ಮಹತ್ವದ ಕ್ಷಣ. ಕಾಮ್ರೇಡ್ ವಿ.ಎನ್. ಪಾಟೀಲ, ಕಾಮ್ರೇಡ್ ಶ್ರೀನಿವಾಸ ಗುಡಿ, ಕಾಮ್ರೇಡ್ ಎಸ್. ಆರ್. ಭಟ್, ಕಾಮ್ರೇಡ್ ಬಿ.ವಿ. ಕಕ್ಕಿಲಾಯ, ಕಾಮ್ರೇಡ್ ಯು.ಎಸ್. ವೆಂಕಟರಾಮನ್, ಕಾಮ್ರೇಡ್ ಪಂಪಾಪತಿ, ಕಾಮ್ರೇಡ್ ಸಿ.ಬಿ. ಪೊನ್ನಯ್ಯ ಮುಂತಾದ ಮಹಾನ್ ವ್ಯಕ್ತಿಗಳ ಸಂಪರ್ಕದಿಂದಾಗಿ ಕಮ್ಯೂನಿಜಂ ನಿಜವಾಗಿಯೂ ಮಾನವ

ವಿಮೋಚನೆಯ ಮಾರ್ಗ ಎಂಬುದು ನನಗೆ ಮನದಟ್ಟಾಯಿತು. ಇವರೆಲ್ಲ ನನಗೆ ನಿಜವಾದ ಸಂತರ ಹಾಗೆಯೆ ಕಾಣುತ್ತಿದ್ದರು.

ಕಾಮ್ರೇಡ್ ವಿ.ಎನ್. ಪಾಟೀಲರನ್ನು ನಾನು ಮೊದಲ ಬಾರಿಗೆ ನೋಡಿದ್ದು 40 ವರ್ಷಗಳ ಹಿಂದೆ ಹುಬ್ಬಳ್ಳಿಯಲ್ಲಿ ನಡೆದ ಭಾರತ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸಮ್ಮೇಳನದಲ್ಲಿ. ಕಾಮ್ರೇಡ್ ನೀಲಂ ರಾಜಶೇಖರ ರೆಡ್ಡಿಯವರಂಥ ಪಕ್ಷದ ರಾಷ್ಟ್ರೀಯ ನಾಯಕರನ್ನು ನೋಡಿದ್ದು ಕೂಡ ಅಲ್ಲಿಯೆ. (ನಾನು ಬಾಲಕನಾಗಿದ್ದಾಗ ವಿಜಾಪುರದ ರೇಡಿಯೋ ಮೈದಾನದಲ್ಲಿ ಸಿ.ಪಿ.ಐ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಸಿ. ರಾಜೇಶ್ವರರಾವ್ ಅವರ ಭಾಷಣ ಕೇಳಿ ಪ್ರಭಾವಿತನಾಗಿದ್ದೆ. ಬಂಡವಾಳಶಾಹಿಗಳಿಂದಾಗಿ ದೇಶದ ಜನ ಇಲಿಗಳನ್ನು ತಿಂದು ಬದುಕುವ ಪರಿಸ್ಥಿತಿ ಬರುವುದೆಂದು ಅವರು ಹೇಳಿದ್ದು ಇಂದಿಗೂ ನನಗೆ ನೆನಪಿದೆ. ಅದು ನನಗೆ ಕಮ್ಯೂನಿಜಂನ ಮೊದಲ ಪಾಠವಾಗಿತ್ತು.) ನನ್ನ ಬದುಕಿನ ಬಗ್ಗೆ ನನಗೆ ಬಹಳ ಹೆಮ್ಮೆ ಇದೆ. ಏಕೆಂದರೆ ಬಾಲ್ಯದಲ್ಲೇ ನಾನು ಇಂಥ ಮಾನವೀಯತೆಯ ಸಂಸ್ಕಾರ ಪಡೆದೆ. ಈ ಸಂಸ್ಕಾರದಿಂದಾಗಿಯೆ ನನಗೆ ಬುದ್ಧ, ಪೈಗಂಬರ್ ಮತ್ತು ಬಸವಣ್ಣನವರು ಹೆಚ್ಚು ಹೆಚ್ಚು ಅರ್ಥವಾಗತೊಡಗಿದರು.

ಹುಬ್ಬಳ್ಳಿಯ ಸಿ.ಪಿ.ಐ ರಾಜ್ಯಸಮ್ಮೇಳನದಲ್ಲಿ ವಿ.ಎನ್. ಪಾಟೀಲರ ಮಾತುಗಳನ್ನು ಪಕ್ಷದ ಕಾರ್ಯಕರ್ತರು ಹರ್ಷೋದ್ಗಾರಗಳೊಂದಿಗೆ ಆಲಿಸಿದರು. ನಾನಂತೂ ಪುಳಕಿತಗೊಂಡಿದ್ದೆ. ನೋಡುವಲ್ಲಿ ಅವರದು ರಾಜಗಾಂಭೀರ್ಯ. ಆದರೆ ಮಾತನಾಡಿಸಿದಾಗ ಕಂಡದ್ದು ಮೃದು ಸ್ವಭಾವ. ಮುಂದೆ ನಾನು ಧಾರವಾಡದಲ್ಲಿ ಎಂ.ಎ. ಮುಗಿಸಿ ನೌಕರಿ ಹಿಡಿದು ಬೆಂಗಳೂರಿಗೆ ಬಂದಾಗ ಸಂಪರ್ಕ ಇನ್ನೂ ಹೆಚ್ಚಾಯಿತು. ಪಕ್ಷದ ಕಚೇರಿಯಲ್ಲಿ ಮತ್ತು ಶಾಸಕರ ಭವನದಲ್ಲಿ ಹೆಚ್ಚಾಗಿ ಭೇಟಿಯಾಗುವ ಪ್ರಸಂಗಗಳು ಬರುತ್ತಿದ್ದವು. ಮುಂದೆ ನಾನು ಅನೇಕ ತಿಂಗಳುಗಳ ಕಾಲ, ಕಾಮ್ರೇಡ್ ಪಂಪಾಪತಿಯವರು ಶಾಸಕರಾಗಿದ್ದ ಸಂದರ್ಭದಲ್ಲಿ ಶಾಸಕರ

ಭವನದ ಅವರ ಕೋಣೆಯಲ್ಲಿರುತ್ತಿದ್ದೆ. ವಿ.ಎನ್. ಪಾಟೀಲರು ತಮ್ಮ ಊರಿನಿಂದ ಬಂದಾಗಲೆಲ್ಲ ಪಂಪಾಪತಿಯವರ ಕೋಣೆಯಲ್ಲಿ ಇರುತ್ತಿದ್ದರು. ಹೀಗಾಗಿ ಅವರ ಜೊತೆ ಮಾತನಾಡುವ ಸುಸಂದರ್ಭಗಳು ಬಹಳಷ್ಟು ಸಲ ಒದಗಿ ಬಂದವು.

ಅವರದು ಉದಾತ್ತ ಮನಸ್ಸು. ತಮ್ಮ ಬಂಧುಗಳ ಮಕ್ಕಳಿಗೂ ಒಳ್ಳೆಯ ಶಿಕ್ಷಣ ಕೊಡಿಸುವಲ್ಲಿ ಅವರಿಗೆ ಹೆಚ್ಚಿನ ಆಸಕ್ತಿ ಇತ್ತು. ಅದನ್ನು ಸಾಧಿಸಿದರು ಕೂಡ. ಕುಟುಂಬ, ಬಂಧುಬಳಗ ಮತ್ತು ಜನಸಾಮಾನ್ಯರ ಬಗ್ಗೆ ಅವರಿಗಿರುವ ಪ್ರೇಮಭಾವದಲ್ಲಿ. ಯಾವುದೇ ವ್ಯತ್ಯಾಸವಿರಲಿಲ್ಲ. ಮಕ್ಕಳ ಭವಿಷ್ಯದ ಬಗ್ಗೆ ಅವರಿಗೆ ಒಂದು ರೀತಿಯ ಕೊರಗು ಇತ್ತು. ಆದರೆ ಎಂದೂ ತೋರಿಸಿಕೊಂಡವರಲ್ಲ. ಮಗಳ ಮದುವೆ ಕುರಿತು ಬಹಳ ಆಪ್ತವಾಗಿ ಒಮ್ಮೆ ಮಾತನಾಡಿದ್ದರು. ಆಗ ಅವರು ಶಾಸಕರಾಗಿ ಇರಲಿಲ್ಲ. ಅಲ್ಲದೆ ಮಧುಮೇಹದಿಂದ ಆರೋಗ್ಯದಲ್ಲಿ ಏರುಪೇರಾಗಿತ್ತು.

ಬಹುಶಃ ಕಲಘಟಗಿಯ ಕಾಂಗ್ರೆಸ್ ಶಾಸಕರಿರಬಹುದು. ಆ ಮುಸ್ಲಿಂ ಹಿರಿಯರ ಹೆಸರು ಮರೆತುಹೋಗಿದೆ. ಅವರು ಶಾಸಕರ ಭವನದಲ್ಲಿ ವಿ.ಎನ್. ಪಾಟೀಲರು ಇದ್ದದ್ದು ತಿಳಿದು ಪಂಪಾಪತಿಯವರು ಕೋಣೆಗೆ ಬಂದು ಭೇಟಿಯಾದರು. ಪಾಟೀಲರ ಆರೋಗ್ಯದ ಬಗ್ಗೆ ಅರಿತು ನೊಂದುಕೊಂಡರು. ಅವರನ್ನು ಒತ್ತಾಯ ಮಾಡಿ ತಮ್ಮ ಕಾರಲ್ಲೇ ವೈದ್ಯರೊಬ್ಬರ ಬಳಿ ಕರೆದುಕೊಂಡು ಹೋಗಿ ಆರೋಗ್ಯ ಪರೀಕ್ಷೆ ಮಾಡಿಸಿ ರೂಮಿಗೆ ಕರೆತಂದರು. ಪಾಟೀಲರು ಬಹಳ ಮುಜುಗರದ ವ್ಯಕ್ತಿ ಇದೆಲ್ಲ ಅವರಿಗೆ ಆಪ್ತವೆನಿಸಿದರೂ ಏನೋ ಭಾರ ಹೊತ್ತವರಂತೆ ಇದ್ದರು. ಆಗ ಆ ಶಾಸಕರು ಪಾಟೀಲರ ಕೈಯಲ್ಲಿ ಮೂರು ಸಾವಿರ ರೂಪಾಯಿ ಇಡಲು ಬಂದರು. ಪಾಟೀಲರು ಇನ್ನು ಮುಜಗರ ಪಟ್ಟು ಬೇಡ ಈಗಾಗಲೇ ಇಷ್ಟೆಲ್ಲ ಖರ್ಚು ಮಾಡಿರುವಿರಲ್ಲ ಎಂದು ಹೇಳಿದರು. ಆಗ ಆ ಶಾಸಕರು ಹೇಳಿದ್ದು ಮಾರ್ಮಿಕವಾಗಿತ್ತು. ನೋಡಿ ಪಾಟೀಲರೇ ನೀವು ದೊಡ್ಡ

ನಾಯಕರು ನಿಮ್ಮ ವ್ಯಕ್ತಿತ್ವ ಶಾಸಕ ಪದವಿಗಿಂತಲೂ ಹೆಚ್ಚಿನದು. ನೀವು ಮಾಜಿ ಶಾಸಕರಾದರೂ ನನಗೂ ನಾಯಕರೇ ಆಗಿದ್ದೀರಿ. ನಿಮ್ಮ ಸೇವೆ ಮಾಡುವ ಆನಂದ ನನಗೆ ಇಂದು ಸಿಕ್ಕಿತು. ನಾಳೆ ನಾನು ಮಾಜಿ ಶಾಸಕನಾದಾಗ ಯಾರೂ ಕೇಳುವವರಿರುವುದಿಲ್ಲ. ನಾವು ಯಾವುದೇ ಪಕ್ಷದವರಿರಬಹುದು. ಪ್ರಾಮಾಣಿಕರಾಗಿರುವ ನಮ್ಮಂಥವರ ಭವಿಷ್ಯ ಒಂದೇ ತೆರನಾಗಿರುತ್ತದೆ.

ನಮ್ಮಲ್ಲಿ ಹಣವೂ ಇಲ್ಲ; ಅಧಿಕಾರವೂ ಇಲ್ಲ ಎಂದಮೇಲೆ ನಮ್ಮ ಕಡೆ ಜನರು ಹೇಗೆ ಬಂದಾರು? ಎಂದು ಹೇಳುತ್ತ ಪಾಟೀಲರ ಕೈಯಲ್ಲಿ ಹಣವನ್ನಿಟ್ಟು, ಕೈಮುಗಿದು ಗಡಿಬಿಡಿಯಲ್ಲಿ ನಡೆದೇ ಬಿಟ್ಟರು. ಪಾಟೀಲರು ಮಾನವ ಸಂಬಂಧವನ್ನು ಅನುಭವಿಸಿದರು. ಅವರು ಯಾರಿಗೂ ಏನನ್ನೂ ಕೇಳಿದವರಲ್ಲ. ಆದರೆ ಈ ಅನಿರೀಕ್ಷಿತ ಘಟನೆ ಅವರ ಮನದಾಳದಲ್ಲಿ ಅವಿಸ್ಮರಣೀಯವಾಗಿ ಉಳಿದಿರಲು ಸಾಕು.

ಒಮ್ಮೆ ಅವರ ಮಿತ್ರರೊಬ್ಬರು ರಾತ್ರಿ ಊಟಕ್ಕೆ ಕರೆದರು. ಅವರ ಮನೆ ಮೈಸೂರು ರೋಡಿನ ಕಡೆಗೆ ಇತ್ತು. ಅವರು ಮಿತ್ರಪ್ರೇಮಕ್ಕೆ ಜೋತುಬಿದ್ದು ಹೋದರು. ಅದು ಇದು ಮಾತನಾಡುತ್ತ ರಾತ್ರಿ 9 ಗಂಟೆಗೆ ಶಾಸಕರ ಭವನಕ್ಕೆ ಮರಳಿ ಬರುವುದು ನೆನಪಾಯಿತು. ಆಗ ಮೊಬೈಲು ಇರಲಿಲ್ಲ ಓಲಾದಂಥ ಟ್ಯಾಕ್ಸಿಗಳ ಸೌಲಭ್ಯವೂ ಇರಲಿಲ್ಲ. ಆಟೋದಲ್ಲಿ ಹೋಗುವುದಾಗಿ ಮಿತ್ರರಿಗೆ ತಿಳಿಸಿ ಸ್ವಲ್ಪ ದೂರದವರೆಗೆ ನಡೆಯುತ್ತ ಬಂದರು. ಆದರೆ ಆಟೊ ಸಿಗಲಿಲ್ಲ. ಅವರ ದಾರಿಯನ್ನು ಕಾಯುತ್ತ ನಾನು ಪಂಪಾಪತಿಯವರ ರೂಮಿನಲ್ಲಿದ್ದೆ. ಅವರು ರಾತ್ರಿ ಒಂದು ಗಂಟೆಗೆ ಬಂದರು. ಬಹಳ ಸುಸ್ತಾಗಿದ್ದರು. ನಿತ್ರಾಣವಾಗಿ ಕುರ್ಚಿಯ ಮೇಲೆ ಕುಳಿತರು. ನನ್ನ ಮನಸ್ಸಿಗೆ ಬಹಳ ನೋವಾಯಿತು. ರಾತ್ರಿ ಒಂದು ತುತ್ತು ಊಟ ಮಾಡುವ ನೀವು ಅಷ್ಟು ದೂರವೇಕೆ ಹೋದಿರಿ ಎಂದೆ. ಗೆಳೆಯನಿಗಾಗಿ ಎಂದರು.

ಅವರು ಶಾಸಕರ ಭವನಕ್ಕೆ ಬಂದು ಮುಟ್ಟಿದ್ದು ಒಂದು ಕಥೆಯೆ

ಆಗುತ್ತದೆ. ಬಿನ್ನಿ ಮಿಲ್ಲಿನ ಪಕ್ಕದ ರಸ್ತೆಯಿಂದ ನಡೆದುಕೊಂಡು ಶಾಸಕರ ಭವನಕ್ಕೆ ಬರುವುದು ಬಹಳ ಕಷ್ಟದ ಕೆಲಸ. ಅದೊಂದು ಮಹಾಪ್ರಸ್ಥಾನದಂತೆ. ಅವರು ಏಕಾಂಗಿಯಾಗಿ ಕೈಯಲ್ಲಿ ವಾಕಿಂಗ ಸ್ಟಿಕ್ ಹಿಡಿದುಕೊಂಡು ಬರುವಾಗ ಕತ್ತಲಲ್ಲಿ ದಾರಿ ತಪ್ಪಿ, ಪಕ್ಕದ ಬೃಹತ್ ಭಾರಿ ಉದ್ದದ ತಿಪ್ಪೆಯಲ್ಲಿ ಹೊಕ್ಕು ಕಷ್ಟಪಟ್ಟು ಹಾಗೂ ಹೀಗೂ ಮತ್ತೆ ದಾರಿ ಸೇರಿ ಶಾಸಕರ ಭವನಕ್ಕೆ ಕಾಲೆಳೆದುಕೊಂಡು ಬರುವುದರೊಳಗಾಗಿ ರಾತ್ರಿ ಒಂದು ಗಂಟೆಯಾಗಿತ್ತು.

ಪ್ರಾಮಾಣಿಕ ರಾಜಕಾರಣಿಗಳು ತಮ್ಮ ಇಳಿವಯಸ್ಸಿನಲ್ಲಿ ಎಷ್ಟೊಂದು ಕಷ್ಟಪಡುವರು ಎಂಬುದರ ಬಗ್ಗೆ ಅರಿವಿದ್ದ ನನಗೆ ಅಂದು ಬಹಳ ಹೊತ್ತಿನವರೆಗೆ ನಿದ್ರೆ ಬರಲಿಲ್ಲ. "ಮಾಜಿ ಶಾಸಕರ ಕೊನೆಯ ದಿನಗಳು" ಎಂಬ ಕವನ ಬರೆದೆ. ಆ 3 ಕವನವನ್ನು ಕಳೆದುಕೊಂಡರೂ ಅದರ ನೆನಪು ಮಾಸಿಲ್ಲ. ಪ್ರಾಮಾಣಿಕ ರಾಜಕಾರಣಿಗಳಿಗೆ ಇಂಥ ಗತಿ ಬರದೆ ಬೇರೆ ದಾರಿಯಿಲ್ಲ ಎನಿಸಿತು. ಎಷ್ಟೋ ಮರಿ ಪುಢಾರಿಗಳು ವಿಧಾನ ಸೌಧ, ಮಂತ್ರಿಗಳ ಮನೆ ಮತ್ತು ಶಾಸಕರ ಭವನದ ಮುಂದೆ ಕಾರಲ್ಲಿ ಸುತ್ತಾಡುವುದನ್ನು ನೋಡಿದ ನನಗೆ, ನನ್ನ ನಾಯಕನೊಬ್ಬ ಈ ರೀತಿ ಯಾವ ಸೌಲಭ್ಯಗಳೂ ಇಲ್ಲದೆ ಬದುಕುವದನ್ನು ನೋಡಿ ಅತೀವ ಖೇದವೆನಿಸಿತು. ನಮ್ಮ ಪಕ್ಷದ ರಾಜ್ಯಮಟ್ಟದ ನಾಯಕರು, ವಕೀಲರು ಮತ್ತು ಶಾಸಕರಾಗಿದ್ದವರು ಯಾವುದಕ್ಕೂ ಆಸೆಪಡದೆ ಬದುಕಿದ್ದು ಸಂತನ ಲಕ್ಷಣವಲ್ಲದೆ ಇನ್ನೇನು?

ಅವರು ತಮ್ಮ ತಾರುಣ್ಯದಲ್ಲಿ ಬುಲೆಟ್ ಮೋಟರ್ ಬೈಕ್ ಹತ್ತಿ ಮೀನಕೇರಾದಿಂದ ಬೆಂಗಳೂರಿನವರೆಗೆ ಬಂದವರು. ಹತ್ತಾರು ಸಹಸ್ರ ಕಾರ್ಮಿಕರ ನಾಯಕತ್ವ ವಹಿಸಿದವರು. ಸಂಪ್ರದಾಯವಾದಿ ಸಮಾಜದಲ್ಲಿ ತಮ್ಮ ಸಚ್ಚಾರಿತ್ರ ಮತ್ತು ಅಂತಃಕರಣದಿಂದ ಕೂಡಿದ ಸೇವಾ ಮನೋಭಾವದಿಂದಾಗಿ ಜನಮನವನ್ನು ಗೆದ್ದು ಕಮ್ಯೂನಿಸ್ಟ್ ಪಕ್ಷದಿಂದ ಶಾಸಕರಾಗಿ ಆಯ್ಕೆಯಾದವರು. ರಾಜಕಾರಣಕ್ಕೆ ಬಂದು ಮನೆ

ತುಂಬಿಕೊಳ್ಳದೆ ಮನೆ ಬರಿದು ಮಾಡಿಕೊಂಡವರು ನಮ್ಮ ಕಾಮ್ರೇಡ್ ವಿ.ಎನ್. ಪಾಟೀಲರು!

ಅವರು ಸೋವಿಯತ್ ದೇಶಕ್ಕೆ ಭೇಟಿ ನೀಡಿದ ಕ್ಷಣಗಳನ್ನು ಬಹಳ ಆಪ್ಯಾಯಮಾನವಾಗಿ ಹೇಳುತ್ತಿದ್ದರು. ಸೋವಿಯತ್ ದೇಶದ ಕಾಮ್ರೇಡರುಗಳಿಗಾಗಿ ಅವರು ಮೈಸೂರು ಸ್ಯಾಂಡಲ್ ಸೋಪ್ ಕಾಣಿಕೆಯಾಗಿ ಕೊಟ್ಟದ್ದು ಮತ್ತು ಅವರು ಮೆಚ್ಚಿಕೊಂಡದ್ದು ಅವರಿಗೆ ಖುಷಿ ಕೊಟ್ಟಿತ್ತು. ಅಲ್ಲಿ ಅವರು ಖರೀದಿಸಿದ ಝುನಿತ್ ಕ್ಯಾಮರಾ 20 ಅಡಿ ಮೇಲಿಂದ ಬಿದ್ದರೂ ಹಾಳಾಗಿರಲಿಲ್ಲ. ಅವರು ಸೋವಿಯತ್ ಉತ್ಪಾದನೆಗಳ ಬಗ್ಗೆ ಅಭಿಮಾನದಿಂದ ಹೇಳುತ್ತಿದ್ದರು. ನಾನು 1983ರಲ್ಲಿ ಇಸ್ಕಸ್ (ಇಂಡೋ ಸೋವಿಯತ್ ಕಲ್ಚರಲ್ ಸೊಸೈಟಿ) ಗುಡ್‌ವಿಲ್ ಡೆಲಿಗೇಷನ್ ಪ್ರತಿನಿಧಿಯಾಗಿ ಸೋವಿಯತ್ ದೇಶಕ್ಕೆ ಹೋಗುವ ಸಂದರ್ಭದಲ್ಲಿ ಮಾರ್ಗದರ್ಶನ ನೀಡಿದ್ದರು. ಅವರ ನೆನಪುಗಳು ನನ್ನ ಮನದಲ್ಲಿ ಸದಾ ಹಸಿರಾಗಿವೆ. ಕೆಲವೊಂದು ನೋವಾಗಿ ಕಾಡುತ್ತಲೇ ಇರುತ್ತವೆ. ಅವರ ಕೊನೆಯ ದಿನಗಳು ಮತ್ತು ತದನಂತರ ಅವರ ಮನೆತನದ ಪರಿಸ್ಥಿತಿಯನ್ನು ಅರಿತಾಗ ಹೃದಯ ಘಾಸಿಗೊಂಡಿತು. ಅವರ ಬದುಕು ನನಗೆ ದಾರಿದೀಪವಾಗಿದೆ.

– ರಂಜಾನ್ ದರ್ಗಾ
ಸಿದ್ಧಾರೂಢ ಕಾಲನಿ, ಮದಿಹಾಳ
ಧಾರವಾಡ – 580006
ಮೊಬೈಲ್: 9242470384

ಎ.ಎನ್. ಪಾಟೀಲರ ಬಗ್ಗೆ ಮಾಹಿತಿ ಒದಗಿಸಿಕೊಟ್ಟ ಮಹನೀಯರು :

1. ಶ್ರೀ ಪಂಚಯ್ಯ ಸ್ವಾಮಿಗಳು
2. ಶ್ರೀ ಶರಣಪ್ಪ ರೊಡ್ಡಾ ಮೀನಕೇರಿ.
3. ಶ್ರೀ ವಿಶ್ವನಾಥ ಪಾಟೀಲ ಬೇಮಳಖೇಡ.
4. ಶ್ರೀ ಸಂಗಯ್ಯ ಮರಿ ಬೇಮಳಖೇಡ.
5. ಶ್ರೀ ಸಿದ್ರಾಮಪ್ಪ ಬುಳ್ಳಾ ವಕೀಲರು ನಿರ್ಣಾ.
6. ಶ್ರೀ ಹಣಮಂತರಾವ ಮ್ಯಾನೇಜರ ಬೀದರ
7. ಶ್ರೀ ಮಲ್ಲಪ್ಪ ಕುರುಬರ ಐನೂಲಿ ತಾ॥ ಚಿಂಚೋಳಿ
8. ಶ್ರೀ ಸಿದ್ರಾಮಪ್ಪ ವಕೀಲ ಧನ್ನೂರ.
9. ಶ್ರೀ ಡಾ॥ ಮಾಣಿಕರಾವ ಧನಶ್ರೀ
10. ಶ್ರೀ ಭೀಮಣ್ಣ ಮಜಗೆ ಬೀದರ
11. ಶ್ರೀ ಡಾ. ರೇವಣಸಿದ್ದಪ್ಪ ಮೀಸೆ ಲಖಣಗಾಂವ.
12. ಶ್ರೀ ಗಣಪತರಾವ ಖೂಬಾ ಬೀದರ.
13. ಶ್ರೀ ಬಿ.ಜಿ. ಸಿದಬಟ್ಟೆ ಬೀದರ.
14. ಶ್ರೀ ಕಾಜಿ ಅರ್ಶಧ ಅಲಿ (ಸಂಪಾದಕರು ಬೀದರ ಕಿ ಆವಾಜ).
15. ಶ್ರೀ ಅಡಿವೆಪ್ಪ ಮೆಟಕಾರಿ ಬೀದರ.
16. ಶ್ರೀ ದೇಶಾಂಶ ಹುಡಗಿ (ಹಿರಿಯ ಸಾಹಿತಿ)
17. ಶ್ರೀ ಕಾಶಿನಾಥ ವಿಶ್ವಕರ್ಮ (ನಿವೃತ್ತ ಉಪನ್ಯಾಸಕರು).
18. ಶ್ರೀ ಬಾಬುರಾವ ಹೊನ್ನಾ ಕಮ್ಯುನಿಷ್ಟ ಪಾರ್ಟಿ ಕಾರ್ಯದರ್ಶಿ.
19. ಶ್ರೀ ಎಮ್.ಜಿ. ದೇಶಪಾಂಡೆ ಹಿರಿಯ ಸಾಹಿತಿಗಳು
20. ಶ್ರೀ ಭೀಮಶಾಕನ್ನಾ ಐನೂಲಿ ತಾ॥ ಚಿಂಚೋಳಿ

21. ಶ್ರೀ ಸಾಯಬಣ್ಣಾ ಹಸರಗುಂಡಗಿ ಮನ್ನಾಯಖ್ಖೇಳ್ಳಿ
22. ಶ್ರೀ ಮೆಹತಾಬ್ ಸಾಬ್ ಮನ್ನಾಯಖ್ಖೇಳ್ಳಿ.
23. ಶ್ರೀ ಯಶವಂತರಾವ ಸಾಯಗಾಂವಕಾರ್ ಸ್ವಾತಂತ್ರ್ಯ ಹೋರಾಟಗಾರ.
24. ಶ್ರೀ ಸಂಗಶೆಟ್ಟಿ ಪಾಟೀಲ ಪಾಶಾಪುರೆ.
25. ಶ್ರೀ ಎಸ್.ಎಸ್. ಪಾಟೀಲ ನಿವೃತ್ತ ಇಂಜಿನಿಯರ್ ಕಮಲಾಪೂರ.
26. ಶ್ರೀಮತಿ ರೇಣುಕಾ ಎಸ್.ಎಸ್. ಪಾಟೀಲ
27. ಶ್ರೀ ಡಾ॥ ಕಾಶಿನಾಥ ಗುಮ್ಮಾ ಬೀದರ.
28. ಶ್ರೀಮತಿ ಸುಜಾತಾ ಗುಮ್ಮಾ ಬೀದರ.
29. ಶ್ರೀ ಗುರುಪಾದಪ್ಪ ಉಪ್ಪಿನ್, ಹಿರಿಯ ಅಧಿಕಾರಿ (ನಿವೃತ್ತ)

ಪುಸ್ತಕ ದಾಸೋಹಿಗಳು



ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು



ಪೂಜ್ಯ ಶ್ರೀ ಗುರುಬಸವ ಪಟ್ಟದ್ದೇವರು

ಭಾಲ್ಕಿ ಹಿರೇಮಠ ಸಂಸ್ಥಾನ ನಿಜಾಚರಣೆಯ ಬಸವ ತತ್ವದ ಮಠ. ಕನ್ನಡದ ಮಠ. ಜೀವ ಕಾರುಣ್ಯದ ಜನಹಿತದ ಮಠ. ದೀನ ದಲಿತರ, ಬಡವರ, ಮಹಿಳೆಯರ ಏಳಿಗೆಯ ಮಠ. ಶ್ರೀಮಠದ ಪೂಜ್ಯದ್ವಯರನ್ನು ಕಂಡಾಗಲೆಲ್ಲ ತತ್ವಜ್ಞಾನದ ಗುರು ಪರಂಪರೆಯಾದ ಸಾಕ್ರೆಟಿಸ್-ಪ್ಲೇಟೋ, ಸಾಹಿತ್ಯ ಗುರು ಪರಂಪರೆಯ ಕುವೆಂಪು-ಡಾ. ಜಿ.ಎಸ್. ಶಿವರುದ್ರಪ್ಪ, ಅಧ್ಯಾತ್ಮಿಕ ಗುರು ಪರಂಪರೆಯ ರಾಮಕೃಷ್ಣ ಪರಮ ಹಂಸ-ವಿವೇಕಾನಂದರು ನೆನಪಾದಂತೆ ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು-ಪೂಜ್ಯ ಶ್ರೀ ಗುರುಬಸವ ಪಟ್ಟದ್ದೇವರು ನೆನಪಾಗುತ್ತಾರೆ. ಈ ಭಾಗದಲ್ಲಿ ಸಂಸ್ಕಾರ ಸಹಿತ ಗುಣಾತ್ಮಕ ಶಿಕ್ಷಣ ನೀಡಲು ನಿಂತ ಅವರು ಕಲ್ಯಾಣ ಕರ್ನಾಟಕ ಶೈಕ್ಷಣಿಕವಾಗಿ ಅಭಿವೃದ್ಧಿಯಾಗಬೇಕು. ಸಾಮಾಜಿಕ ಸಾಮರಸ್ಯ, ಧರ್ಮ ಸಮನ್ವಯತೆ ನೆಲೆಗೊಂಡು ಸಮ ಸಮಾಜ ನಿರ್ಮಾಣದ ಮೂಲಕ ಮತ್ತೆ ಬಸವಾದಿ ಶರಣರ ಆಶಯದ ತಳಹದಿಯ ಮೇಲೆ ಕಲ್ಯಾಣ ರಾಜ್ಯ ನಿರ್ಮಾಣವಾಗಬೇಕೆಂಬ ಕನಸು ಕಂಡು, ಅದಕ್ಕಾಗಿ ಹಗಲಿರುಳು ಶ್ರಮಿಸುತ್ತಿರುವವರು. ಬಸವ ತತ್ವ ಕುರಿತ ವಿಚಾರ ಸಂಕಿರಣ ಕಾರ್ಯಾಗಾರಗಳ ಆಯೋಜನೆ. ಕೃಷಿ ಮೇಳ, ರಾಜ್ಯಮಟ್ಟದ ಬಸವಣ್ಣನವರ ವಚನ ಕಂಠಪಾಠ ಸ್ಪರ್ಧೆ, ಮಾಸಿಕ ಶಿವಾನುಭವ ಗೋಷ್ಠಿ-ಶರಣ ಸಂಗಮ, ಅನುಭವ ಮಂಟಪ ತಿಂಗಳ ಕಾರ್ಯಕ್ರಮ, ವಚನಜಾತ್ರೆ, ಶರಣರ ಜಯಂತಿ ಹಾಗೂ ಸ್ಮರಣೋತ್ಸವಗಳ ಮೂಲಕ ಜನಮಾನಸದಲ್ಲಿ ಸಾತ್ವಿಕವಾದ ಸದಭಿರುಚಿ ಮೂಡಿಸಿ ಜನಜಾಗೃತಿ ಕಾರ್ಯ ಮಾಡುತ್ತಿದ್ದಾರೆ. ಉಚಿತ ಪ್ರಸಾದ ನಿಲಯ, ಅನಾಥ ಮಕ್ಕಳಿಗೆ ಆಶ್ರಯ, ಗೋಶಾಲೆ, ಕನ್ನಡ, ಮರಾಠಿ, ತೆಲಗು, ಹಿಂದಿಯ, ಇಂಗ್ಲೀಷನಲ್ಲಿ ಪುಸ್ತಕಗಳ ಪ್ರಕಟಣೆ. ಹೀಗೆ ಹಲವಾರು ಕಾರ್ಯಗಳ ಮೂಲಕ ಕಲೆ, ಸಾಹಿತ್ಯ, ಸಂಸ್ಕೃತಿಯ ಸಂವರ್ಧನೆಗೆ ಅಹರ್ನಿಶಿ ತೊಡಗಿಸಿಕೊಂಡ ಪೂಜ್ಯರ ಪಡೆದ ಈ ನೆಲ ಧನ್ಯವಾಗಿದೆ.



ನಿಷ್ಠುರ ಸಮ್ಯವಾದಿಯಾಗಿ, ಚುನಾಯಿತ ಜನಪ್ರತಿನಿಧಿಯಾಗಿ, ಅರ್ಪಣಾ ಭಾವದ ಸಮಾಜ ಸೇವಕನಾಗಿ, ಸೇವೆ ಸಲ್ಲಿಸಿ, ವೈಯಕ್ತಿಕ ಆಗು ಹೋಗುಗಳನ್ನು ಅನುಭವಿಸಿ, ಕೊನೆಯ ದಿನಗಳಲ್ಲಿ ಅಧ್ಯಾತ್ಮಿಕ ವೃಕ್ಷದ ನೆರಳು ಸೇರಿ, ನಂತರ ಕರೆ ಬಂದಾಗ ಕಣ್ಮರೆಯಾದ ಒಂದು ಸಾರ್ಥಕ ಬದುಕಿನ ಸತ್ಯ ಚಿತ್ರಣ ಪಂಚಾಕ್ಷರಿ ಪುಣ್ಯಶೆಟ್ಟಿ ಅವರ ಈ ಕೃತಿ. ಸುತ್ತು ಬಳಸಿಲ್ಲದ ಬರಹಕ್ಕೆ ಎತ್ತಿದ ಕೈಯಾಗಿರುವ ಆತ್ಮಿಯ ಪಂಚಾಕ್ಷರಿ ಪುಣ್ಯಶೆಟ್ಟಿಯವರಿಗೆ ತಮ್ಮ ಭಾಗದ ಆದರ್ಶ ವ್ಯಕ್ತಿಗಳನ್ನು ಆಯ್ದುಕೊಂಡು, ಅವರನ್ನು ನಾಡಿಗೆಲ್ಲ ಪರಿಚಯಿಸುವುದು ಒಂದು ಕಾಯಕವೇ ಆಗಿದೆ. ವ್ಯಕ್ತಿ ಪರಿಚಯಕ್ಕೆ ಅವರು ಮಾಡಿಕೊಳ್ಳುವ ಆಯ್ಕೆಯೇ ಎಚ್ಚರದ್ದು. ಲೋಕಕ್ಕೆ ಬೇಕಾಗಿ ಬದುಕಿದ ವ್ಯಕ್ತಿಗಳನ್ನಷ್ಟೇ ಆರಿಸಿಕೊಳ್ಳುತ್ತಾರೆ.

ಪುಣ್ಯಶೆಟ್ಟಿ ಅವರ ಇತ್ತೀಚಿನ ಅಂತಹ ಆಯ್ಕೆ ಲಿಂ. ವಿ.ಎನ್. ಪಾಟೀಲ ಅವರು. ತಮ್ಮ ನೆಚ್ಚಿನ ವ್ಯಕ್ತಿ ಪರಿಚಯದ ಈ ಕೃತಿಯಲ್ಲಿ ಬೀದರ ಜಿಲ್ಲೆಯ ಐನೋಲಿ– ಮೀನಕೇರಿ ಗ್ರಾಮಗಳ ಸಂಬಂಧದಿಂದ ಹಿಡಿದು ಅನೇಕ ಪ್ರಾಸಂಗಿಕವಾಗಿ ಪಾಟೀಲರ ಅನೇಕ ಸಮಕಾಲೀನ ವ್ಯಕ್ತಿಗಳನ್ನು ಪರಿಚಯಿಸಿದ್ದಾರೆನ್ನಬಹುದು.

ಯಾವುದೇ ಅತಿಶಯೋಕ್ತಿಯಿಲ್ಲದ ಈ ವಸ್ತುನಿಷ್ಠ ಜೀವನ ಚರಿತ್ರೆಗೆ ಮಾಹಿತಿ ಸಂಗ್ರಹಕ್ಕಾಗಿಯೇ ಪಂಚಾಕ್ಷರಿ ಪುಣ್ಯಶೆಟ್ಟಿಯವರು ಎಷ್ಟೊಂದು ಜನರನ್ನು ಭೇಟಿಯಾಗಿದ್ದಾರೆ! ಪಾಟೀಲರನ್ನು ಬಲ್ಲ ಎಷ್ಟೊಂದು ಜನರ ಅನಿಸಿಕೆಗಳನ್ನು ಸಂಗ್ರಹಿಸಿದ್ದದಾರೆ !

ಲೇಖಕರ ಪ್ರಾಮಾಣಿಕತೆ ನಿಜಕ್ಕೂ ಅಭಿನಂದನೀಯ!

ಗೊ. ರು. ಚನ್ನಬಸಪ್ಪ, ಬೆಂಗಳೂರು